ಮಂಡ್ಯ ಜಿಲ್ಲೆಯ ಜಾನಪದೀಯ ಪರಿಕರಗಳ ಸಾಂಸ್ಕೃತಿಕ ಸ್ವರೂಪ

ಕನ್ನಡ ಎಂ.ಫಿಲ್. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ

'ಎಂ. ಫಿಲ್. ನಿಬಂಧ '

ಸಂಶೋಧನಾ ವಿದ್ಯಾರ್ಥಿ

ಹೆಚ್.ಆರ್. ಕನ್ನಿಕ

ನೊಂದಣಿ ಸಂಖ್ಯೆ : ೧೮೧೨೦೧೦೩೦೦೨೯

ಮಾರ್ಗದರ್ಶಕರು

ಡಾ.ಎ.ಆರ್.ಮದನಕುಮಾರ್
ಕನ್ನಡ ಸಹ ಪ್ರಾಧ್ಯಾಪಕರು
ಮಹಿಳಾ ಸರ್ಕಾರಿ ಕಾಲೇಜು
ಮಂಡ್ಯ

ಅಧ್ಯಯನಕೇಂದ್ರ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾಕೇಂದ್ರ
(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)
ಕರ್ನಾಟಕ ಸಂಘ (ರಿ.), ಮಂಡ್ಯ

ಕನ್ನಡ ವಿಭಾಗ
ಕನ್ನಡ ವಿಶ್ವವಿದ್ಯಾನಿಲಯ
ಹಂಪಿ

೨೦೧೮-೧೯

ಮಂಡ್ಯ ಜಿಲ್ಲೆಯ ಜಾನಪದೀಯ ಪರಿಕರಗಳ ಸಾಂಸ್ಕೃತಿಕ ಸ್ವರೂಪ

ಕನ್ನಡ ಎಂ.ಫಿಲ್. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ

'ಎಂ. ಫಿಲ್. ನಿಬಂಧ '

ಸಂಶೋಧನಾ ವಿದ್ಯಾರ್ಥಿ

ಹೆಚ್.ಆರ್. ಕನ್ನಿಕ

ನೊಂದಣಿ ಸಂಖ್ಯೆ : ೧೮೧೨೦೧೦೩೦೦೨೯

ಮಾರ್ಗದರ್ಶಕರು

ಡಾ.ಎ.ಆರ್.ಮದನಕುಮಾರ್
ಕನ್ನಡ ಸಹ ಪಾಧ್ಯಾಪಕರು
ಮಹಿಳಾ ಸರ್ಕಾರಿ ಕಾಲೇಜು
ಮಂಡ್ಯ

ಅಧ್ಯಯನಕೇಂದ್ರ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾಕೇಂದ್ರ
(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)
ಕರ್ನಾಟಕ ಸಂಘ (ರಿ.), ಮಂಡ್ಯ

ಕನ್ನಡ ವಿಭಾಗ
ಕನ್ನಡ ವಿಶ್ವವಿದ್ಯಾನಿಲಯ
ಹಂಪಿ

೨೦೧೮-೧೯

ಮಾರ್ಗದರ್ಶಕರ ಪ್ರಮಾಣ ಪತ್ರ

೨೦೧೮ – ೧೯ ನೇ ಸಾಲಿನಲ್ಲಿ **ನೊಂದಣಿ ಸಂಖ್ಯೆ : ೧೮೧೨೦೧೦೬೦೦೨೯**ರ ಹಂಪಿ ವಿಶ್ವವಿದ್ಯಾಲಯದ ಎಂ. ಫಿಲ್. ಪದವಿಯ ವಿದ್ಯಾರ್ಥಿಯಾದ **ಹೆಚ್.ಆರ್.ಕನ್ನಿಕ** ಅವರು ನನ್ನ ಮಾರ್ಗದರ್ಶನದಲ್ಲಿ **"ಮಂಡ್ಯ ಜಿಲ್ಲೆಯ ಜಾನಪದೀಯ ಪರಿಕರಗಳ ಸಾಂಸ್ಕೃತಿಕ ಸ್ವರೂಪ "** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಸಂಶೋಧನಾ ನಿಬಂಧವನ್ನು ಸಿದ್ಧಪಡಿಸಿರುತ್ತಾರೆ.

ಈ ಸಂಶೋಧನಾ ನಿಬಂಧವನ್ನು ಶ್ರೀಯುತರು ಈ ಮೊದಲು ಭಾಗಶಃವಾಗಲೀ ಪೂರ್ಣವಾಗಿಯಾಗಲೀ ಬೇರಾವುದೇ ಪದವಿ ಅಥವಾ ಡಿಪ್ಲೊಮಗಳಿಗಾಗಲೀ ಒಪ್ಪಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ಮಂಡ್ಯ

ದಿನಾಂಕ: 12/11/2019

ಮಾರ್ಗದರ್ಶಕರು

(ಡಾ.ಎ.ಆರ್. ಮದನಕುಮಾರ್)

ಸಹ ಪ್ರಾಧ್ಯಾಪಕರು

ಮಹಿಳಾ ಸರ್ಕಾರಿಕಾಲೇಜು

ಮಂಡ್ಯ

ಡಾ ಎ.ಆರ್. ಮದನಕುಮಾರ್
ಕನ್ನಡ ಸಹ ಪ್ರಾಧ್ಯಾಪಕ
ಮಹಿಳಾ ಸರ್ಕಾರಿ ಕಾಲೇಜು
ಮಂಡ್ಯ-೫೭೧೪೦೧

ಸಂಶೋಧಕರ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘದ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೧೮-೧೯ ನೇ ಸಾಲಿಗೆ ಕನ್ನಡ ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **"ಮಂಡ್ಯ ಜಿಲ್ಲೆಯ ಜಾನಪದೀಯ ಪರಿಕರಗಳ ಸಾಂಸ್ಕೃತಿಕ ಸ್ವರೂಪ"** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ.ಎ.ಆರ್. ಮದನಕುಮಾರ್ ರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಯಾವುದೇ ಅಧ್ಯಾಯವನ್ನಾಗಲಿ, ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತಿದ್ದೇನೆ. ಕನ್ನಡ ವಿಶ್ವವಿದ್ಯಾನಿಲಯವು ನೀಡುವ ಎಂ.ಫಿಲ್ ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಸ್ಥಳ : ಮಂಡ್ಯ

ದಿನಾಂಕ : 12/11/2019

ಸಂಶೋಧನಾ ವಿದ್ಯಾರ್ಥಿ ಸಹಿ

(ಹೆಚ್.ಆರ್.ಕನ್ನಿಕ)

ನೋಂದಣಿ ಸಂಖ್ಯೆ : ೧೮೧೨೦೧೦೩೦೦೬

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)
ಕರ್ನಾಟಕ ಸಂಘ (ರಿ.), ಮಂಡ್ಯ


ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಪರಿವಿಡಿ

ಮಂಡ್ಯ ಜಿಲ್ಲೆಯ ಕೆಲವು ಜಾನಪದೀಯ ಪರಿಕರಗಳ ಸಾಂಸ್ಕೃತಿಕ ಸ್ವರೂಪ

ಪೀಠಿಕೆ

'ಜಾನಪದ' ಎನ್ನುವ ಪದ ಇಂಗ್ಲೀಷಿನಲ್ಲಿ 'Floklore' ಎಂಬುದಕ್ಕೆ ಸಮಾನಾರ್ಥಕವಾಗಿ ಬಳಸಿರುವ ಕನ್ನಡ ಪದ. 'Floklore' ಎನ್ನುವುದು Floke & Lore ಎಂಬ ಎರಡು ಪ್ರತ್ಯೇಕ ಅರ್ಥವನ್ನು ಉಳ್ಳ ಪದಗಳ ಸಯೋಗದಿಂದ ಕೂಡಿದೆ. Floke ಎನ್ನುವುದಕ್ಕೆ ಕನ್ನಡದಲ್ಲಿ ಜನಪದ ಎಂತಲೂ, Lore ಜ್ಞಾನ ಎಂತಲೂ ಇದೆ. ಜನಪದ ಜ್ಞಾನ ಈ ವಿಷಯಕ್ಕೆ ಡಾ. ಹಾ.ಮಾ. ನಾಯಕ ಅವರು ಜಾನಪದ ಎಂಬ ಶಬ್ದವನ್ನು ಬಳಸಿದ್ದಾರೆ. ಜನಪದ ಜ್ಞಾನವೇ ಜನಪದ ಎಂದು ಕರೆಯಬಹುದು. ಜನಪದರ ಸಾಹಿತ್ಯ, ಸಂಗೀತ, ನೃತ್ಯ, ಆಟ ಈ ಎಲ್ಲವನ್ನು ಒಳಗೊಂಡಿದ್ದೇ ಜಾನಪದವೆಂದು ಹೇಳಬಹುದು.

ಜನಪದ ಮತ್ತು ಜಾನಪದ ಎಂಬ ಶಬ್ದಗಳು ಒಂದು ಸಾಮಾಜಿಕ ವ್ಯವಸ್ಥೆಯನ್ನು ಸೂಚಿಸುತ್ತವೆ. ಪ್ರತಿಯೊಂದು ಸಮಾಜವು ತನ್ನ ಪುರಾತನರ ಸಾರವನ್ನು ಹೀರಿ ತನ್ನ ಸದ್ಯದ ಬದುಕಿಗೊಂದು ಅರ್ಥವನ್ನೂ, ತನ್ನ ಸದ್ಯದ ಸಮಸ್ಯೆಗಳಿಗೊಂದು ಪರಿಹಾರವನ್ನೂ ತನ್ನ ಭಕ್ತಿಗೊಂದು ರೂಪವನ್ನೂ ಕಲೆ ತಂತ್ರಜ್ಞಾನ ಇತ್ಯಾದಿಗಳ ಬೆಳವಣಿಗೆಯನ್ನೂ ಸಾಮುದಾಯಿಕವಾಗಿ ನಿರ್ವಹಿಸುತ್ತದೆ. ಇದು ಯಾವುದೇ ಅಧಿಕಾರದ ಸಂಪ್ರದಾಯದ ಪೋಷಣೆಯಿಲ್ಲದೇ ತನ್ನಿಂದ ತಾನೇ ಹರಿದು ಒಂದು ಮಣ್ಣಿನ ಸಂಸ್ಕೃತಿಯ ಸಾರವಾಗಿ ಜಾನಪದ ಎನ್ನಿಸಿ ಕೊಂಡಿದೆ.

ತಲೆಮಾರಿನಿಂದ ತಲೆಮಾರಿಗೆ ಅದು ಸಮುದಾಯದ ಸೃಷ್ಠಿಯಾಗಿ ಬರುವಾಗ ಅದರ ಮೂಲ ಕರ್ತೃ ಕಣ್ಮರೆಯಾಗಿ ಅದು ಸಮುದಾಯದ ಸ್ವತ್ತಾಗಿ ಉಳಿಯುತ್ತದೆ. ಅಂದರೆ ನಿರಂತರವಾಗಿ ಸಾಮೂಹಿಕ ಪುನರ್ ಸೃಷ್ಟಿಗೆ ಒಳಗಾಗುತ್ತಲೇ ಇರುತ್ತದೆ. ಬದುಕಿನ ಸೂಕ್ಷ್ಮ ಸಂಗತಿಗಳನ್ನು ಜಾನಪದ ಒಳಗೊಂಡಿರುತ್ತದೆ. ಜನತೆಯ ಸರ್ವತೋಮುಖ ಅಭಿವೃದ್ಧಿ ಇಲ್ಲದೆ. ಜನಪದರ ಬದುಕಿನ ಸಾವಿರಾರು ಸಂಗತಿಗಳು ಜಾನಪದದಲ್ಲಿ ಹಾಸು ಹೊಕ್ಕಾಗಿ ಸೇರುತ್ತದೆ. ಪ್ರಾಯಶಃ ಜಾನಪದದಷ್ಟು ವ್ಯಾಪಕ ಮತ್ತು ವಿಶಾಲವಾದದ್ದು ಮತ್ತೊಂದಿಲ್ಲ. ಜಾನಪದ ಮೂಲಕಃ ಪರಂಪರಾನುಗತವಾಗಿ ಬಂದ ಜ್ಞಾನ. ಇದು ಸಮಷ್ಠಿ ಕೃತವಾಗಿದೆ. ಎಲ್ಲಿಯವರಿಗೆ ಜಗತ್ತಿನಲ್ಲಿ ಸಾಮಾನ್ಯವರ್ಗ ಅಸ್ಥಿತ್ವದಲ್ಲಿರುತ್ತದೆಯೋ ಅಲ್ಲಿಯವರಿಗೆ ಜಾನಪದ ತಾನೆ ತಾವಾಗಿ ಉಳಿದು ಬರುತ್ತದೆ.

ಜಾನಪದ ಎಲ್ಲ ವರ್ಗಗಳಲ್ಲಿ ಕಂಡು ಬಂದರೂ ಅದು ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿಲ್ಲ. ಪ್ರತಿಯೊಂದು ರಾಷ್ಟ್ರದಲ್ಲಿಯೂ ಅರಣ್ಯಸಂಪತ್ತಿನಂತೆ, ಖನಿಜ ಸಂಪತ್ತಿನಂತೆ, ಜಲಸಂಪತ್ತಿನಂತೆ, ಜಾನಪದ ಸಂಪತ್ತೂ ಮುಖ್ಯವಾದುದೇ. ಮನುಷ್ಯನ ಬದುಕಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿ ತಲೆ-ತಲೆಮಾರುಗಳಿಂದ ಬಂದಿರುವ ಮೌಖಿಕ ಪರಂಪರೆಯಲ್ಲಿ ಸಂಬಂಧ ಜ್ಞಾನವೇ ಜಾನಪದ. ಜಾನಪದ ಎಂದರೇನು? ಎಂಬುದರ ಕುರಿತು ಭಾರತೀಯ ಪಾಶ್ಚಾತ್ಯ ಹಾಗೂ ವಿದೇಶಿ ವಿದ್ವಾಂಸರು ವ್ಯಾಖ್ಯಾವನ್ನು ನೀಡಲು ಪ್ರಯತ್ನಿಸಿದ್ದಾರೆ. ಅವುಗಳನ್ನು ಈ ಕೆಳಗಿನಂತೆ ನೋಡಬಹುದು.

ಆಂಡ್ರೋಲಾಂಗ್

"ಜನಾಂಗಗಳ ಪಳೆಯುಳಿಕೆಗಳನ್ನು ಸಮಗ್ರಹಿಸಿ ಅಧ್ಯಯನ ಮಾಡುವ ವಿಜ್ಞಾನ. ಜನ ಜೀವನದಲ್ಲಿ ಇಂದಿಗೂ ಕಂಡು ಬರುವುದು. ಆದರೆ ಈ ಕಾಲದಲ್ಲಿ ಕತೆಗಳನ್ನು ನಂಬಿಕೆಗಳನ್ನು ವಿಚಾರಗಳನ್ನು ಕುರಿತು ವಿಜ್ಞಾನ ಅಧ್ಯಯನ ಮಾಡುತ್ತದೆ. ಸಮಾಜದ ಮುಂತಾದವುಗಳ ಮೊತ್ತವೇ ಜಾನಪದ." ಎಂದು ವಿವರಿಸುತ್ತದೆ.

ಎಡ್ವಿನ್ ಸಿಡ್ನಿ ಹಾರ್ಟಲ್ಯಾಂಡ್

"ಜಾನಪದ ಎನ್ನುವುದು ಸಂಪ್ರಾದಯದ ಪ್ರಜ್ಞೆ, ಅಂದರೆ ಪರಂಪರಾಗತ ಜ್ಞಾನವು ನೆನಪಿನ ರೂಪದಲ್ಲಿ ಕ್ರಿಯಾರೂಪದಲ್ಲಿ ಸಾಗಿಬರುವ ಪ್ರಕ್ರಿಯೆ"ಯನ್ನು ಹಾರ್ಟಲ್ಯಾಂಡ್ ಸಂಪ್ರದಾಯ ಎಂದೇ ಗುರುತಿಸಿರುವರು. ಅಂದರೆ ಜಾನಪದವು ಸಂಸ್ಕೃತಿಯ ವಾಹಕವಾಗಿದ್ದು ಅದು ಹೊಸ ತಲೆಮಾರಿಗೆ ಸಂಪ್ರದಾಯಿಕ ಪ್ರಜ್ಞೆ ಮೂಡಿಸುತ್ತದೆ. ಜ್ಞಾನದ ಅರಿವನ್ನು ಕ್ರಿಯಾರೂಪದಲ್ಲಿ ಅನುಭವವನ್ನು ನೀಡುತ್ತದೆ ಎಂಬುದು ಇದರ ಅರ್ಥವಾಗಿದೆ.

ಡಬ್ಲ್ಯು ವೊಗೆಲಿನ್

"ಮೌಖಿಕ ಸಂಪ್ರದಾಯದಲ್ಲಿ ಸಾಗಿಬಂದ ಯಾವುದೇ ಪರಂಪರಾನುಗತ ವಿಷಯವಾಗಿರುವ ಪದ್ಯ ಮತ್ತು ಗದ್ಯ ವಿಷಯವಾಗಿರಲಿ ಅದುವೇ ಜಾನಪದ" ಎನ್ನುತ್ತೇವೆ. ಈತ ಜಾನಪದ ಮೂಲಗುಣ ಮೌಖಿಕ ಪ್ರಸರಣೆ loral transmission ಎಂದು ಸ್ಪಷ್ಟಪಡಿಸಿದ್ದಾರೆ.

ಜಾರ್ಜ್ ಮೇರಿಯಸ್

"ಯಾವಾಗ ಹಿಂದಿನದಾದ ಜ್ಞಾನ, ಅನುಭವ, ಜಾಣ್ಮೆ, ನೈಪುಣ್ಯ, ಹವ್ಯಾಸಗಳು ಮತ್ತು ಅನುಸರಣೆಗಳು ಹಳೆಯ ತಲೆಮಾರಿನಿಂದ ಹೊಸ ತಲೆಮಾರಿಗೆ ಮಾತಿನ ಮೂಲಕ ಹಸ್ತಾಂತರಗೊಳಿಸುತ್ತವೆಯೋ ಇವು ಪುಸ್ತಕ ಅಚ್ಚು ವಿಷಯಗಳು ಆಗಿರುವುದಿಲ್ಲವೋ ಅಲ್ಲಿ ನಾವು ಜಾನಪದವನ್ನು ಕಾಣುತ್ತೇವೆ." ಎಂಬ ವಿಶ್ಲೇಷಣೆಯನ್ನು ಮಾಡಿರುತ್ತಾರೆ.

ಭಾರತೀಯ ವಿದ್ವಾಂಸರ ವ್ಯಾಖ್ಯಾನಗಳು

ಹಾ.ಮಾ. ನಾಯಕ

"ಜಾನಪದ ಲಿಖಿತ ದಾಖಲೆಗಿಂತ ಜನತೆಯ ಗ್ರಂಥಸ್ಥವಲ್ಲದ ಸಾಂಪ್ರದಾಯಿಕ ಮೊತ್ತ. ಸಂಪ್ರದಾಯವನ್ನು ಕುರಿತಾದ ವಿಜ್ಞಾನ ಯಾವುದೇ ಸಮಾಜದ ವಾಚಿಕ ಪರಂಪರೆಗಳ ಕಲೆ ಮತ್ತು ನಂಬಿಕೆಗಳ ಮೊತ್ತ." ಎನ್ನುತ್ತಾರೆ.

ಜೀ.ಶಂ. ಪರಮಶಿವಯ್ಯ

"ನಾಗರಿಕತೆಗೂ ಮೂಲವಾದ ಶಿಷ್ಟ ಸಂಸ್ಕೃತಿಯಿಂದ ದೂರವಾದ ಪರಂಪರಾನುಗತವಾದ ಬೆಳವಣಿಗೆಗಳು ಪಡೆದು ಜನಸಮುದಾಯದ ವಿಶಿಷ್ಟ ಸಂಸ್ಕೃತಿಯೇ ಜಾನಪದ." ಎನ್ನುತ್ತಾರೆ.

ದೇ ಜವರೇಗೌಡ

"ಬಾಲ ಬಾಯಿಯಲ್ಲಿ ಬ್ರಹ್ಮಾಂಡವು ಅಡಗಿರುವಂತೆ ಜಾನಪದದಲ್ಲಿ ಎಲ್ಲವೂ ಅಡಗಿದೆ." ಎಂದು ತಿಳಿಸುತ್ತಾರೆ.

ಗೊ.ರು.ಚನ್ನಬಸವಪ್ಪ

"ಜನತೆಯ ನಾಲಿಗೆಯ ತೂಗು ತೊಟ್ಟಿಲಿನ ಮೇಲೆ ನರ್ತಿಸುತ್ತಾ ಜನಸಾಮಾನ್ಯರ ಸರ್ವತೋಮುಖ ಅಭಿವ್ಯಕ್ತಿಯಾಗಿದೆ." ಹೀಗೆ ಜನಪದ ವ್ಯಾಖ್ಯಾನವನ್ನು ಹಲವಾರು ವಿದ್ವಾಂಸರು ವಿಶ್ಲೇಷಿಸಿದ್ದಾರೆ.

ಕೈಗಾರಿಕಾ ಕ್ರಾಂತಿಯಾಗಿ ಸ್ಥಳೀಯ ಸಂಸ್ಕೃತಿಯ ಮೇಲೆ ಹೊಡೆತಬಿದ್ದ ಪರಿಣಾಮ ಜನಪದ ವಸ್ತುಗಳು ಕಣ್ಮರೆಯಾಗುತ್ತಿವೆ. ಇಂದಿನ ಆಧುನಿಕ ಜನರ ಬದುಕಿಗೆ ಜನಪದ ಸಂಸ್ಕೃತಿಯೇ ಮೂಲ ಆಧಾರ. ಆದರೆ ಮನುಷ್ಯ ತನ್ನ ಸಂಸ್ಕೃತಿಯ ಮೂಲ ನೆಲೆಯನ್ನೇ ಮರೆಯುತ್ತಿದ್ದಾನೆ. ಇಂತಹ ಸಮಯದಲ್ಲಿ ಜನಪದರು ಬಳಸುತ್ತಿದ್ದಂತಹ ವಸ್ತುಗಳ ಸಾಂಸ್ಕೃತಿಯ ಅರಿವು ಅಗತ್ಯ. ಜನಪದ ವಸ್ತುಗಳ ಬಗ್ಗೆ ಮುಂದಿನ ಪೀಳಿಗೆಗೂ ಅರಿವನ್ನು ಉಂಟುಮಾಡಲು ಅವರು ಬಳಸುತ್ತಿದ್ದಂತಹ ಅಮೂಲ್ಯ ವಸ್ತುಗಳನ್ನು ಸಂಗ್ರಹಿಸಿಟ್ಟು ರಕ್ಷಿಸಲಾಗುತ್ತದೆ. ಅಲ್ಲದೇ ಅವುಗಳ ಮಹತ್ವ ಹಾಗೂ ಉಪಯೋಗಗಳ ಬಗ್ಗೆ ತಿಳಿಸಲಾಗಿದೆ. ಜನಪದರು ಗೃಹ ಕೆಲಸಕ್ಕೆ ಬಳಸುತ್ತಿದ್ದಂತಹ ಸೇರು, ಪಾವು, ಮಡಿಕೆಗಳು, ರಾಗಿಕಲ್ಲು, ಒನಕೆ, ಮೊರ, ಕುಕ್ಕೆ ಮುಂತಾದ ಎಲ್ಲಾ ವಸ್ತುಗಳು ಇಂದು ಕಣ್ಮರೆಯಾಗುತ್ತಿದೆ. ಆದರೆ ಕೆಲವು ಹಳ್ಳಿಗಳಲ್ಲಿ ಮಾತ್ರ ಇವುಗಳನ್ನು ಇಂದಿಗೂ ಬಳಸುತ್ತಿರುವುದನ್ನು ನಾವು ನೋಡಬಹುದು. ವ್ಯವಸಾಯವನ್ನು ಮಾಡಲು ನಮ್ಮ ಪೂರ್ವಜರು ತಮ್ಮ ಶ್ರಮದಿಂದ ತಯಾರಿಸಿದ ಉಪಕರಣಗಳಾದ ನೇಗಿಲು, ನೊಗ, ಕುಂಟೆ, ಕೂರಿಗೆ, ಹಲುವೆ ಹೀಗೆ ಅನೇಕ ಉಪಕರಣಗಳನ್ನು ಬಳಸಿಕೊಂಡು ವ್ಯವಸಾಯವನ್ನು ಮಾಡುತ್ತಿದ್ದರು. ಆದರೆ ಇಂದು ಜನಪದರು ವೈಜ್ಞಾನಿಕ ಪದ್ಧತಿಯನ್ನು ಬಳಸಿಕೊಂಡು ವ್ಯವಸಾಯವನ್ನು ಮಾಡುತ್ತಿದ್ದಾರೆ.

ಜನಪದರು ಮುಖ್ಯವಾಗಿ ದೇವರ ಪರಿಕಲ್ಪನೆಯನ್ನು ಹೊಂದಿದ್ದರು. ದೇವರಿಗೆ ಪೂಜೆಯನ್ನು ಮಾಡುವಾಗ ಕೆಲವೊಂದು ವಸ್ತುಗಳನ್ನು ಬಳಸಿಕೊಳ್ಳುತ್ತಿದ್ದರು. ಅವುಗಳೆಂದರೆ ಗಂಟೆ, ಜಾಗಟೆ, ಶಂಖ, ದೂಪದ ಕುಂಡ, ಆರತಿ ತಟ್ಟೆ, ಕಳಸ ಮುಂತಾದ ಅನೇಕ ವಸ್ತುಗಳನ್ನು ಬಳಸಿಕೊಂಡು ದೇವರಿಗೆ ಪೂಜೆಯನ್ನು ಮಾಡುತ್ತಿದ್ದರು. ಇವುಗಳೆಲ್ಲವೂ ಇಂದು ಹೊಸ ಮಾದರಿಯಲ್ಲಿ ತಯಾರಾಗುತ್ತಿದ್ದು, ಜನರನ್ನು ಆಕರ್ಷಿಸುತ್ತಿವೆ.

ಲಂಬಾಣಿಗರಂಥಹ ಕೆಲವು ವಿಶಿಷ್ಟ ಸಮುದಾಯಗಳ ವೇಷಭೂಷಣಗಳನ್ನು ಮತ್ತು ರೈತರು ಪ್ರಾಣಿಗೆ ಶೃಂಗರಿಸುವ ಕೆಲವು ವಸ್ತುಗಳನ್ನು ಅಧ್ಯಾಯನ ಮಾಡಲಾಗಿದೆ. ಗ್ರಾಮೀಣ ಮಕ್ಕಳ ಬೌದ್ಧಿಕ ವಿಕಾಸಕ್ಕೆ ಕಾರಣವಾದ ಆಟ ಮತ್ತು ಆಟಿಕೆಗಳಾದ ಅಳುಗುಳಿಮನೆ, ದೂಡುಬಂಡಿ, ಬುಗುರಿ ಇತ್ಯಾದಿಗಳ ಪರಿಚಯವಿದೆ. ಪ್ಲಾಸ್ಟಿಕ್ ಆಟದ ವಸ್ತುಗಳು ಬಂದ ನಂತರ ಇಂತಹ ಗ್ರಾಮೀಣ ಆಟಿಕೆಗಳು ಕಣ್ಮರೆಯಾಗುತ್ತಿದೆ. ಜನಪದರ ಕಲಾ ಪರಿಕರಗಳಾದ ತಂಬೂರಿ, ಕೋಲಾಟ, ಗೆಜ್ಜೆ, ತಮಟೆಗಳು ಇತ್ಯಾದಿಗಳು ಮತ್ತು ಲೋಕವ್ಯಾಪಾರದ ಕೆಲಸಕ್ಕಾಗಿ ಬಳಸುತ್ತಿದ್ದ ಮಾಪನಗಳಾದ ತಕ್ಕಡಿ, ಚಟಕು, ಪಾವುಗಳ ಇತ್ಯಾದಿಗಳ ಪರಿಚಯವನ್ನು ತಿಳಿಯಪಡಿಸಲಾಗಿದೆ. ಆಧುನಿಕ ತೂಕ ಪದ್ಧತಿಯ ಬಳಕೆ ಸರಳ ಹಾಗೂ ನಿಖರವಾಗಿರುವ ಪರಿಣಾಮವಾಗಿ ಈ ಸಾಧನಗಳ ವ್ಯಾಪಾರ ಕಡಿಮೆಯಾಗುತ್ತಿದೆ. ಜನಪದರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಪಾರಂಪರಿಕವಾಗಿ ಅನೇಕ ವಿಧಾನಗಳನ್ನು ಅನುಸರಿಸುತ್ತಿದ್ದರು. ಗೊಟ್ಟ, ಗೊಲ್ಲು ಹೀಗೆ ಮುಂತಾದ ವೈದಕೀಯ ಪರಿಕರಣಗಳ ಮಾಹಿತಿಯನ್ನು ಅಧ್ಯಯನದಲ್ಲಿ ನೀಡಲಾಗಿದೆ.

ನಮ್ಮ ಸಮಾಜದಲ್ಲಿ ಕಮ್ಮಾರ, ನೇಕಾರ, ಬಡಗಿ, ಚಮ್ಮಾರ ಅನೇಕ ಕಸುಬುಗಳನ್ನು ಹೊಂದಿರುವ ಜನರು ಇದ್ದಾರೆ. ಈ ಕಸುಬುಗಳಿಗೆ ಪೂರಕವಾಗಿ ಬಳಸುವ ಪರಿಕರಗಳನ್ನು ಕೆಲವು ಉದಾಹರಣೆಗಳೊಂದಿಗೆ ಪರಿಚಯ ಮಾಡಲಾಗಿದೆ. ಹೀಗೆ ಜನಪದರು ಬಳಸುತ್ತಿದ್ದಂತಹ ವಸ್ತುಗಳು ಇತ್ತೀಚಿನ ದಿನಗಳಲ್ಲಿ ಕಣ್ಮರೆಯಾಗುತ್ತಿದ್ದು, ಅವುಗಳನ್ನು ಒಂದೆಡೆ ಸಂಗ್ರಹಿಸಿಟ್ಟ ಅವುಗಳ ಸ್ವರೂಪ ಹಾಗೂ ಉಪಯೋಗಗಳನ್ನು ಮುಂದಿನ ಪೀಳಿಗೆಗೆ ತಿಳಿಸಿಕೊಡುವುದು ನಮ್ಮ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಇಂದು ಅನೇಕ ವಸ್ತು ಸಂಗ್ರಹಾಲಯಗಳು ಸ್ಥಾಪನೆಗೊಂಡಿದ್ದು, ಹಿಂದಿನ ಕಾಲದ ಅನೇಕ ವಸ್ತುಗಳನ್ನು ಸಂಗ್ರಹಿಸಿಟ್ಟು ಅವುಗಳನ್ನು ರಕ್ಷಿಸುತ್ತಿವೆ. ಇತ್ತೀಚಿನ ದಿನಗಳಲ್ಲಿ ಜನಪದರು ಬಳಸುತಿದ್ದಂತಹ ಅನೇಕ ವಸ್ತುಗಳು ಆಧುನಿಕ ಸ್ಥಿತ್ಯಂತರವನ್ನು ಹೊಂದಿದ್ದು ಇದು ಜನರನ್ನು ಆಕರ್ಷಣೆಗೆ ಒಳಪಡಿಸಿದೆ. ಈ ಹಿನ್ನೆಲೆಯಲ್ಲಿ ಪುರಾತನ ಪರಿಕರಗಳನ್ನು ಒಂದೆಡೆ ಸಂಗ್ರಹಿಸಿ, ಸಂರಕ್ಷಿಸಿ, ಪ್ರದರ್ಶಿಸಿ ಆ ಮೂಲಕ ನಮ್ಮ ದೇಸೀ ಸಂಸ್ಕೃತಿಯ ಅನಾವರಣ ಮಾಡಬೇಕಾದುದು ಆದ್ಯ ಕರ್ತವ್ಯ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಇಂದಿನ ಆಧುನಿಕ ಯುಗದ ಬದುಕಿಗೆ ಜನಪದ ಸಂಸ್ಕೃತಿಯೇ ಮೂಲಾದಾರ. ಜನಪದರ ಜೀವನ ಪದ್ಧತಿ ನಮಗೆ ಬೇಕಾದುದ್ದು. ಆದರೆ ಆಧುನಿಕ ಯುಗದಲ್ಲಿ ಮನುಷ್ಯ ತನ್ನ ಸಂಸ್ಕೃತಿಯ ಮೂಲ ನೆಲೆಯ ಬೆಲೆಯನ್ನೇ ಮರೆತುಹೋಗಿದ್ದಾನೆ. ಸುಂದರ ಪರಿಸರ, ನೆಮ್ಮದಿಯ ಬದುಕು ಮರೆಯಾಗುತ್ತಿದೆ. ಇಂತಹ ಸಮಯದಲ್ಲಿ ಜನಪದರು ಬಳಸುತ್ತಿದ್ದ ವಸ್ತುಗಳು, ಅವರ ಸಂಸ್ಕೃತಿಯ ಅರಿವು ನಮಗೆ ಅಗತ್ಯವಿದೆ. ನಮ್ಮ ಜನಪದ ಸಂಸ್ಕೃತಿಯನ್ನು ಅರಿತುಕೊಳ್ಳಲು ಹಾಗೂ ಮುಂದಿನ ಪೀಳಿಗೆಗೂ ಈ ಸಂಸ್ಕೃತಿಯ ಅರಿವನ್ನು ಉಂಟು ಮಾಡಲು ಅವರು ಉಪಯೋಗಿಸುತ್ತಿದ್ದ ಅಮೂಲ್ಯ ವಸ್ತುಗಳನ್ನು ಸಂಗ್ರಹಿಸಿ ಸಂರಕ್ಷಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಜಾನಪದ ವಸ್ತುಸಂಗ್ರಹಾಲಯಗಳು ತಲೆ ಎತ್ತಿರುವುದನ್ನು ನಾವು ನೋಡಬಹುದು.

ಈ ವಸ್ತುಸಂಗ್ರಹಾಲಯಗಳಲ್ಲಿ ಜನಪದರು ಬಳಸುತ್ತಿದ್ದಂತಹ ಗೃಹೋಪಯೋಗಿ ವಸ್ತುಗಳು, ಪೂಜೆಗೆ ಸಂಬಂಧಿಸಿದ ವಸ್ತುಗಳು, ವ್ಯವಸಾಯಕ್ಕೆ ಸಂಬಂಧಿಸಿದ ವಸ್ತುಗಳು ಮುಂತಾದ ಹತ್ತು ಹಲವು ವಸ್ತುಗಳು ಸಂಗ್ರಹಗೊಂಡು ಪ್ರದರ್ಶಿತವಾಗಿವೆ. ಇಲ್ಲಿ ಪ್ರದರ್ಶಿತವಾಗಿರುವ ಅನೇಕ ವಸ್ತುಗಳು ಇಂದು ಜನರ ನಿತ್ಯ ಬಳಕೆಯಿಂದ ಮರೆಯಾಗಿವೆ. ಆಧುನಿಕತೆಯಿಂದ ಜನಪದ ಸಂಸ್ಕೃತಿ ವಿಸ್ಮತಿಗೆ ಜಾರುತ್ತಿರುವುದರಿಂದ ಇಲ್ಲಿನ ವಸ್ತುಗಳ ಉಪಯೋಗ ಕುರಿತ ವಿವರಗಳು ಮತ್ತು ವಾಸ್ತವಿಕ ಮೌಲ್ಯಗಳು ಕಾಣಸಿಗದಂತಾಗಿವೆ. ವಸ್ತುಗಳ ರಚನೆಯ ಹಿಂದಿರುವ ಕಲಾತ್ಮಕತೆ, ಬೌದ್ಧಿಕ ಚಿಂತನೆಯ ಉಪಯೋಗ ಮತ್ತು ಸಾಂಸ್ಕೃತಿಕ ಮಹತ್ವವನ್ನು ಗುರುತಿಸುವ ಉದ್ದೇಶದಿಂದ ಈ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇದರ ವ್ಯಾಪ್ತಿಯು ತುಂಬಾ ವಿಸ್ತಾರವಾದದ್ದು. ವಸ್ತುಗಳ ಇತಿಹಾಸ ಮತ್ತು ಪರಂಪರೆ ಅದರ ಉಪಯೋಗ, ರಚನಾ ಸ್ವರೂಪ, ನಂಬಿಕೆಗಳು ಹಾಗೂ ಅವುಗಳು ಆಧುನಿಕ ಸ್ಥಿತ್ಯಂತರಗೊಂಡಿವೆ ಎಂಬುದನ್ನು ತಿಳಿಸಲಾಗಿದೆ.

ಈ ಸಂಶೋಧನ ಅಧ್ಯಯನದ ಅನುಕೂಲಕ್ಕಾಗಿ ಕೆಳಗಿನಂತೆ ಅಧ್ಯಾಯಗಳನ್ನು ವರ್ಗೀಕರಿಸಿಕೊಳ್ಳಲಾಗಿದೆ. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ಹಾಗೂ ಅಧ್ಯಯನದ ಫಲಿತಗಳನ್ನು ಹೊರತುಪಡಿಸಿ ಅಧ್ಯಾಯಗಳನ್ನು ಈ ಸಂಶೋಧನಾಧ್ಯಯನ ಒಳಗೊಂಡಿದೆ. 'ಉದ್ದೇಶ ಮತ್ತು ವ್ಯಾಪ್ತಿಯು' ಈ ನಿಬಂಧದ ಸ್ವರೂಪ ಮತ್ತು ವ್ಯಾಪ್ತಿ ಪರಿಶೀಲನೆಯೊಂದಿಗೆ ನಿಬಂಧದ ರಚನೆಗೆ ಕಾರಣವಾದ ಅಂಶಗಳನ್ನು ಇತಿಮಿತಿಗಳನ್ನು ಮತ್ತು ಪ್ರಬಂಧದ ನಿರ್ವಹಣೆಯ ಕ್ರಮವನ್ನು ಒಳಗೊಂಡಿದೆ.

ಮೊದಲನೆಯ ಅಧ್ಯಾಯವು ವ್ಯವಸಾಯಕ್ಕೆ ಸಂಬಂಧಿಸಿದ ವಸ್ತುಗಳ ಕುರಿತಾದದ್ದು ಇಲ್ಲಿ ಜನಪದರು ವ್ಯವಸಾಯವನ್ನು ಮಾಡಲು ಬಳಸುತ್ತಿದ್ದಂತಹ ವಸ್ತುಗಳಾದ ನೇಗಿಲು, ನೊಗ, ಕುಂಟೆ ಇತ್ಯಾದಿ ವಸ್ತುಗಳನ್ನು ಕುರಿತು ಅವುಗಳ ರಚನೆ ಮತ್ತು ಮಹತ್ವದ ಬಗ್ಗೆ ಕುರಿತು ಚರ್ಚಿಸಲಾಗಿದೆ.

ಎರಡನೇಯ ಅಧ್ಯಾಯವು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಸಾಂಸ್ಕೃತಿಕ ಪರಿಕರಗಳಾಗಿದ್ದು, ಇವುಗಳನ್ನು ಪ್ರತ್ಯೇಕ ವಿಭಾಗಗಳನ್ನಾಗಿ ಮಾಡಿ ಚರ್ಚಿಸಲಾಗಿದೆ.

ವಿಭಾಗ ೨.೧ ರಲ್ಲಿ ಗೃಹಪಯೋಗಿ ವಸ್ತುಗಳನ್ನು ಕುರಿತದ್ದಾಗಿದ್ದು ಜನಪದರ ಗೃಹೋಪಯೋಗಿ ವಸ್ತುಗಳ ರಚನೆಯ ಹಿಂದಿರುವ ಜ್ಞಾನ ಅನುಭವ ಜನ್ಯವಾದುದು. ಇಲ್ಲಿ ಅಡುಗೆಮನೆ ಪರಿಕರಗಳು, ಮಡಿಕೆ-ಕುಡಿಕೆಗಳು ಇತ್ಯಾದಿ ವಸ್ತುಗಳನ್ನು ಕುರಿತು ಚರ್ಚಿಸಲಾಗಿದೆ.

ವಿಭಾಗ ೨.೨ ರಲ್ಲಿ ಸ್ತ್ರೀಯರು ಅಲಂಕಾರಕ್ಕಾಗಿ ಬಳಸುವ ವಸ್ತುಗಳನ್ನು ರೈತರಿಗೆ ತುಂಬಾ ಆಪ್ತವಾದ ಎತ್ತುಗಳನ್ನು ಶೃಂಗರಿಸುವ ಕೆಲವು ವಸ್ತುಗಳನ್ನೂ, ವಿಶೇಷವಾಗಿ ಲಂಬಾಣಿಗ ಜನಾಂಗದ ಮತ್ತು ಸಮುದಾಯದವರು ಬಳಸುವ ಅಲಂಕಾರಿಕ ವಸ್ತುಗಳಾದ ಅಂಗೂಟ, ಜರಿಪಟಗ, ಕಾಲುಂಗರ, ಬಳಿಯಾ ಇತ್ಯಾದಿಗಳನ್ನು ವಿಶೇಷವಾಗಿ ಪರಿಚಯ ಮಾಡಲಾಗಿದೆ.

ವಿಭಾಗ ೨.೩ ರಲ್ಲಿ ಗ್ರಾಮೀಣ ಆಟ – ಆಟಿಕೆಗಳ ಪರಿಚಯವಿದೆ. ಅಳುಗಳಿಮಣೆ, ದೂಡುಬಂಡಿ, ಬುಗುರಿ ಇಂತಹ ಅನೇಕ ಆಟಿಕೆಗಳು ಮಕ್ಕಳ ಬೌದ್ಧಿಕ ವಿಕಾಸಕ್ಕೆ ಹೇಗೆ ಕಾರಣವಾಗುತ್ತದೆ? ಎಂಬುವುದನ್ನು ಈ ವಿಭಾಗದಲ್ಲಿತಿಳಿಯಪಡಿಸಲಾಗಿದೆ.

ವಿಭಾಗ ೨.೪ ರಲ್ಲಿ ಜನಪದ ಬದುಕಿನಲ್ಲಿ ಹಾಡು ಕುಣಿತಗಳಲ್ಲಿ ಸಿಂಹಪಾಲನ್ನು ಹೊಂದಿದೆ. ಈ ವಿಭಾಗದಲ್ಲಿ ಜನಪದ ನೃತ್ಯಗಳಿಗೆ, ಹಾಡುಗಳಿಗೆ ಸಂಬಂಧಿಸಿದ ದೃಶ್ಯ ಮತ್ತು ಶ್ರವ್ಯ ಕಲೆಗಳ ಪರಿಕರಗಳನ್ನು ಪರಿಚಯಿಸಲಾಗಿದೆ.

ವಿಭಾಗ ೨.೫ ರಲ್ಲಿ ಗ್ರಾಮೀಣ ಜನರು ವಿವಿಧ ವೃತ್ತಿಪರ ಕಸುಬುಗಳನ್ನು ತಮ್ಮ ಜೀವನೋಪಾಯಕ್ಕೆ ಅವಲಂಬಿಸಿದ್ದಾರೆ. ಇಂದಿಗೂ ಸಹ ನಾವು ಗ್ರಾಮೀಣ ಬದುಕಿನಲ್ಲಿ ಕಮ್ಮಾರರು, ಬಡಗಿಗಳು, ಚಮ್ಮಾರರನ್ನು ಮುಂತಾದವರು ವೃತ್ತಿಪರ ಕಸುಬುಗಳನ್ನು ಹೊಂದಿರುವ ಜನರನ್ನು ಕಾಣಬಹುದು. ವೃತ್ತಿಪರ ಕಸುಬುಗಳಿಗಾಗಿ ಬಳಸುವ ಪರಿಕರಗಳನ್ನು ಉದಾ ಅರ, ಉಜ್ಜೋಡು, ಮೀನುಬುಟ್ಟಿ ಹೀಗೆ ಹಲವಾರು ಪರಿಕರಗಳನ್ನು ಪರಿಚಯಿಸಲಾಗಿದೆ.

ಮೂರನೆಯ ಅಧ್ಯಾಯ ಪೂಜೆಗೆ ಸಂಬಂಧಿಸಿದ ವಸ್ತುಗಳನ್ನು ಕುರಿತದ್ದಾಗಿದೆ. ಜನಪದರು ತಮ್ಮೊಳಗಿನ ಭಯದ ನಿವಾರಣೆಗಾಗಿಯೇ ಆರಾಧನೆ ಪ್ರವೃತ್ತಿ ಬೆಳಸಿಕೊಂಡರು. ಇದರಿಂದ ದೇವರಿಗೆ ಪೂಜೆ ಮಾಡುವಾಗ ಕೆಲವೊಂದು ವಸ್ತುಗಳನ್ನು ಬಳಕೆ ಮಾಡುತ್ತಿದ್ದರು. ಗಂಟೆ, ಜಾಗಟೆ, ಶಂಖ ಇತ್ಯಾದಿ ವಸ್ತುಗಳನ್ನು ಬಳಸುತ್ತಿದ್ದರು. ಇವುಗಳ ರೂಪ ಮತ್ತು ಉಪಯೋಗಗಳನ್ನು ಕುರಿತು ತಿಳಿಸಲಾಗಿದೆ.

ನಾಲ್ಕನೇಯ ಅಧ್ಯಾಯವು ವೈಜ್ಞಾನಿಕ ಪರಿಕರಗಳನ್ನು ಒಳಗೊಂಡಿದೆ. ಈ ಪರಿಕರಗಳನ್ನು ಎರಡು ವಿಭಾಗದಲ್ಲಿ ಚರ್ಚಿಸಲಾಗಿದೆ. ವಿಭಾಗ ೪.೧ ರಲ್ಲಿ ವೈದ್ಯಕೀಯ ಪರಿಕರಗಳನ್ನು ಮತ್ತು ೪.೨ ರಲ್ಲಿ ಮಾಪನಕ್ಕೆ ಬಳಸುವ ಪರಿಕರಗಳನ್ನು ಚರ್ಚಿಸಲಾಗಿದೆ. ಜನಪದರು ತಮ್ಮ ಮತ್ತು ಜಾನುವಾರುಗಳ ಆರೋಗ್ಯವನ್ನು ಕಾಪಾಡಿಕೊಳ್ಳಲು ಪಾರಂಪರಿಕವಾಗಿ ಅನೇಕ ವಿಧಾನಗಳನ್ನು ಅನುಸರಿಸುತ್ತಿದ್ದರು. ಈ ವಿಚಾರವಾಗಿ ವೈದ್ಯಕೀಯ ಪರಿಕರಗಳನ್ನು ಚರ್ಚಿಸಲಾಗಿದೆ ಮತ್ತು ಜನಪದರು ಎಣಿಸಲು, ತೂಕ

ಮಾಡಲು ಮತ್ತು ಅಳತೆ ಮಾಡಲು ಉಪಯೋಗಿಸುತ್ತಿದ್ದ ವ್ಯಾಪಾರ ಲೋಕದ ಪರಿಕರಗಳನ್ನು ಪರಿಚಯಿಸಲಾಗಿದೆ.

ಐದನೇಯಅಧ್ಯಾಯ ಜನಪದರು ಬಳಸುತ್ತಿದ್ದಂತಹ ವಸ್ತುಗಳ ಆಧುನಿಕ ಸ್ಥಿತ್ಯಂತರವನ್ನು ಕುರಿತದ್ದಾಗಿದೆ. ಸಾಮಾಜಿಕ ಬದಲಾವಣೆಯು ಪ್ರಕೃತಿಯ ನಿಯಮ. ಸಮಾಜವು ನಿಂತ ನೀರಲ್ಲ.ಸಮಾಜದಲ್ಲಿ ಆದ ಕೈಗಾರಿಕೀಕರಣ, ನಗರೀಕರಣ, ಆಧುನೀಕರಣದ ಪ್ರಭಾವದಿಂದ ಜನಪದ ವಸ್ತುಗಳ ಸ್ಥಾನವನ್ನು ಜನರನ್ನು ಆಕರ್ಷಿಸುವಂತೆ ಅನೇಕ ವಸ್ತುಗಳು ಮಾರುಕಟ್ಟೆಯಲ್ಲಿ ಬಂದಿವೆ. ಹೀಗೆ ಜನಪದ ವಸ್ತುಗಳ ಬದಲಾಗಿ ಬಂದಿರುವ ಹೊಸ ಹೊಸ ವಸ್ತುಗಳ ಕುರಿತು ಈ ಅಧ್ಯಾಯದಲ್ಲಿ ಹೇಳಲಾಗಿದೆ.

ಒಟ್ಟು ಅಧ್ಯಯನ ವ್ಯಾಪ್ತಿಯು ಜನಪದ ವಸ್ತುಗಳ ಅಧ್ಯಾಯನವನ್ನು ಒಳಗೊಂಡಿದ್ದು, ಉಪಭೋಗ ಸಂಸ್ಕೃತಿ ಶ್ರೇಷ್ಠ, ದುಡಿಮೆ ಸಂಸ್ಕೃತಿ ಕನಿಷ್ಠವೆಂದು ನೋಡುವವರಿಗೆ ಜನಪದ ಸಂಸ್ಕೃತಿ ಪರಂಪರೆಯ ತೂಕವನ್ನು ಅದರ ಅಧ್ಯಯನಗಳ ಮೂಲಕ ತಿಳಿಯಪಡಿಸಲಾಗಿದೆ. ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದ್ದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು, ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯವಾಗಿದೆ. ಜಾನಪದವು ಭೂಮಿ ತೂಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನವಾಗಿದೆ ಮತ್ತು ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ.

ಅಂತರ್ ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವು ಒಂದು ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಹೊರ ತೆಗೆಯುವ ಜವಾಬ್ದಾರಿಯು ನಮ್ಮ ಯುವ ಪೀಳಿಗೆಯ ಮೇಲಿದೆ. ಕಳೆದು ಹೋಗುತ್ತಿರುವುದರ ಕುರಿತು ಕೊರಗುವುದೇ ಹೆಚ್ಚಾಗಿದೆ. ಕರುಬುವುದನ್ನು ಬಿಟ್ಟು ಕೊರತೆಗಳನ್ನು ತುಂಬಿ ಕೊಳ್ಳುವ ಪ್ರಯತ್ನಗಳು ನಾಡಿನ ತುಂಬಾ ನಡೆಯಬೇಕಾಗಿದೆ. ನಮ್ಮ ನೆಲಮೂಲ ಸಂಸ್ಕೃತಿ, ಪರಂಪರೆಗಳು ಕಳೆದು ಹೋಗುತ್ತಿರುವ ಭೀತಿಯನ್ನು ಎದುರಿಸುತ್ತಿದೆ. ಈ ನಡುವೆಯು ದೇಸೀಜ್ಞಾನ ಪಂಪರೆಗಳನ್ನು ಉಳಿಸಿಕೊಳ್ಳುವ ಪ್ರಯತ್ನಗಳು ಅಲ್ಲಲ್ಲಿ ನಡೆದಿರುವುದು ಆಶಾದಾಯಕ ಬೆಳವಣಿಗೆ ಈ ಹಿನ್ನೆಲೆಯಲ್ಲಿ ಪೂರ್ವಿಕರು ಬಳಸಿದ ಪುರಾತನ ಪರಿಕರಗಳನ್ನು ಒಂದೆಡೆ ಸಂಗ್ರಹಿಸಿ, ಸಂರಕ್ಷಿಸಿ, ಪ್ರದರ್ಶಿಸಿ ಆ ಮೂಲಕ ನಮ್ಮ ದೇಸೀ ಸಂಸ್ಕೃತಿಯು ಅನಾವರಣ ಮಾಡಬೇಕಾದುದು ಆದ್ಯ ಕರ್ತವ್ಯವೆಂದು ನಮ್ಮನ್ನು ನಾವು ತೊಡಗಿಸಿ ಕೊಳ್ಳಬೇಕಾದ ಅಗತ್ಯತೆ ಇದೆ.

ಈ ನಿಬಂಧದ ಅಧ್ಯಾಯಗಳಲ್ಲಿ ಜನಪದ ಬದುಕಿನ ಹೃದಯದಂತಿರುವ ಬೇಸಾಯ, ಶ್ವಾಸಕೋಶದಂತಿರುವ ಮನೆ, ಧಾರ್ಮಿಕ ಮನೋಗತಿ ಸೂಚಕವಾದ ಧಾರ್ಮಿಕತೆ, ಸೌಂದರ್ಯಪ್ರಜ್ಞಾದ್ಯೋತಕವಾದ ಅಲಂಕಾರ ವಸ್ತುಗಳು, ಸಹಕಾರ – ಅವಲಂಬನ ತತ್ವದ ಸಾಕಾರ ರೂಪಿಗಳಾದ ಕಸುಬಿನ ಸಾಮಾಗ್ರಿಗಳು, ಪಾರಂಪರಿಕ ಜ್ಞಾನವಾಹಕಗಳಾದ ಆಟಿಕೆಗಳು, ಆರೋಗ್ಯವರ್ಧಕ ವೈದ್ಯಕೀಯ ಸಲಕರಣೆಗಳು, ಕಲಾವಾಸನೆಯ ಸೊಗಡಿನ ಕಲಾಪರಿಕರಗಳು, ತೂಕ ಮತ್ತು ಅಳತೆಯ ವಸ್ತುಗಳಿಗೆ ಸಂಬಂಧಿಸಿದಂತೆಯೂ ಚರ್ಚಿಸಲಾಗಿದೆ.

ಸಹಸ್ರಾರು ವರ್ಷಗಳ ಜನಪದ ಸಂಸ್ಕೃತಿಯ ಮೇಲೆ ನಾಗರಿಕತೆ ಒಂದು ಕಪ್ಪು ತೆರೆಯನ್ನು ಎಳೆಯುತ್ತಿದೆ. ಇಂತಹ ಸಂದಿಗ್ಧ ಕಾಲದಲ್ಲಿ ಮುಂದಿನ ತಲೆಮಾರಿಗೆ ಇವುಗಳ ಜನಪದ ಪರಿಚಯ ಮಹತ್ವವಾದದ್ದು, ಆದುದ್ದರಿಂದ ಸಾಂಸ್ಕೃತಿಕ ಪರಿಕರಗಳ ಬಗ್ಗೆ ತಿಳಿಸಿ ಪುರಾತನವಾದುದೆಲ್ಲ ಸಾಧುವಾದುದ್ದಲ್ಲ ಎಂದು ತಿಳಿಸುವುದು ಅಧ್ಯಯದ ಮುಖ್ಯ ಉದ್ದೇಶವಾಗಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ನಮ್ಮ ಮೇಲಿದೆ. ನಮ್ಮ ಹಿರಿಯರು ಏನು ಮಾಡುತ್ತಿದ್ದರು. ಹೇಗೆ ಬದುಕಿದರು? ನಾವೇನು ಮಾಡುತ್ತಿದ್ದೇವೆ, ಹೇಗೆ ಬದುಕುತ್ತಿದ್ದೇವೆ? ಎಂದು ತಿಳಿದುಕೊಂಡು ನಮ್ಮ ಬದುಕನ್ನು ಇನ್ನಷ್ಟು ಸುಂದರವೂ ಬಂಧುರವೂ ಆಗಿ ಕಟ್ಟಲು ವಸ್ತು ಸಂಗ್ರಾಲಯಗಳ ಸಹ್ಹಳಕೆ ತುಂಬ ಅಗತ್ಯ. ಅದು ನಿಜವಾಗಿಯೂ 'ಭೂತವನ್ನು ವರ್ತಮಾನದಲ್ಲೂ ವರ್ತಮಾನವನ್ನು ಭೂತದಲ್ಲೂ ಜೀವಂತವಾಗಿಡುವ' ಕೆಲಸ.

ಸಾಂಸ್ಕೃತಿಕ ಪರಿಕರಗಳು ಸಹಸ್ರಾರು ವರ್ಷಗಳ ಮಾನವನ ಅನುಭವದ ಸಾರವನ್ನೊಳಗೊಂಡು ಜನಪದ ಜೀವನವನ್ನು ಅರ್ಥಮಾಡಿಕೊಳ್ಳುವ ವ್ಯಾಖ್ಯಾನಿಸುವ ಮುಖ್ಯ ಸಾಧನವಾಗಿದೆ. ಪ್ರತಿಯೊಂದು ರಾಷ್ಟ್ರದಲ್ಲಿಯೂ ಅರಣ್ಯಸಂಪತ್ತಿನಂತೆ, ಖನಿಜ ಸಂಪತ್ತಿನಂತೆ, ಜಲಸಂಪತ್ತಿನಂತೆ ಜಾನಪದ ಸಂಪತ್ತೂ ಮುಖ್ಯವಾದುದೇ. ಜಾನಪದವನ್ನು ಸಂಗ್ರಹಿಸಿ, ವರ್ಗೀಕರಿಸಿ, ಅಧ್ಯಯನವನ್ನು ನಡೆಸುವುದರ ಮೂಲಕ ಅನೇಕ ಪಿಗ್ಗಗಳನ್ನು ತುಂಬಿಕೊಳ್ಳಬಹುದು.

ಕೃಷಿ ಪ್ರಧಾನ ಪರಿಕರಗಳು





ಅಧ್ಯಾಯ ೧

ಕೃಷಿ ಪ್ರಧಾನ ಪರಿಕರಗಳು

ಜಾನಪದ ಸಂಸ್ಕೃತಿ ಪ್ರಧಾನವಾಗಿ ಕೃಷಿಯ ಹಿನ್ನಲೆಯಿರುವ ಗ್ರಾಮೀಣ ಸಮುದಾಯದಿಂದ ರೂಪುಗೊಂಡಿರುವಂಥದ್ದು. ಭಾರತೀಯ ಪರಂಪರೆಯ ಮೂಲ ಬೇರುಗಳಿರುವ ಹಳ್ಳಿಗಳಲ್ಲಿ ಬದುಕುವ ಅನಕ್ಷರಸ್ಥ ಜನಸಮುದಾಯದ ಜೀವನಶೈಲಿ, ಧಾರ್ಮಿಕ ನಂಬಿಕೆಗಳು, ಮೌಲ್ಯ-ಸಿದ್ಧಾಂತಗಳು, ಆಚಾರವಿಚಾರಗಳು, ಕರಕುಶಲ ಕಲೆ ಇಂತಹ ಅನೇಕ ಸಂಗತಿಗಳು ಅವರ ಸಾಂಸ್ಕೃತಿಕ ಬದುಕನ್ನು ಪ್ರತಿಬಿಂಬಿಸುತ್ತವೆ. ಹಾಗೂ ಆಯಾ ಪ್ರದೇಶದ ಜನಪದೀಯರ ವಿಭಿನ್ನ ಮನೋಭಾವವನ್ನು ಅರ್ಥೈಸಿಕೊಳ್ಳಲು ನೆರವಾಗುತ್ತವೆ. ಹೀಗಾಗಿ ಪ್ರತಿಯೊಂದು ಸಾಂಸ್ಕೃತಿಕ ಸಮೂಹವು ತನ್ನದೇ ಆದ ಜಾನಪದೀಯ ಹಿನ್ನೆಲೆಯನ್ನು ಹೊಂದಿರುತ್ತದೆ.

ಯಾವುದೇ ಒಂದು ಜನ ಸಮುದಾಯದ ಸಂಸ್ಕೃತಿಯ ವಿಶೇಷತೆಯನ್ನು ಗುರುತಿಸಿಕೊಳ್ಳುವಾಗ ಮತ್ತು ಅರ್ಥೈಸುವಾಗ ಆ ಜನರು ತಮ್ಮ ಬದುಕಿನಲ್ಲಿ ವಿವಿಧ ಉದ್ದೇಶಗಳಿಗಾಗಿ ಬಳಸುವ ಪರಿಕರಗಳು ತಮ್ಮದೇ ಆದ ಸಾಂಸ್ಕೃತಿಕ ಮಹತ್ವವನ್ನು ಹೊಂದಿರುತ್ತವೆ ಎಂಬುದನ್ನು ಗಮನಿಸಬೇಕಾಗುತ್ತದೆ. ಆಯಾ ಪ್ರದೇಶದ ಜನಸಾಮಾನ್ಯರ ಬದುಕಿನ ಅವಿಭಾಜ್ಯ ಅಂಗಗಳೇ ಆಗಿರುವ ಪರಿಕರಗಳು ಜನಪದರ ಜೀವನವನ್ನು ರೂಪಿಸುವಲ್ಲಿ, ಸಂಸ್ಕೃತಿಯನ್ನು ಪೋಷಿಸುವಲ್ಲಿ ಮತ್ತು ನಾಗರಿಕತೆಯನ್ನು ಬೆಳೆಸುವಲ್ಲಿ ವಹಿಸುವ ಪಾತ್ರ ಅತ್ಯಂತ ಮಹತ್ವದ್ದು. ಜನಪದರಿಂದ ತಯಾರಿಸಲ್ಪಡುತ್ತಿದ್ದ ಮತ್ತು ಬಳಸಲ್ಪಡುತ್ತಿದ್ದ ವಸ್ತುಗಳು ಮೂಲಕ ಪ್ರಯೋಜನಾತ್ಮಕ ಗುಣವನ್ನು ಹೊಂದಿರುವ ಜೊತೆಗೆ ಆ ಜನರ ಸಾಂಸ್ಕೃತಿಕ ಬದುಕನ್ನು ಅರ್ಥೈಸಿಕೊಳ್ಳಲು ಬಹುಮುಖ್ಯ ಪಾತ್ರ ವಹಿಸುತ್ತದೆ.

ಕರ್ನಾಟಕದ ಸಾಂಸ್ಕೃತಿಕ ಪರಂಪರೆಗೆ ತನ್ನದೇ ಆದ ವಿಶೇಷ ಕೊಡುಗೆಗಳನ್ನು ನೀಡಿರುವ ಮಂಡ್ಯ ಜಿಲ್ಲೆಯು ಕೃಷಿಯನ್ನೇ ಪ್ರಧಾನವಾಗಿ ಆಶ್ರಯಿಸಿದ ಭತ್ತ, ಕಬ್ಬು, ರಾಗಿ ಇಲ್ಲಿನ ಪ್ರಮುಖ ಬೆಳೆಗಳಾಗಿದ್ದು, ಬೇಸಾಯ ಸಂಬಂಧಿ ಬಳಸುತ್ತಿದ್ದ ಪರಿಕರಗಳು ಈ ನೆಲದ ಭೌಗೋಳಿಕ ಸಂಸ್ಕೃತಿಯನ್ನು ಪರಿಚಯಿಸುತ್ತವೆ.

ಈ ಅಧ್ಯಾಯದಲ್ಲಿ ಮಂಡ್ಯ ನೆಲದ ಜನಪದರ ಬದುಕಿನ ಬೆನ್ನೆಲುಬಾದ ಬೇಸಾಯ ವೃತ್ತಿಗೆ ಸಂಬಂಧಿಸಿದ ಕೆಲವು ಉಪಕರಣಗಳನ್ನು ಪರಿಚಯಿಸಿದೆ. ಇಲ್ಲಿ ಆಯ್ದುಕೊಂಡ ವಸ್ತುಗಳು ಮಂಡ್ಯ ಜಿಲ್ಲೆಯ ಬೇಸಾಯ ಪದ್ಧತಿಗೆ ಅಗತ್ಯವಾದ ಸಲಕರಣೆಗಳು. ಬಿತ್ತನೆಯಿಂದ ತೊಡಗಿ ಧಾನ್ಯ ಸಂಗ್ರಹಣೆಯ ತನಕ ಜನಪದರು ಬಳಸುವ ಸಾಧನಗಳಿವೆ. ಇವುಗಳಲ್ಲಿ ಕಾಷ್ಠನಿರ್ಮಿತ, ಲೋಹ ನಿರ್ಮಿತಮತ್ತೆ ಚರ್ಮದ ವಸ್ತುಗಳು, ನಾರು-ಬಳ್ಳಿಗಳಿಂದ ತಯಾರಾದವೂ ಇವೆ.

೧. ನೇಗಿಲು



ವ್ಯವಸಾಯದಲ್ಲಿ ಮಹತ್ವದ ಸ್ಥಾನ ಪಡೆದಿರುವ ಉಪಕರಣದಲ್ಲಿ ನೇಗಿಲು ಒಂದು. ಕೊಕ್ಕೆಯಾಕಾರದ ಉಕ್ಕಿನಿಂದ ಮಾಡಿದ ಸಾಧನಕ್ಕೆ ಸುಮಾರು ಹತ್ತು ಅಡಿ ಉದ್ದದ್ದ ಒಂದು ಮರದ ತುಂಡನ್ನು ಜೋಡಿಸಿರಲಾಗುತ್ತದೆ. ಇದನ್ನು ಬಿತ್ತುವಾ ಅಥವಾ ಸಸ್ಯಗಳನ್ನು ನೆಡುವ ತಯಾರಿಕೆಯಲ್ಲಿ ಮಣ್ಣನ್ನು ಸಡಿಲಗೊಳಿಸಲು ಮತ್ತು ಮಣ್ಣಿನ ಮೇಲ್ಮೈಗೆ ತಾಜಾ ಪೌಷ್ಟಿಕಾಂಶಗಳನ್ನು ತರಲು ಬಳಸುತ್ತಾರೆ. ಶಿಲಾಯುಗ ಮತ್ತು ನವಶಿಲಾಯುಗದವರೆಗೆ ಮರದ ನೇಗಿಲು ಬಳಕೆಯಲ್ಲಿದ್ದು ಅದನ್ನು ಮನುಷ್ಯರೇ ಎಳೆದು ಉಳುಮೆ ಮಾಡುತ್ತಿದ್ದರೆಂದು ಕಾಣುತ್ತದೆ. ನಂತರದ ದಿನಗಳಲ್ಲಿ ಮಾನವ ಪ್ರಾಣಿಗಳನ್ನು ಬಳಸಿ ಅವುಗಳಿಗೆ ನೊಗವನ್ನು ಹೆಗಲಿಗೆ ಏರಿಸಿ ಅದಕ್ಕೆ ನೇಗಿಲನ್ನು ಕಟ್ಟಿ ಉಳುಮೆ ಮಾಡುತ್ತಿದ್ದರು.

ನೇಗಿಲಿನ ಬಗ್ಗೆ ಪೌರಾಣಿಕ ಕಲ್ಪನೆಗಳೂ ಇವೆ. ಭಾರತೀಯ ಪುರಾಣಗಳ ಪ್ರಕಾರ ದೇವತೆಗಳು ಭೂಲೋಕದ ಹರಿಕಾರನಾದ ಮನುವಿಗೆ ನೇಗಿಲು ಬಳಕೆಯನ್ನು ಹೇಳಿಕೊಟ್ಟರೆಂಬ ನಂಬಿಕೆಯಿದೆ. ಮಹಾಭಾರತದಲ್ಲಿ ಬಲರಾಮ ದುರ್ಯೋಧನನ ಅಹಂಕಾರವನ್ನು ಅಡಗಿಸಲು ಹಸ್ತಿನಾವತಿಯ ಭೂಮಿಯನ್ನು ನೇಗಿಲಿನಿಂದ ಸೀಳಿ ಭೂಕಂಪದಿಂದ ಭೂಮಿ ನಡುಗುವಂತೆ ಹಸ್ತಿನಾವತಿಯ ಅರಮನೆಯನ್ನು ನಡುಗಿಸುವ ಪ್ರಸಂಗ ಬರುತ್ತದೆ.

ಭೂಮಿಯನ್ನು ಉಳುಮೆ ಮಾಡಲು ಬಳಸುವ ನೇಗಿಲಿನಲ್ಲಿ ಈಚು, ಕುಳ, ಕೊಂಡಿ, ಮೇಣಿ, ಮಡಿಕೆ ಮುಂತಾದ ಅಂಗಗಳಿರುತ್ತವೆ. ಯುಗಾದಿ ಹಬ್ಬದ ಮಾರನೆಯ ದಿನ ನಿರ್ದಿಷ್ಟ ಮನೆತನದವರು ವರ್ಷದ ಮೊದಲ ಉಳುಮೆ ಮಾಡುತ್ತಾರೆ. ಇದಕ್ಕೆ 'ಹೊನ್ನಾರು, ಹಿನ್ನಾರು' ಎಂದು ಕರೆಯುತ್ತಾರೆ. 'ನೇಗಿಲು ಇದ್ದರೆ ಹೊಲ, ಹಾಲು ಇದ್ದರೆ ಗೋವು' ಎಂಬ ಗಾದೆ ಮಾತು ವ್ಯವಸಾಯದಲ್ಲಿ ನೇಗಿಲಿನ ಮಹತ್ವ ಹೇಳುತ್ತದೆ. 'ಊರ ಮುಂದೆ ನೇಗಿಲ ಹೂಡಿದರೆ ಕಂಡ ಕಂಡವರಿಗೆ ಒಂದೊಂದು ಮಾತು' ಎಂಬ ಗಾದೆಯೂ ಇದೆ.

೨. ಕುಂಟೆ



ವ್ಯವಸಾಯೋಪಕರಣಗಳಲ್ಲಿ ನೇಗಿಲಿಗೆ ಮೊದಲ ಸ್ಥಾನವಾದರೆ ಕುಂಟೆಗೆ ಎರಡನೇ ಸ್ಥಾನ. ಪೈರು ಬಂದ ನಂತರ ಭೂಮಿಯಲ್ಲಿ ಅರಗಲು ಕುಂಟೆಯನ್ನು ಬಳಸುತ್ತಾರೆ. ಇದರಲ್ಲಿ ಹೆಗ್ಗುಂಟೆ, ಎಡಕುಂಟೆ, ಹತ್ತಿಕುಂಟೆ ಎಂಬ ವಿಧಗಳಿವೆ. ರಾಗಿ, ಜೋಳ, ನವಣೆ ಮುಂತಾದ ಒಣ ಭೂಮಿಯಲ್ಲಿ ಬೆಳೆಯುವ ಬೆಳೆಗಳಿಗೆ ಒಂದು ವಿಧದ ಕುಂಟೆ ಬಳಸಿದರೆ ನೀರಾವರಿ ಭೂಮಿಯಲ್ಲಿ ಬೆಳೆಯುವ ಹತ್ತಿ, ಕಬ್ಬಿನ ಕೃಷಿಯಲ್ಲಿ ಬೇರೆ ರೀತಿಯ ರಚನೆಯುಳ್ಳ ಕುಂಟೆಯನ್ನು ಬಳಸುತ್ತಾರೆ.

೩. ಕುಡುಗೋಲು



ಒಳಹಂಚು ಹರತವಾಗಿದ್ದು, ಅರ್ಧಚಂದ್ರಾಕಾರದಂತೆ ಬಾಗಿರುವ ಕಬ್ಬಿಣದ ಕತ್ತಿ ಇದಾಗಿದೆ. ಅಲಗನ್ನು ಹಿಡಿಗೆ ಜೋಡಿಸಿ ಬಿಗಿಯಾಗಿ ಹಿಡಿದಿರುವಂತೆ ಬಿಗಿದಿರುವ ಸಣ್ಣದಾದ ಒಂದಿಂಚು ಅಗಲವಾದ ಕಬ್ಬಿಣದ ಬಳೆ ಪ್ರಧಾನವಾಗಿರುತ್ತದೆ. ಹಿಡಿಯನ್ನು ಮರದ ತುಂಡು ಅಥವಾ ಗಟ್ಟಿ ಬಿದಿರಿನಿಂದ ಮಾಡಿರುತ್ತಾರೆ. ಮನೆಯಲ್ಲಿ ತರಕಾರಿ ಕತ್ತರಿಸಲು, ಮಾಂಸ ಕತ್ತರಿಸಲು, ಗದ್ದೆಗಳಲ್ಲಿ ಭತ್ತ, ರಾಗಿ, ಕಬ್ಬು ಮೊದಲಾದ ಬೆಳೆಗಳನ್ನು ಕಟಾವು ಮಾಡಲು ಬಳಸುತ್ತಾರೆ. ಮೊಂಡಾದ ಅಥವಾ ಹರಿತವಿಲ್ಲದ ಕುಡುಗೋಲನ್ನು ಅರದಿಂದ ಉಜ್ಜುವುದರಿಂದ ಅಥವಾ ಕಲ್ಲಿನಿಂದ ಉಜ್ಜುವುದರಿಂದ ಹರಿತವಾಗುತ್ತದೆ. ಇವು ಗಾತ್ರದಲ್ಲಿ ಬೇರೆಬೇರೆಯಾಗಿಯೂ ಸಹ ಕಂಡು ಬರುತ್ತದೆ.


೪. ನೊಗ



ಯುಗ>ಜುಗ>ನೊಗ, ಯುಗ ಎಂದರೆ ಎರಡು ಎಂದರ್ಥ. ನೊಗ ಎಂಟರಿಂದ ಹತ್ತು ಅಡಿ ಉದ್ದವಿರುವ ದುಂಡನೆಯ ಮರದ ವ್ಯವಸಾಯೋಪಕರಣ. ಉಳುಮೆ ಮಾಡಲು ಬಳಸುವ ನೇಗಿಲು, ಕುಂಟೆ, ಕೂರಿಗೆ ಮುಂತಾದ ಎಲ್ಲಾ ಸಾಧನಗಳಿಗೂ ಮತ್ತು ಬಂಡಿಗೂ ಬೇಕಾಗಿರುವ ಅಗತ್ಯ ಸಾಧನ. ಉಳುಮೆ ಮಾಡುವಾಗ ನೇಗಿಲನ್ನು ಎಳೆಯಲು ನೊಗ ಮುಖ್ಯವಾಗಿ ಬೇಕು. ನೊಗದ ಮೂಲಕ ಇಡೀ ಭಾರ ಎತ್ತುಗಳ ಮೇಲೆ ನೆಲೆಯಾಗುತ್ತದೆ. ಇದನ್ನು ಎತ್ತಿನ ಕೊರಳಿಗೆ ಜೋಡಿಸಲು ಅನುಕೂಲವಾಗುವಂತೆ

ಎರಡು ಬದಿಯಲ್ಲಿ ಸಣ್ಣ ತೂತುಗಳಿರುತ್ತದೆ. ಈ ತೂತುಗಳಲ್ಲಿ ಅಗಡು ಎಂಬ ಮರದ ಗೂಟದ ಸಹಾಯದಿಂದ ಹಗ್ಗವನ್ನು ಸೇರಿಸಿ ಎತ್ತಿನ ಕೊರಳಿಗೆ ಬಿಗಿದಿರುತ್ತಾರೆ. 'ನೊಗ ಇದ್ದರೆ ನೇಗಿಲು, ತಂದೆ ಇದ್ದರೆ ಮಗ' ಎಂಬ ಗಾದೆ ಉಳುಮೆಯಲ್ಲಿ ನೊಗದ ಮಹತ್ವವನ್ನು ತಿಳಿಸುತ್ತದೆ.

೫. ಉಡಿ



ಬಿತ್ತನೆ ಮಾಡುವಾಗ ಸಣ್ಣ ಪ್ರಮಾಣದಲ್ಲಿ ಬೀಜಗಳನ್ನು ಇದರಲ್ಲಿ ಪ್ರಮಾಣದಲ್ಲಿ ಬೀಜಗಳನ್ನು ಇದರಲ್ಲಿ ತುಂಬಿಕೊಂಡು ರೈತರು ಸೊಂಟಕ್ಕೆ (ಹೊಟ್ಟೆಯಮೇಲೆ) ಕಟ್ಟಿಕೊಳ್ಳುತ್ತಾರೆ. ಇದರ ಮುಂಭಾಗದಲ್ಲಿ ಚೀಲದಂತಹ ರಚನೆ ಇದ್ದು, ಬಿತ್ತುವ ಬೀಜವನ್ನು ತುಂಬಿಕೊಳ್ಳುತ್ತಾರೆ. ಹಾಗೆ ತುಂಬಿಕೊಂಡ ಬಳಿಕ ಕೂರಿಗೆ/ರಂಟೆ/ಮಡಕೆ ಹೊಡೆಯುವವರು ಹಿಂದಿನಿಂದ ಉಡಿಯಿಂದ ಆಗಾಗ ಬೀಜಗಳನ್ನು ತೆಗೆದುಕೊಳ್ಳುತ್ತಾ ಬಿತ್ತನೆ ಮಾಡುತ್ತಾರೆ. ಕೆಲವು ಸಂದರ್ಭದಲ್ಲಿ ಕೂರಿಗೆ/ರಂಟೆ ಹೊಡೆಯುವವನು ಕೂಡಾ ಉಡಿಯನ್ನು ಬಳಸಿಕೊಂಡು ಬಿತ್ತನೆ ಮಾಡಬಹುದು. ಇದರಲ್ಲಿ ಸುಮಾರು ಮೂರು ನಾಲ್ಕು ಕೆ.ಜಿ. ಬೀಜಗಳನ್ನು ತುಂಬಿಕೊಳ್ಳಬಹುದು.

೬. ಮೆರೆದೊಣ್ಣೆ




ಭತ್ತ, ರಾಗಿ, ಜೋಳ, ಸಜ್ಜೆ, ನವಣೆ ಮುಂತಾದವುಗಳ ಪೈರುಗಳಿಂದ ಧಾನ್ಯಗಳನ್ನು ಬೇರ್ಪಡಿಸುವಲ್ಲಿ ಬಳಸುವ ಒಂದು ವಸ್ತು. ಇದನ್ನು ಒಕ್ಕಣೆಕೋಲು, ನೆರಕೋಲು, ಒಕ್ಕಲುಕೋಲು ಎಂದೂ ಸಹ ಕರೆಯುತ್ತಿದ್ದರು. ಇದು ಸುಮಾರು ಐದರಿಂದ ಆರು ಅಡಿ ಉದ್ದವಿದ್ದು, ಕಿರುಬಿದಿರು ಅಥವಾ ಮರದ ರೆಂಬೆಗಳಿಂದ ಇದನ್ನು ತಯಾರಿಸಲಾಗಿದೆ. ನೇರವಾದ ಕೋಲಿನ ತುದಿಯಲ್ಲಿ ಸ್ವಲ್ಪ ಬಾಗಿದ ಕೊಕ್ಕೆಯ ರಚನೆಯನ್ನು ಹೊಂದಿದೆ. ಒಕ್ಕಣೆ ಮಾಡುವಾಗ ಭತ್ತ, ರಾಗಿ ಮುಂತಾದವುಗಳನ್ನು ಬಡಿದಾಗ ಧಾನ್ಯಗಳು ಕೆಳಗೆ ಬೀಳುತಿತ್ತು. ನಂತರ ಈ ಮೆರೆದೊಣ್ಣೆಯ ಮೂಲಕ ಹುಲ್ಲನ್ನು ಎಳೆದುಕೊಳ್ಳುತ್ತಿದ್ದರು. ಹೀಗೆ ಧಾನ್ಯಗಳನ್ನು ಹುಲ್ಲಿನಿಂದ ಬೇರ್ಪಡಿಸುವಲ್ಲಿ ಮೆರೆದೊಣ್ಣೆಯನ್ನು ಮುಖ್ಯವಾಗಿ ಬಳಸುತ್ತಿದ್ದರು. ಇದರ ಬಳಕೆ





ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಇತ್ತೀಚಿನ ದಿನಗಳಲ್ಲಿ ಒಕ್ಕಣೆಯ ಕ್ರಿಯೆ ಬದಲಾಗಿರುವುದರಿಂದ ಇದರ ಬಳಕೆ ಕಡಿಮೆಯಾಗಿದೆ.

೭. ಮಚ್ಚುಕತ್ತಿ



ಇದನ್ನು ಕಡಿಯುವ ಕತ್ತಿ, ಮಚ್ಚು ಅಥವಾ ದೊಡ್ಡ ಕತ್ತಿ ಎಂದು ಕರೆಯುವರು. ಇದು ಕತ್ತರಿಸುವ ಮತ್ತು ಕೊಚ್ಚುವ ಸಾಧನ. ಕಬ್ಬಿಣದಿಂದ ತಯಾರಿಸಿದ ಅಗಲ ಅಲಗಿನ, ಹರಿತ ಬಾಯಿಯ ಕತ್ತಿ. ತಳದಲ್ಲಿ ಕಬ್ಬಿಣದ ನಳಿಗೆಯ ಅಥವಾ ಮರದಿಂದ ಮಾಡಿದ ಹಿಡಿ ಇರುತ್ತದೆ. ಸೌದೆ ಮರಗಳನ್ನು ಕಡಿಯಲು, ಗಿಡಗಂಟೆಗಳನ್ನು ಸವರಲು ಮತ್ತು ಬೇಕಾದ ಗಾತ್ರಕ್ಕೆ ಉದ್ದಕ್ಕೆ ಸೀಳಿ ತುಂಡು ಮಾಡಿಕೊಳ್ಳಲು ಬಳಸುತ್ತಾರೆ.

೮. ಬಾರುಕೋಲು



ಎತ್ತುಗಳನ್ನು ಉಳುವಾಗ ಅಥವಾ ಗಾಡಿ ಹೊಡೆಯುವಾಗ ಅವುಗಳಿಗೆ ಹೊಡೆಯಲು ಬಳಸುವ ಸಾಧನ. ಒಂದು ಸಣ್ಣದಾದ ಗಟ್ಟಿ ಬಿದಿರಿನ ಬೆರಳು ಗಾತ್ರದ ಕಡ್ಡಿಗೆ ತುದಿಯಲ್ಲಿ ನೂಲಿನ ಅಥವಾ ನಾರಿನ ಹಗ್ಗ ಜೋಡಿಸಿ ಆ ಹಗ್ಗದ ತುದಿಯಲ್ಲಿ ಚರ್ಮದ ಎಳೆಯನ್ನು ಕಟ್ಟಿರುತ್ತಾರೆ. ಕೆಲವೊಮ್ಮೆ ತಂತಿಯನ್ನು ಕಟ್ಟಿರುವುದುಂಟು. ಇದರಿಂದ ದನ, ಎಮ್ಮೆ, ಹಸುಗಳನ್ನು ಹೊಡೆಯುವ ಮೂಲಕ ಅವುಗಳನ್ನು ಎಚ್ಚರಗೊಳ್ಳುವಂತೆ ಮಾಡುತ್ತದೆ.

೯.ಎಡೆಕುಂಟೆ



ಇದು ಮುಖ್ಯವಾಗಿ ಬೆಳೆಗಳ ಸಾಲುಗಳ ಮಧ್ಯದಲ್ಲಿನ ಕಳೆಯನ್ನು ಕೀಳುವುದಕ್ಕೆ ಮತ್ತು ಬೆಳೆಗಳ ಬುಡಕ್ಕೆ ನಿರ್ದಿಷ್ಟ ಪ್ರಮಾಣದ ಮಣ್ಣನ್ನು ಹೇರುವುದಕ್ಕೆ ಬಳಕೆಯಾಗುತ್ತದೆ. ಅದಕ್ಕಾಗಿಯೇ ಇದಕ್ಕೆ ಎಡೆಕುಂಟೆ ಎಂದು ಹೆಸರು. ಎರಡು ಸಾಲುಗಳಲ್ಲಿ ಬೆಳೆದಿರುವ ಬೆಳೆಗಳ ಮಧ್ಯೆ ಇದನ್ನು ಹಾಯಿಸಿದಾಗ ಕಳೆಗಿಡಗಳು ಕಿತ್ತುಹೋಗಿ ನಾಶವಾಗುತ್ತವೆ. ಎರಡನೆ ಹಂತದಲ್ಲಿ ಇದರ ಬಳಕೆಯು ಬೆಳೆಯ ಕೆಲವು ಬೇರುಗಳನ್ನು ಹರಿಯುವುದಾಗಿರುತ್ತದೆ (ಜೊತೆಗೆ ಕಳೆಕೂಡಾ ನಾಶವಾಗುತ್ತದೆ). ಇದರಿಂದ ಬೆಳೆಯಲ್ಲಿ ಹೊಸ ಬೇರುಗಳು ಸಮೃದ್ಧವಾಗಿ ಮೂಡಿಬರುತ್ತವೆ ಎನ್ನುವುದು ರೈತರ ಅಭಿಪ್ರಾಯ. ಮೂರನೇಹಂತದಲ್ಲಿ ಬೆಳೆಯ ಬುಡಕ್ಕೆ ನಿರ್ದಿಷ್ಟ ಪ್ರಮಾಣದಲ್ಲಿ ಎಡೆಯ ಮಣ್ಣನ್ನು ಒದಗಿಸುವುದೇ ಇದರ ಉದ್ದೇಶವಾಗಿರುತ್ತದೆ. ಒಂದನೇ, ಎರಡನೇ ಹಂತಗಳಲ್ಲಿ ಎಡೆಕುಂಟೆಯ ತಾಳಿನ ರಂಧ್ರದಲ್ಲಿ ಮಣ್ಣು ಹಿಂದಕ್ಕೆ ಬೀಳುತ್ತಾ ಹೋದರೆ, ಮೂರನೆ ಹಂತದಲ್ಲಿ ತಾಳಿನ ಈ ರಂಧ್ರವನ್ನು ಹಗ್ಗ/ಬಳ್ಳಿಯನ್ನು ಸುತ್ತಿ ಮುಚ್ಚಿಬಿಡುವುದರಿಂದ ಮಣ್ಣು ಹಿಂದಕ್ಕೆ ಬೀಳದೆ ಬದಿಗಳಿಂದ ಸರಿದು ಬೆಳೆಗಳ ಬುಡಕ್ಕೆ ಬೀಳುತ್ತದೆ.

ಎತ್ತುಗಳ ನೊಗಕ್ಕೆ ಎಡೆಕುಂಟೆಯನ್ನು ಹಗ್ಗದ ಸಹಾಯದಿಂದ ಕಟ್ಟಲಾಗುತ್ತದೆ. ಒಂದು ಕುಂಟೆಯನ್ನಷ್ಟೆ ಬಳಸುವಾಗ ನೊಗವು ಚಿಕ್ಕದಾಗಿರುತ್ತದೆ. ಮಣ್ಣನ್ನು ಬೆಳೆಯ ಬುಡಕ್ಕೆ ಹಾಕುವಾಗ ಸಾಮಾನ್ಯವಾಗಿ ಒಂದೇ ಕುಂಟೆಯನ್ನು ಕಟ್ಟುತ್ತಾರೆ. ಎರಡು ಅಥವಾ ಮೂರು ಮೂರು ಕುಂಟೆಗಳನ್ನು ಬಳಸುವಾಗ ದೊಡ್ಡ ನೊಗವನ್ನು (ಸುಮಾರು ಹನ್ನೆರಡು ಗೇಣು) ಕಟ್ಟುತ್ತಾರೆ. ಕುಂಟೆಯಲ್ಲಿ ಈಸು (ನೊಗಕ್ಕೆ ಜೋಡಿಸುವ ಭಾಗ), ತಾಳು (ದಿಂಡು ಮತ್ತು ಕುಡಗಳನ್ನು ಜೋಡಿಸುವ ಮರದ ಪಟ್ಟಿ), ಕುಡ (ಕಳೆಯನ್ನು ಕತ್ತರಿಸುವ ಮತ್ತು ಮಣ್ಣನ್ನು ಅಗೆಯುವ ಭಾಗ), ಮೇಳಿ (ಹಿಡಿಕೆ) –ಎಂಬ ಭಾಗಗಳಿವೆ. ಮಣ್ಣು ಗಟ್ಟಿಯಾಗಿದ್ದಾಗ ಕುಂಟೆಗೆ ಇನ್ನಷ್ಟು ಒತ್ತಡ ಹಾಕಲು ಬ್ಯಾಕೋಲು/ಕವೆಗೋಲು/ಕೊಕ್ಕೆಕೋಲನ್ನು ಬಳಸುತ್ತಾರೆ (ಇದು ಸುಮಾರು ಮೂರು, ಮೂರೂವರೆ ಅಡಿ ಎತ್ತರವಿರುತ್ತದೆ). ಅಗತ್ಯವಿದ್ದಾಗ ಬೆಳೆಗಳ ಮಧ್ಯೆ ನೀರು ಹರಿಸಿಕೊಂಡು ಎಡೆನಾಟಿ ಮಾಡುವಾಗಲೂ ಎಡೆಕುಂಟೆಯ ಉಪಯೋಗವಾಗುತ್ತದೆ.

೧೦. ಕುಣಿಗೆ



ಕುಣಿಗೆ ಕಳೆ ಕೀಳಲು ವ್ಯಾಪಕವಾಗಿ ಬಳಕೆಯಾಗುವ ಸಾಧನ. ಇದಕ್ಕೆ ಮರದ ಹಿಡಿ, ಕಬ್ಬಿಣದ ಅಲಗು ಇರುತ್ತದೆ. ಅಲಗಿನ ಮುಂಭಾಗವು ತೆಳುವಾಗಿರುವುದರಿಂದ ಮಣ್ಣಿನ ಮೇಲ್ಪದರದಲ್ಲಿ ಹಬ್ಬಿರುವ ಕಳೆ ಗಿಡಗಳ ಬೇರುಗಳನ್ನು ಕತ್ತರಿಸಲು ಯೋಗ್ಯವಾಗಿರುತ್ತದೆ. ಕುಣಿಗೆಗಳ ವಿನ್ಯಾಸಗಳಲ್ಲಿ




ವ್ಯತ್ಯಾಸಗಳಿವೆ. ಬೆಳ್ಳುಳ್ಳಿಯ ಬೆಳೆಯಲ್ಲಿನ ಕಳೆಯಲ್ಲಿನ ಕಳೆಗಳನ್ನು ತೆಗೆಯಲು ಬಳಸುವ ಕುಜಗೆ ಚಿಕ್ಕದು. ಬಾಗಿದ ಅಲಗು ಒಟ್ಟು ಒಂದು ಅಡಿ ಉದ್ದವಿದೆ. ಬಾಗಿದ ಮುಂಭಾಗವು ಸಾಮಾನ್ಯವಾಗಿ ನಾಲ್ಕು ಇಂಚು ಉದ್ದವಿರುತ್ತದೆ. ಉಳುಮೆಯಾದ ನೆಲವನ್ನು ಸಮತಟ್ಟು ಮಾಡಲು ಮತ್ತು ಸಡಿಲು/ನುಸುಲುಗೊಳಿಸಲು ಬಳಸುವ ಕುಂಟೆಯಲ್ಲಿ ಸಿಕ್ಕಿಕೊಳ್ಳುವ ಬೇರು-ನಾರುಗಳ ತೊಂದರೆಯನ್ನು ನಿವಾರಿಸಲು ಕೂಡ ಕುಜಗೆ ಬಳಕೆಯಾಗುತ್ತದೆ. ಕುಜಗೆಯನ್ನು ಹಳೆಯ/ಸವೆದ ಕುಡುಗೋಲುಗಳಿಂದಲೂ ತಯಾರಿಸಿಕೊಳ್ಳಬಹುದು.

೧೧. ಪಿಕಾಸಿ




ಇದು ಮಣ್ಣು ಅಗೆಯಲು ಬಳಸುವ ಸಾಧನ. ಒಂದು ಕಡೆ ಚೂಪಾಗಿ ಮತ್ತೊಂದು ಕಡೆ ಮೂರಂಗಲದಷ್ಟು ಅಗಲವಾಗಿ, ಬಲವಾಗಿರುವ ಕಬ್ಬಿಣದ ತುಂಡಿಗೆ ಮರದಿಂದ ಮಾಡಿದ ಹಿಡಿ ಅಥವಾ ಕಾವು ಇರುತ್ತದೆ.

೧೨. ಎಲೆಗುದ್ದಲಿ ಅಥವಾ ಸಲಿಕೆ



ಎಲೆಗುದ್ದಲಿಯು ಕಣ ಮಾಡಲು, ಕಾಲುವೆ ಮಾಡಲು, ಕಾಲುವೆಗಳಲ್ಲಿ ನೀರು ಹೋಗುವಂತೆ ಮಾಡಲು ತಗ್ಗು ತೆಗೆಯಲು, ಗೊಬ್ಬರವನ್ನು ಎತ್ತಿನ ಗಾಡಿಗೆ ತುಂಬಲು ಇತ್ಯಾದಿ ಎಲ್ಲಾ ಕೆಲಸಗಳನ್ನು ಮಾಡಲು ಬಳಸುವ ಒಂದು ಮುಖ್ಯವಾದ ಸಾಧನ. ಕಬ್ಬಿಣದಿಂದ ಮಾಡಿದ ಅಗಲವಾದ ತಟ್ಟೆ ಇದ್ದು, ಅದಕ್ಕೆ ಮರದಿಂದ ಮಾಡಿದ ಕಾವು ಇರುತ್ತದೆ. ಕಾವು ಎಂದರೆ ಹಿಡಿದುಕೊಳ್ಳಲು ಬಳಸುವ ಸಾಧನ. ಹೊಲ, ಗದ್ದೆ, ತೋಟಗಳಿಗೆ ನೀರು ಹಾಯಿಸುವಾಗಲೂ ಸಹ ಇದನ್ನು ಬಳಸುತ್ತಾರೆ.

೧೩. ಕಳಕೊಬ್ಬು




ಕಳೆ ಕೀಳುವ ಸಾಧನ. ಹೊಲ ಗದ್ದೆಗಳಿಗೆ ಬಿತ್ತನೆ ಬೀಜಗಳನ್ನು ಬಿತ್ತಿದಾಗ, ಅವು ಚಿಕ್ಕ ಚಿಕ್ಕದಾಗಿ ಬೆಳೆಯುವಾಗ ಬೆಳೆಗಳ ಮಧ್ಯ ಬೆಳೆಯುವ ಕಳೆಗಳನ್ನು ತೆಗೆಯಲು ಬಳಸುತ್ತಾರೆ.

೧೪. ಕೊಂಗ



ಇದನ್ನು ಭತ್ತ, ರಾಗಿ ಇತರೆ ಧಾನ್ಯಗಳನ್ನು ತೂರಲು ಬಳಸುತ್ತಾರೆ. ಮೇದಾರರು ಇದನ್ನು ಬಿದಿರಿನಿಂದ ಎಣೆದು ಸಗಣಿ ಅಥವಾ ಗಂಜಳವನ್ನು ಬಳಿದಿರುತ್ತಾರೆ. ಇದು ಮನೆಗಳಲ್ಲಿ ಬಳಸುವ ಮೊರಗಳಿಗಿಂತ ದೊಡ್ಡದಾಗಿರುತ್ತದೆ. ಕಸಕಡ್ಡಿಯನ್ನು ಕಾಳುಗಳಿಂದ ಬೇರ್ಪಡಿಸಲು ಬಳಸುತ್ತಾರೆ. ಇದು ಧಾನ್ಯಗಳಿಂದ ಹೊಟ್ಟನ್ನು ಗಾಳಿಯಲ್ಲಿ ತೂರಿಸಿ ಕಾಳುಗಳು ಮಾತ್ರ ಕೆಳಗೆ ಬೀಳುವಂತೆ ಮಾಡುತ್ತದೆ.

೧೫. ಹಾರೆ



ಹಾರೆ ಗುಂಡಿ ತೋಡಲು ಬಳಸುವ ಒಂದು ಕಬ್ಬಿಣದ ಸಾಧನ. ಇದು ಸುಮಾರು ಐದಾರು ಅಡಿ ಉದ್ದವಿರುತ್ತದೆ. ಹಾರೆಯ ಮುಂಭಾಗ ಚೂಪಾಗಿದ್ದು ಹಿಂದೆ ಮೊಂಡಾಗಿರುತ್ತದೆ. ಹಾರೆಯ ಮುಂಭಾಗ ಚೂಪಾಗಿದ್ದು ಅದರ ಗಾತ್ರದಲ್ಲಿ ಬೇರೆ ಬೇರೆಯಾಗಿರುತ್ತದೆ. ಕೆಲಸಕ್ಕೆ ತಕ್ಕಂತೆ ಈ ಹಾರೆಯನ್ನು


ಬಳಸುತ್ತಾರೆ. ಇದರಲ್ಲಿ ಕೈಹಾರೆ ಎಂಬ ಚಿಕ್ಕಹಾರೆಯು ಉಂಟು. ಕೆಲವು ಪ್ರದೇಶಗಳಲ್ಲಿ ಹಾರೆಯು 'ಅರ' ಎಂದೂ ಸಹ ಕರೆಯುವುದುಂಟು. ಹೊಲ ಗದ್ದೆಗಳಲ್ಲಿ ಸಸಿಗಳನ್ನು ನೆಡಲು, ಗದ್ದೆಯ ಸುತ್ತಲು ಹಂದಿಗಳು ಹೋಗಬಾರದೆಂದು ದೊಣ್ಣೆಗಳನ್ನು ನೆಡುವಾಗ ಗುಂಡಿ ತೋಡಲು ಬಳಸುತ್ತಾರೆ. ಹಾರೆಯು ಕೇವಲ ವ್ಯವಸಾಯದಲ್ಲಿ ಮಾತ್ರವಲ್ಲದೆ, ಮನೆಗಳನ್ನು ಕಟ್ಟುವಾಗ ಗುಂಡಿ ತೋಡಲು ಬಳಸುತ್ತಾರೆ.

೧೬. ಕಾಪು



ಗದ್ದೆಗಳಲ್ಲಿ ಪೈರು ನೆಟ್ಟ ನಂತರ ಅದಕ್ಕೆ ದೃಷ್ಟಿತಾಕಬಾರದೆಂದು ಕೆಲವೊಂದು ಮರದ ಬೊಂಬೆಗಳನ್ನು ನೆಡುವರು. ಇದಕ್ಕೆ 'ಕಾಪು' ಎನ್ನುವರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರ್ಷದಲ್ಲಿ ಬರುವ ಮೂರು ಬೆಳೆಗಳಿಗೆ ಏಣಿಲು, ಸುಗ್ಗಿ ಮತ್ತು ಕೊಳಕೆ ಬೆಳೆಗಳೆಂದು ಹೆಸರು. ಸುಗ್ಗಿ ಬೆಳೆಯಲ್ಲಿ ಪೈರು ಹಾಕಿದಾಗ ಅರಳಿ ಮರದ ಕೊಂಬೆಯನ್ನು ದೃಷ್ಟಿ ತಾಗದಿರುವಂತೆ ಗದ್ದೆಗಳಲ್ಲಿ ನೆಡುವರು. ಏಣಿಲು ಬೆಳೆಯಲ್ಲಿ ಪೈರು ಹಾಕಿದಾಗ ಕಾಸರಕನ ಮರದ ಗೊಂಬೆಯನ್ನು ನೆಡುವರು ಕೊಳಕಿ ಬೆಳೆಯಲ್ಲಿ ಪೈರು ಹಾಕಿದಾಗ ಮುಂಡೋವಿನ ಮರದ ಒಂದು ಚಿಕ್ಕ ರೆಂಬೆಯನ್ನು ನೆಡುವರು. ಹೀಗೆ ಕಾಪು ನೆಡುವುದರಿಂದ ಬೆಳೆಗಳಿಗೆ ದೃಷ್ಟಿತಾಗುವುದಿಲ್ಲವೆಂದು ನಂಬುವರು. ಉತ್ತರ ಕರ್ನಾಟಕದಲ್ಲಿ ಇಂಥದ್ದಕ್ಕೆ 'ಬೆದರು ಗೊಂಬೆ', 'ಬೆಚ್ಚ' ಎಂದು ಕರೆಯುವರು.

೧೭. ಸಡ್ಡೆ ಅಥವಾ ಕೂರಿಗೆ



ಸಡ್ಡೆ ಎಂಬುದು ಬಿತ್ತನೆ ಬೀಜಗಳನ್ನು ಬಿತ್ತುವ ಸಾಧನ. ಇದನ್ನು ನೇಗಿಲಿನ ಮೇಣಿಗೆ ಹಗ್ಗ ಕಟ್ಟಿ ಹಿಂದೆ ಬಳಸುತ್ತಿದ್ದರು. ಇದರಲ್ಲಿ ಒಂದು ಬಟ್ಟಲು ಇರುತ್ತದೆ. ಈ ಬಟ್ಟಲಿನಲ್ಲಿ ಬಿತ್ತನೆ ಬೀಜಗಳನ್ನು ತುಂಬಿ ನೇಗಿಲನ್ನು ಮುಂದೆ ನಡೆಸಿದಾಗ ಈ ಬೀಜಗಳು ಸಾಲು ಸಾಲಾಗಿ ಬೀಳುತ್ತವೆ. ಹೀಗೆ ಸಡ್ಡೆಯು ಸಾಲು ಸಾಲಾಗಿ ಬೆಳೆಗಳನ್ನು ಬೆಳೆಯಲು ಬಹು ಉಪಯುಕ್ತವಾಗಿದೆ.

೧೮. ಕಡಾಣಿ



ಇದನ್ನು 'ಕಡೆಗೀಲು, ಕಡೆಯಕೀಲು ಎಂದೂ ಕರೆಯುವರು'. ಎತ್ತಿನಗಾಡಿ, ಜಟಕಗಾಡಿ ರಥ (ತೇರು) ಮೊದಲಾದ ಕೀಲು ಬಂಡಿಗಳು ಚಲಿಸುವಾಗ ಅವುಗಳ ಗಾಲಿ (ಚಕ್ರ) ಜೀಳದಂತೆ ಕಾಲಿಯ ಹೊರ ಬದಿಗೆ, ಅಂದರೆ ಕಡೆಬೊರಿಗೆ ದೂರಿಯ (ಅಚ್ಚಿನ) ಕೊನೆಯಲ್ಲಿರುವ ಎಚ್ಚಿಕ್ಕೆ ಸಿಕ್ಕಿಸುವ ಕಬ್ಬಿಣದ ಮೊಳೆ. ಗಾಡಿ ಚಲಿಸುವಾಗ ಅಕಸ್ಮಾತಾಗಿ ಕಡೆಗೀಲು ಕಳಚಿ ಬಿದ್ದು ಹೋಗಿರುವುದು ಅಥವಾ ಗಾಡಿ ಹೋಗುವಾಗ ಕಡಾಣಿ ಹಾಕದಿರುವುದು ಗಾಡಿ ಹೊಡೆಯುವವನ ಗಮನಕ್ಕೆ ಬರದಿದ್ದರೆ ಗಾಡಿ ಎಷ್ಟು ದೂರ ಬೇಕಾದರು ಚಲಿಸುತ್ತದೆ. ಒಂದು ವೇಳೆ ಗಾಡಿ ಹೊಡೆಯುವವನು ಕಡೆಗೀಲು ಇಲ್ಲದಿದ್ದುದನ್ನು ನೋಡಿ ಬಿಟ್ಟರೆ ಅಥವಾ ಅವನ ಗಮನಕ್ಕೆ ಬಂದರೆ ಗಾಡಿ ಸ್ವಲ್ಪ ದೂರ ಚಲಿಸುವುದರಲ್ಲಿ ಚಕ್ರಗಳು ಕಳಚಿ ಗಾಡಿ ಬಿದ್ದು ಹೋಗುವುದು ಖಂಡಿತ ಎಂಬ ನಂಬಿಕೆ ಜನಪದರದ್ದು.

೧೯. ಮುಸುಡಿ ಕುಕ್ಕೆ



ಇದನ್ನು ಬಾಯಿ ಕುಕ್ಕೆ, ಮುಸುಡಿ ಕುಕ್ಕೆ, ಮೂಗುಕಟ್ಟು, ಮುಸುಕ್ಕ ಎಂದೆಲ್ಲಾ ಕರೆಯುವರು. ಸೆಣಬಿನ ಹಗ್ಗ ಅಥವಾ ಹುರಿಯಗ್ಗದಿಂದ ಎಣೆದಿರುತ್ತಾರೆ. ಎತ್ತುಗಳು ಮೇಯಲು ಸಾಧ್ಯವಾಗದಂತೆ ಅವುಗಳ ಬಾಯಿಗೆ ಕಟ್ಟಲಾಗುತ್ತದೆ. ಉಳುಮೆ ಮಾಡುವಾಗ ಕಬ್ಬು, ಜೋಳ, ಬಾಳೆಇತ್ಯಾದಿ ಬೆಳೆಗಳ ನಡುವೆ ಸಾಲುಗಳನ್ನು ಹೊಡೆಯುವಾಗ ದನಗಳು ಬೆಳೆಗಳನ್ನು ತಿನ್ನದಹಾಗೆ ಅದರ ಮುಖಕ್ಕೆ ಕುಕ್ಕೆಯನ್ನು ಹಾಕುತ್ತಿದ್ದರು. ಕೆಲವು ಪ್ರದೇಶಗಳಲ್ಲಿ ಕರುಗಳು ಹಾಲನ್ನು ಹೆಚ್ಚು ಕುಡಿಯಬಾರದೆಂದು ಆರ್ಥಿಕ ದೃಷ್ಟಿಯಿಂದ ಕರುಗಳಿಗೂ ಮುಸುಡಿ ಕುಕ್ಕೆಯನ್ನು ಕಟ್ಟುತ್ತಾರೆ.





೨೦. ರೋಣಗಲ್ಲು



ಒಕ್ಕಣೆಯ ಕ್ಷೇತ್ರದಲ್ಲಿ ರೋಣಗಲ್ಲಿನ ಪಾತ್ರ ಮುಖ್ಯವಾದುದು. ಹಿಂದೆ ಈ ಕಲ್ಲನ್ನು ಹೆಚ್ಚಾಗಿ ಬಳಸುತ್ತಿದ್ದರು. ಈ ಕಲ್ಲನ್ನು ಒಡ್ಡರು ತಯಾರಿಸುತ್ತಾರೆ. ಇದು ದುಂಡಾಗಿ ಹಾಗೂ ಅತ್ಯಂತ ದೊಡ್ಡದಾಗಿದ್ದು. ಈ ಕಲ್ಲಿನ ಮಧ್ಯದಲ್ಲಿ ಒಂದು ದಪ್ಪನೆಯ ಕಬ್ಬಿಣವನ್ನು ಹಾಕಲಾಗಿರುತ್ತದೆ. ಈ ಕಬ್ಬಿಣಕ್ಕೆ ಸರಳನ್ನು ಸೇರಿಸಿ ಅದನ್ನು ನೊಗಕ್ಕೆ ಸೇರಿಸಿ ಹಸುವಿನಿಂದ ಎಳೆಸುತ್ತಾರೆ. ಸಾಮಾನ್ಯವಾಗಿ ರಾಗಿಯನ್ನು ಒಕ್ಕಣೆ ಮಾಡುವಾಗ ಅದರ ತೆನೆಯಿಂದ ರಾಗಿಯನ್ನು ಬಿಡಿಸಲು ಈ ಕಲ್ಲನ್ನು ತೆನೆಯ ಮೇಲೆ ಹರಿಸುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ಕಲ್ಲನ್ನು ಬಳಸದೇ ತೆನೆಯನ್ನು ರೋಡಿನಲ್ಲಿ ಹಾಕಿ ವಾಹನಗಳ ಮೂಲಕರಾಗಿ ಒಕ್ಕಣೆ ಮಾಡುತ್ತಿದ್ದಾರೆ. ಕೆಲವೊಂದು ಹಳ್ಳಿಗಳಲ್ಲಿಯೂ ಸಹ ಈಗಲೂ ಈ ರೋಣಗಲ್ಲನ್ನು ಕಾಣಬಹುದು.

೨೧. ಎತ್ತಿನ ಗಾಡಿ



ಗಾಡಿ

ವ್ಯವಸಾಯದ ಸಮಯದಲ್ಲಿ ಬೆಳೆವಂತಹ ಬೆಳೆಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸಲು ಇದ್ದಂತಹ ಗಾಡಿ. ಇದನ್ನು ಮರದಿಂದ ಮಾಡಲಾಗಿರುತ್ತದೆ. ನಾಲ್ಕೈದು ಮರದ ಹಲಗೆಗಳನ್ನು ಜೋಡಿಸಿ ಅದರ ಅಂಚಿನಲ್ಲಿ ಉದ್ದವಾದ ಕೋಲುಗಳನ್ನು ಜೋಡಿಸಿರಲಾಗುತ್ತದೆ. ಇದನ್ನು ಎಡ ಬಲದಲ್ಲಿರುವ ಚಕ್ರಗಳಿಗೆ ಸರಿಯಾಗಿ ಹಾಕಲಾಗಿರುತ್ತದೆ. ಮುಂದೆ ಒಂದು ನೊಗ ಹಾಕಿ ಅದಕ್ಕೆ ಎತ್ತುಗಳನ್ನು ಕಟ್ಟಿಕೊಂಡು ಗಾಡಿಯನ್ನು ಓಡಿಸಲಾಗುತ್ತದೆ.










೨೨. ಕೊಡ್ತಿ



"ಪದ ನಿಷ್ಪತ್ತಿ – ಕೊಡಂತಿ>ಕೊಡತಿ; ಕೊಡತೆ, ಕೊಣಚೆ;"[೧]


ಬಡಿಮಣೆ ಕಣದಲ್ಲಿ ಒಕ್ಕಲು ಸಂದರ್ಭದಲ್ಲಿ ಔಡಲ, ಕಡಲೆ ಮುಂತಾದುವನ್ನು ಬಡಿಯುವುದಕ್ಕೆ, ನೆಲಕಡಲೆ (ಬುಡ್ಡಿ) ಮುಂತಾದುವನ್ನು ಒಡೆಯುವುದಕ್ಕೆ ಬಳಸುವ ಸಾಧನ. ಒಂದು ಕೈಯಿಂದ ಸಲೀಸಾಗಿ ಎತ್ತಿ ಬೇಕಷ್ಟೇ ಬಲವಾಗಿ ಬಡಿಯುವುದಕ್ಕೂ ಅನುಕೂಲವಾಗುವಂತೆ ಇದರ ವಿನ್ಯಾಸ ಮತ್ತು ಭಾರವಿದೆ. ನೆಲ/ಗೋಡೆಗಳನ್ನು ತಟ್ಟಿ ಸಮತಟ್ಟು ಮಾಡುವುದಕ್ಕೂ ಇದನ್ನು ಬಳಸಲಾಗುತ್ತದೆ. ಇದರ ಹಿಂಭಾಗದಲ್ಲಿ ಒಂದು ಕೈಯೊಳಗೆ ಅಡಗುವಂತೆ ಹಿಡಿಕೆಯೂ ಅದರ ಮುಂಭಾಗದಲ್ಲಿ ಚಪ್ಪಟೆಯಾದ ಹಲಗೆಯ ಭಾಗವೂ ಇದೆ. ಇದನ್ನು ಹುಣಸೆ, ಕರಿಜಾಲಿ ಮುಂತಾದ ಮರಗಳಿಂದ ತಯಾರಿಸುತ್ತಾರೆ.

೨೩. ಏತರಾಟೆ ಅಥವಾ ಕಪ್ಪಿರಾಟೆ



ನೆಲಬಾವಿಯಿಂದ ಎತ್ತುಗಳ ಮೂಲಕ ಕಪ್ಪಿ ಹೊಡೆದು ನೀರನ್ನು ಮೇಲೆತ್ತಲು ಬಳಸುವ ಒಂದು ಸಾಧನ. ಸುಮಾರು ಹತ್ತು ಇಂಚು ವ್ಯಾಸ, ಆರು ಇಂಚು ದಪ್ಪದ ಮರದಿಂದ ತಯಾರಿಸಿದ್ದಾರೆ. ಇದು ವೃತ್ತಾಕಾರದಲ್ಲಿದ್ದು, ಅದರ ಹೊರ ಅಂಚಿನಲ್ಲಿ ಹಗ್ಗವು ಅತ್ತಿತ್ತ ಹೊರ ಹೋಗದೆ ಸಲೀಸಾಗಿ ಚಲಿಸಲು ಅನುಕೂಲವಾಗುವಂತೆ ಕೆತ್ತಿರುತ್ತಾರೆ. ರಾಟೆಯ ಮಧ್ಯಭಾಗದಲ್ಲಿ ಸುಮಾರು ಎರಡು ಇಂಚು ವ್ಯಾಸದ ರಂಧ್ರವಿರುತ್ತದೆ. ಅದಕ್ಕೆ ಬಲವಾದ ಸರಳನ್ನು ಜೋಡಿಸಲಾಗುತ್ತದೆ. ಭಾರವಾದ ನೀರು ಅಥವಾ ವಸ್ತುವನ್ನು ಆಳದಿಂದ ಮೇಲೆತ್ತಲು ರಾಟೆಯ ತಂತ್ರವನ್ನು ಅಳವಡಿಸುವುದರಿಂದ ಶ್ರಮವು ತುಂಬಾ ಕಡಿಮೆಯಾಗುತ್ತದೆ.

೨೪. ಕಂಡ್ಲಿ




ಹೊಲಗದ್ದೆಗಳ ಬದುಗಳಲ್ಲಿ ಬೆಳೆದ ಮರಗಿಡಗಳ ರೆಂಬೆ ಕೊಂಬೆಗಳನ್ನು ಕಡಿಯಲು, ಸೌದೆ ಕಡಿಯಲು, ಮನೆಗಳಲ್ಲಿ ಮಾಂಸ ತುಂಡರಿಸಲು ಬಳಕೆ ಮಾಡುತ್ತಾರೆ. ಒಂದು ಅಡಿ ಉದ್ದವಿದ್ದು, ಮುಂಭಾಗ ಸ್ವಲ್ಪ ಬಾಗಿರುತ್ತದೆ. ಇದನ್ನು ಕಬ್ಬಿಣದಿಂದ ತಯಾರಿಸಿರುತ್ತಾರೆ. ಕೊಡ್ಲಿ ಮತ್ತು ಮಚ್ಚುಗಳಿಂದ ಮಾಡುವ ಕೆಲಸಗಳನ್ನೂ ಈ ಆಯುಧದಿಂದ ಮಾಡುತ್ತಾರೆ.

೨೫. ಕತ್ತಿ



ಎಮ್ಮೆ ಕೋಣಗಳ ಮೈಯ ಕೂದಲನ್ನು ಹೆರೆಯಲು ಬಳಸುವ ಕಿರುಗತ್ತಿ. ಇದರಲ್ಲಿ ಹಿಡಿಕೆಯು ಮರದ್ದಾಗಿದ್ದು, ಕತ್ತಿಯು ಕಬ್ಬಿಣದಿಂದ ನಿರ್ಮಿತವಾಗಿದೆ. ಒಟ್ಟು ಉದ್ದ ಸುಮಾರು ಹತ್ತು ಇಂಚು. ಕತ್ತಿಯ ಅಲಗು ಕಬ್ಬಿಣದ ತೆಳು ತಗಡಿನಿಂದ ರಚಿತವಾಗಿದೆ. ಎಮ್ಮೆ ಕೋಣಗಳ ಕೂದಲುಗಳನ್ನು ಹೆರೆಯದಿದ್ದರೆ ಅದರಲ್ಲಿ ಕ್ರಿಮಿ-ಕ್ರೀಟ-ಹೇನುಗಳು ತುಂಬುವುದಲ್ಲದೆ ಕೊಳೆ, ಕೆಸರು ಕೂಡ ತುಂಬುತ್ತದೆ. ಇದರಿಂದ ಅವಕ್ಕೆ ಅಸ್ವಸ್ಥತೆಯುಂಟಾಗುತ್ತದೆ ಮತ್ತು ಕೊಳಕಾಗಿರುತ್ತದೆ. ಇದನ್ನು ನಿವಾರಿಸಲು ಕತ್ತಿಯ ಬಳಕೆ ಪಶುಪಾಲಕರಿಗೆ ತುಂಬಾ ಅಗತ್ಯ.

೨೬. ಕೊಡಲಿ



"ಕೊಡಲಿ > ಕೊಡ್ಲಿ > ಕೊಳ್ಳಿ ; ಕೊಡಲಿ ಆಡು ನುಡಿಯಲ್ಲಿ 'ಕೊಡ್ಲಿ' ಎಂದಾಗಿ ನಂತರ 'ಡ' ಕಾರಕ್ಕೆ 'ಳ' ಕಾರ ಬಂದು ಒತ್ತಕ್ಷರವಾದ 'ಲ' ಕಾರವು 'ಳ' ಕಾರವೇ ಆಗುವುದರ ಮೂಲಕ 'ಕೊಳ್ಳಿ' ಎಂಬ ರೂಪ ಪಡೆದುಕೊಳ್ಳುತ್ತದೆ."[೨] ಕೊಡಲಿಯನ್ನು ರೈತರು ಮರ ಕಡಿಯಲು, ಕಟ್ಟಿಗೆ ಅಥವಾ ಸೌದೆ ಒಡೆಯಲು ಬಳಸುತ್ತಾರೆ. ಕೊಡಲಿಯು ಕಬ್ಬಿಣ ಹಾಗೂ ಮರದಿಂದ ತಯಾರಿಸಿದ ಆಯುಧ. ಕೊಡಲಿಯ ಅಲಗಿನ ತುದಿಯು ಹರಿತವಾಗಿದ್ದು, ಅದರ ಬುಡದಲ್ಲಿ ಹಿಡಿಕೆಯನ್ನು ಜೋಡಿಸಿಕೊಳ್ಳಲು ಅನುಕೂಲವಾಗುವಂತೆ ರಚನೆಯಿರುತ್ತದೆ. ಎರಡು ಇಂಚು ಕೊಳವೆಗೆ ಎರಡೂವರೆ ಅಡಿ ಉದ್ದದ ಹಿಡಿಕೆ ಹಾಕಲಾಗಿರುತ್ತದೆ. ಕೊಡಲಿಗಳ ಗಾತ್ರ ವಿನ್ಯಾಸಗಳಲ್ಲಿ ಸಾಕಷ್ಟು ವ್ಯತ್ಯಾಸವಿರುತ್ತದೆ.

೨೭. ಚಕ್ಕಡಿ ಗಾಲಿ



ಚಕ್ಕಡಿಗಾಲಿಯು ಚಕ್ಕಡಿಯ ಒಂದು ಬಹುಮುಖ್ಯ ಭಾಗ. ವೃತ್ತಾಕಾರದಲ್ಲಿದ್ದು ಚಕ್ಕಡಿಯ ಎರಡು ಪಾರ್ಶ್ವಗಳಲ್ಲಿ ಮಧ್ಯದ ಬಿಟ್ಟಿ ಮರಕ್ಕೆ ಜೋಡಿಸಲಾಗಿರುತ್ತದೆ. ಗಾಲಿಯ ವ್ಯಾಸ ಐದು ಅಡಿ. ಮಧ್ಯಗುಂಬದ ವ್ಯಾಸ ಒಂದು ಅಡಿ, ಅಗಲ ಒಂದು ಅಡಿ, ಎಲೆ ಪಟ್ಟಿಯ ಅಗಲ ಮೂರು ಇಂಚು. ಹೊರಸುತ್ತಿನ ಅಗಲ ಏಳು ಇಂಚು, ಹೊರ ಸುತ್ತಿನಲ್ಲಿ ಕಬ್ಬಿಣದ ಪಟ್ಟಿ ಇದೆ. ಮಧ್ಯದ ಗುಂಬದಲ್ಲಿಯೂ ಎರಡು ಬದಿಗೆ ಎರಡೆರಡು ಬಳೆಗಳಿರುತ್ತವೆ. ಜಾಲಿಮರದಿಂದ ತಯಾರಿಸಲಾದ ಪಟ್ಟಿಗಳಿಂದ ಚಕ್ಕಡಿಯ ಗಾಲಿ ತಯಾರಿಸಲಾಗುತ್ತದೆ. ಚಕ್ಕಡಿಯು ಕೃಷಿ ಸಮುದಾಯದವರ ಅತ್ಯಗತ್ಯ ಸಲಕರಣೆಯಾಗಿದೆ.

೨೮. ಹೆಂಟೆಕೊಡತಿ



ಗದ್ದೆ, ಹೊಲಗಳಲ್ಲಿನ ಮಣ್ಣಿನ ಹೆಂಟೆಗಳನ್ನು ಹೊಡೆದು ಪುಡಿ ಮಾಡಲು ಬಳಸುವ ಮರದ ಸಾಧನ. ಇದರಲ್ಲಿ ಈಸು ಮತ್ತು ದಿಂಡು ಎಂಬ ಎರಡು ಭಾಗಗಳಿವೆ. ದಿಂಡು ಸುಮಾರು ಮುಕ್ಕಾಲರಿಂದ ಒಂದು ಅಡಿಯಷ್ಟು ಉದ್ದ, ಸುಮಾರು ಅರ್ಧ ಅಡಿ ಎತ್ತರದ್ದಾಗಿದೆ. ಈಸು ಸುಮಾರು ಐದು ಅಡಿ ಉದ್ದವಿದೆ. ಔಡಲ, ಅಲಸಂದೆ, ರಾಗಿ ಮುಂತಾದವುಗಳ ಕಾಳುಗಳನ್ನು ಬೇರ್ಪಡಿಸಿಕೊಳ್ಳುದಕ್ಕೂ ಹೆಂಟೆ ಕೊಡತಿಯು ಉಪಯೋಗವಾಗುತ್ತದೆ. ದಿಂಡನ್ನು ಸಾಗುವಾನಿಯಾಗಲಿ ಇತರ ನಾರುಜಾತಿಯ, ಭಾರವುಳ್ಳ, ಗಟ್ಟಿಮರಗಳಿಂದಾಗಲಿ ತಯಾರಿಸಲಾಗುತ್ತದೆ.

ಅಡಿ ಟಿಪ್ಪಣಿಗಳು

೧. ನಾಯಕ ಮತ್ತು ರಾಮೇಗೌಡ ಡಿ.ಬಿ.,ಕನ್ನಡ ಜಾನಪದ ನಿಘಂಟು ಪದ ಸಂಸ್ಕೃತಿ ಕೋಶ, ಸಂಪುಟ-೩., ಕನ್ನಡ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ,೨೦೧೭, ಪು -೪೨೫

೨. ಅದೇ, ಪು- ೪೨೫





ಸಾಂಸ್ಕೃತಿಕ ಪರಿಕರಗಳು











ಅಧ್ಯಾಯ ೨

ಸಾಂಸ್ಕೃತಿಕ ಪರಿಕರಗಳು

ತಮ್ಮ ಅಭಿರುಚಿ, ಅವಶ್ಯಕತೆ, ಮತ್ತು ಅನುಕೂಲತೆಗಾಗಿ ತಯಾರಿಸಿಕೊಳ್ಳುವ ಈ ಬಗೆಯ ಪರಿಕರಗಳು ಬಹುತೇಕ ನಿಸರ್ಗ ದತ್ತ ವಸ್ತುಗಳಿಂದಲೇ ರೂಪಕೊಳ್ಳುತ್ತಿದ್ದವು. ತಮ್ಮ ಪ್ರತಿಭೆ, ಸೃಜನಶೀಲತೆ ಮತ್ತು ಕಲಾತ್ಮಕತೆಯ ಸ್ಪರ್ಶದೊಂದಿಗೆ ವಿವಿಧ ಉದ್ದೇಶಗಳಿಗಾಗಿ ರೂಪುಗೊಳ್ಳುತ್ತಿದ್ದ ಪರಿಕರಗಳು, ಪ್ರಾದೇಶಿಕತೆಗನುಣವಾಗಿ ಜನರ ದೈನಂದಿನ ಅಗತ್ಯತೆಗಳಿಗನುಗುಣವಾಗಿ ಬಳಕೆಗೊಳ್ಳುತ್ತಿದ್ದವು.

ಜನಜೀವನದ ಎಲ್ಲ ಸ್ತರಗಳಲ್ಲಿಯೂ ಬೆರೆತು ಹೋಗಿರುವ ಪರಿಕರಗಳು ಪ್ರಧಾನವಾಗಿ ಅವರ ದುಡಿಮೆ, ಮನರಂಜನೆ, ಸಂಪ್ರದಾಯಾಚರಣೆಗಳಾದ ಹಬ್ಬ, ಜಾತ್ರೆ, ದೈವೀ ಆರಾಧನೆ, ಮದುವೆ, ಆಟ–ಕ್ರೀಡೆ, ಕಸುಬು, ವೃತ್ತಿ ಮತ್ತು ಗೃಹ ಬಳಕೆಯ ಸಂದರ್ಭದಲ್ಲಿ ಬಳಕೆಗೊಳ್ಳುವ ಮೂಲಕ ಜನಪದ ಬದುಕಿನ ಪ್ರತಿಯೊಂದು ಸಂದರ್ಭದಲ್ಲೂ ಬಹು ಮುಖ್ಯ ಪಾತ್ರ ವಹಿಸುವ ಮೂಲಕ ಜನಪದರ ಸಂಸ್ಕೃತಿಯನ್ನು ಪ್ರದರ್ಶಿಸುವ ಮಹತ್ವದ ಸಾಧನಗಳಾಗಿ ಗುರುತಿಸಿಕೊಂಡಿವೆ.

ಜನಪದರ ವಿಶಿಷ್ಠ ಸಂಸ್ಕೃತಿಯನ್ನು ಪ್ರತಿನಿಧಿಸುವ, ಅವರು ಬಳಸುತ್ತಿದ್ದ ವಿವಿಧ ಪರಿಕರಗಳನ್ನು ಗುರುತಿಸಿ, ಅವುಗಳ ಬಳಕೆಯ ಸಂದರ್ಭಗಳನ್ನು ಅಧ್ಯಯನಕ್ಕೊಳಪಡಿಸುವ ಮೂಲಕ ಆಯಾ ಪ್ರದೇಶದ ಜನರ ಸಾಂಸ್ಕೃತಿಕ ಬದುಕನ್ನು ಅರ್ಥೈಸಿಕೊಳ್ಳಬಹುದಾಗಿದೆ. ಈ ನಿಟ್ಟಿನಲ್ಲಿ ತನ್ನದೇ ಆದ ಸಾಂಸ್ಕೃತಿಕ ಪರಂಪರೆಗೆ ಹೆಸರಾಗಿರುವ ಮಂಡ್ಯ ಜಿಲ್ಲೆಯ ಜಾನಪದೀಯ ಪರಿಕರಗಳ ಸಾಂಸ್ಕೃತಿಕ ಸ್ವರೂಪವನ್ನು ಗುರುತಿಸುವ ಉದ್ದೇಶದೊಂದಿಗೆ ಅವುಗಳ ಮಹತ್ವ ಮತ್ತು ಉಪಯುಕ್ತತೆಗಳನ್ನು ವಿಶ್ಲೇಷಣೆಗೊಳಪಡಿಸಲಾಗಿದೆ. ಈ ಮೂಲಕ ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಮಹತ್ವವನ್ನು ಅರ್ಥೈಸಿಕೊಳ್ಳಲು ಈ ಪರಿಕರಗಳು ಬಹುಮುಖ್ಯ ಪಾತ್ರ ವಹಿಸುತ್ತವೆ ಎಂಬುವನ್ನು ನಿರೂಪಿಸುವ ಪ್ರಯತ್ನ ಮಾಡಲಾಗಿದೆ.

೨.೧. ಗೃಹೋಪಯೋಗಿ ವಸ್ತುಗಳು

ಈ ವಿಭಾಗದಲ್ಲಿ ಸಂಗ್ರಹಿತವಾದ ಗೃಹೋಪಯೋಗಿ ವಸ್ತುಗಳಲ್ಲಿ ವಿಶಿಷ್ಟವಾದ ಕೆಲವನ್ನು ಆಯ್ದು ಅವುಗಳನ್ನು ಪರಿಚಯಿಸಿದೆ. ಇವು ಗ್ರಾಮೀಣ ಪ್ರದೇಶದ ಜನರು ಮನೆಗಳಲ್ಲಿ ತಮ್ಮ ದೈನಂದಿನ ಬಳಕೆಗೆ ಬಳಸುವ ವಸ್ತುಗಳು. ಮಣ್ಣು , ಶಿಲೆ, ಲೋಹ, ಬೆತ್ತ, ಬಿದಿರು, ಹಗ್ಗ ಇತ್ಯಾದಿ ಪ್ರಾಕೃತಿಕ ವಸ್ತುಗಳಿಂದ ನಿರ್ಮಿಸಿಕೊಂಡ ಸಾಮಗ್ರಿಗಳು ಇಲ್ಲಿವೆ. ಕೆಲವು ವಸ್ತುಗಳ ಬಳಕೆ ಈಗ ಬೇರೆ ಬೇರೆ ಕಾರಣಗಳಿಗೆ ತಪ್ಪಿಹೋಗಿದೆ. ಎತ್ತಿನಕೊಂಬಿನ ನಶ್ಯದಡಬ್ಬಿ, ಟೆಂಗುಗಡಿಗೆ, ಮಾನಿಬೇರಿ ಟೋಪಿಯಂಥ ಅಪೂರ್ವ ವಸ್ತುಗಳೂ ನಮ್ಮ ವಸ್ತು ಸಂಗ್ರಹಾಲಯದಲ್ಲಿವೆ. ಅವುಗಳ ವಿವರಗಳು ಕೂಡ ಇಲ್ಲಿ ಸೇರ್ಪಡೆಯಾಗಿವೆ.

೧. ಕುಟ್ಟಾಣಿ



“ಮಧ್ಯ ಗುಳಿಯಿರುವ ಕಲ್ಲು ಅಥವಾ ಕಬ್ಬಿಣದ ಸಲಕರಣೆ. ಇದನ್ನು ಕುಟ್ಟಿರಲು, ಕುಟ್ಟುವ ಕಲ್ಲು, ಕುಟ್ಟೊರಲು, ಕುಟ್ಟಾಣಿ. ಇತ್ಯಾದಿ ಹೆಸರುಗಳಿಂದ ಕರೆಯುವುದುಂಟು”[೧] ಇದಕ್ಕೆ ಕುಟ್ಟುವಂತಹ ಸಣ್ಣದಾದ ಗುಂಡು ಕಲ್ಲು ಇರುತ್ತದೆ. ಅಡಿಕೆ ಹೋಳು, ಎಲೆ, ಸುಣ್ಣವನ್ನು ಇದರ ಗುಳಿಯಲ್ಲಿ ಹಾಕಿ ಸಣ್ಣಗೆ ಹುಡಿಯಾಗುವಂತೆ ಕುಟ್ಟುತ್ತಾರೆ. ಹಲ್ಲಿಲ್ಲದ ವೃದ್ಧರು ಸದಾ ತಮ್ಮ ಬಳಿಯಲ್ಲಿ ಈ ಕುಟ್ಟಾಣಿಯನ್ನು ಇಟ್ಟುಕೊಳ್ಳುತ್ತಿದ್ದರು. ಪುಟ್ಟ ಬಟ್ಟಲು ಮತ್ತು ಕುಟ್ಟುವ ಸಲಕರಣೆಗಳಿಗೆ ದಾರ ಅಥವಾ ಸಣ್ಣ ಚೀನು ಸೇರಿಸಿ ಅವು ಬೇರೆಯಾಗದಂತೆ ಇಟ್ಟುಕೊಳ್ಳುತ್ತಿದ್ದರು. ತಮ್ಮ ಮನೆಯಿಂದ ಒಂದೆರಡು ದಿನದ ಮಟ್ಟಿಗೆ ಹೊರಗಡೆ ಹೋಗಬೇಕಾದರೆ ತಮ್ಮ ಹೆಗಲಮೇಲೆ ದಾರದಿಂದ ಕಟ್ಟಿದ ಕುಟ್ಟಾಣಿಯನ್ನು ನೇತು ಹಾಕಿಕೊಂಡು ಹೋಗುತ್ತಿದ್ದರು. ಅಲ್ಲದೇ ಇದನ್ನು ಔಷಧಿ ಗುಣವನ್ನೊಳಗೊಂಡ ಗಿಡಮೂಲಿಕೆಗಳನ್ನು ಸಹ ಕುಟ್ಟಲು ಬಳಸುತ್ತಿದ್ದರು.

೨. ಅರೆಕಲ್ಲು




ಇದನ್ನು ಅರೆಕಲ್ಲು, ಹಸೆಕಲ್ಲು ಅಥವಾ ರುಬ್ಬುವ ಕಲ್ಲು ಎಂದೂ ಸಹ ಕರೆಯುವರು. ಸಮತಟ್ಟಾಗಿ ಚೌಕಕಾರದಲ್ಲಿ ಇರುತ್ತದೆ. ಅಡುಗೆ ಮನೆಯ ಒಂದು ಮೂಲೆಯಲ್ಲಿ ನೆಲದೊಳಗೆ ಹುದುಗಿರುತ್ತಾರೆ. ಅರೆಕಲ್ಲು ಹಸೆಕಲ್ಲಿನಿಂದಾಗಿರುವುದು. ಇದನ್ನು ಮುದ್ದೆ ಕಟ್ಟಲು ಹಳ್ಳಿಯ ಜನರು ಬಳಸುತ್ತಿದ್ದರು. ಒಗ್ಗರಣೆ ಮಾಡಲು ಈರುಳ್ಳಿ, ಬೆಳ್ಳುಳ್ಳಿ, ಚಕ್ಕೆಮಸಾಲೆ ಇತ್ಯಾದಿ ಪದಾರ್ಥಗಳನ್ನು ಜಜ್ಜಲು ಬಳಸುತ್ತಾರೆ. ಮದುವೆ ಶಾಸ್ತ್ರಗಳಲ್ಲಿ ಮದುವೆ ಹುಡುಗಿ ಒಬ್ಬಳೆ ಹಸೆಮಣೆಯ ಮೇಲೆ ಕೂರಬಾರದೆಂದು ಅವಳ ಪಕ್ಕದಲ್ಲಿ ಇಡುತ್ತಾರೆ.





೩. ಹಿಟ್ಟಿನ ದೊಣ್ಣೆ



ಹಿಟ್ಟಿನ ದೊಣ್ಣೆಯು ಒಂದು ಮರದ ತುಂಡಾಗಿದ್ದು, ಎರಡರಿಂದ ಮೂರು ಅಡಿ ಉದ್ದವಿರುತ್ತದೆ. ಇದನ್ನು ಹಿಟ್ಟು ಬೇಯಿಸುವಾಗ ಅದನ್ನು ಹದಗೊಳಿಸಲು ಬಳಸುತ್ತಿದ್ದರು. ಹಿಟ್ಟು ಬೇಯುವ ಸಂದರ್ಭದಲ್ಲಿ ಅದು ಗಂಟು ಕಟ್ಟಿಕೊಳ್ಳದ ಹಾಗೆ ಈ ದೊಣ್ಣೆಯನ್ನು ತಿರುಗಿಸುವುದರ ಮೂಲಕ ಹಿಟ್ಟನ್ನು ಮಾಡುತ್ತಿದ್ದರು.

೪. ಮರಗೆ



ಮುದ್ದೆಯನ್ನು ಕಟ್ಟುವಾಗ ಕೈಗಳಿಗೆ ಬಿಸಿಯಾಗದಿರಲು ಮರದಿಂದ ಮಾಡಿದ ಮರಗೆಯನ್ನು ಬಳಸುತ್ತಿದ್ದರು. ಮುಂದೆ ಹಗಲವಾದ ಬಟ್ಟಲಿನಾಕಾರವನ್ನು ಹೊಂದಿದ್ದು ಹಿಂದೆ ಹಿಡಿದುಕೊಳ್ಳಲು ಉದ್ದವಾದ ಹಿಡಿ ಇರುತ್ತದೆ.

೫.ಎರ್ಮ್ಮಳ್ಳು/ಹೆರೆಮಣೆ











ತೆಂಗಿನ ಕಾಯಿ ತುರಿಯಲು ಬಳಸುವ ವಸ್ತು. ತೆಂಗಿನಕಾಯಿಯನ್ನು ಇದರ ಹಲ್ಲುಗಳಿಂದ ತುರಿದಾಗ ಕಾಯಿ ಸಣ್ಣ ಸಣ್ಣ ತುರಿಗಳಾಗಿ ಕೆಳಗೆ ಉದುರುತ್ತದೆ. ಕಬ್ಬಿಣದ ತಗಡನ್ನು ಅಲ್ಲಲ್ಲಿ ಮೇಲ್ಮುಖವಾಗಿ ಬಾಗಿಸಿ ಸಾಲು ಹಲ್ಲುಗಳು ಬರುವಂತೆ ರಚನೆ ಮಾಡಿರುತ್ತಾರೆ. (ಇದು ಇತ್ತೀಚಿನ ಚೌಕ/ಆಯತಾಕಾರದ ತುರಿಮಣೆಗಳಲ್ಲಿರುತ್ತವೆ). ಆಯತಾಕಾರದಲ್ಲಿರುವ ಇದರ ಮಣೆಯ ನಾಲ್ಕು ಮೂಲೆಗಳು ಭದ್ರವಾಗಿ ನೆಲದಲ್ಲಿ ಸ್ಥಾಪಿತವಾಗಲು ಕಾಲುಗಳನ್ನು ಜೋಡಿಸುತ್ತಾರೆ. ಉದ್ದಗಲಗಳು ೬ಥ೮ ಇಂಚು, ಎರಡು ಇಂಚು ಎತ್ತರ ಇರುತ್ತವೆ.

೬. ಕವೆಗೋಲು



ರಾಗಿ ಮುದ್ದೆಯನ್ನು ಮಾಡುವಾಗ ಪಾತ್ರೆಯನ್ನು ಕವೆಗೋಲು ಅಥವಾ ಕಮಕಡ್ಡಿಯ ಮೂಲಕ ಹಿಡಿದು ಮಾಡುತ್ತಿದ್ದರು. ಇದರಿಂದ ಪಾತ್ರೆಯ ಬಿಸಿ ಮುದ್ದೆ ಮಾಡುವವರಿಗೆ ತಗಲುತ್ತಿರಲಿಲ್ಲ. ಅಲ್ಲದೆ ಮುದ್ದೆಯನ್ನು ಸರಾಗವಾಗಿ ಹೊಂದಿಸಲು ಸಾಧ್ಯವಾಗುತ್ತಿತ್ತು. ಇದನ್ನು ಮರದಿಂದ ಅಥವಾ ಕಬ್ಬಿಣದಿಂದ ತಯಾರಿಸಲಾಗಿದ್ದು ಇದು ಇಂಗ್ಲೀಷಿನ 'ವೈ' ಆಕಾರದಲ್ಲಿದೆ.

೭. ರಾಗಿಕಲ್ಲು



ರಾಗಿಕಲ್ಲು ಒಂದು ಗುಂಡಾಕಾರಾದ ಕಲ್ಲಿನದ್ದಾಗಿದ್ದು. ಇದನ್ನು 'ಗುರುಸಾಣೆ' ಎಂಬ ವಿಶೇಷ ಕಲ್ಲಿನಿಂದ ವಡ್ಡರು ತಯಾರಿಸಿರುತ್ತಾರೆ. ಇದನ್ನು ರಾಗಿಹಿಟ್ಟು, ಅಕ್ಕಿಹಿಟ್ಟು, ಜೋಳದಹಿಟ್ಟು ಮಾಡಲು ಹಾಗೂ ಧಾನ್ಯಗಳನ್ನು ಹೊಡೆದು ಬೇಳೆ ಮಾಡಲು ಬಳಸುತ್ತಿದ್ದರು. ಈ ರಾಗಿ ಕಲ್ಲಿನ ಮಧ್ಯ ಒಂದು ತೂತು ಇದ್ದು ಅದಕ್ಕೆ ಒಂದು ಚಿಕ್ಕ ಗೂಟವನ್ನು ಹಾಕಿ ಮೇಲೆ ಕೆಳಗಿನ ಎರಡು ಕಲ್ಲನ್ನು ಒಂದುಗೂಡಿಸಲಾಗಿರುತ್ತದೆ.





ಮೇಲಿನ ಕಲ್ಲಿನ ಒಂದು ಪಕ್ಕಕ್ಕೆ ಒಂದು ಚಿಕ್ಕ ಗುಳಿಯಿದ್ದು. ಅದಕ್ಕೂ ಒಂದು ಚಿಕ್ಕ ಗೂಟವನ್ನು ಹಾಕಲಾಗಿದ್ದು, ಅದನ್ನು ಹಿಡಿದು ಸುತ್ತಿಸುವುದರ ಮೂಲಕ ಧಾನ್ಯಗಳನ್ನು ಹಿಟ್ಟು ಮಾಡಿಕೊಳ್ಳುತ್ತಿದ್ದರು. ಮುಖ್ಯವಾಗಿ ರಾಗಿಯನ್ನು ಹೆಚ್ಚಾಗಿ ಹಿಟ್ಟು ಮಾಡಿಕೊಳ್ಳುತ್ತಿದ್ದರಿಂದ ಇದಕ್ಕೆ ರಾಗಿಕಲ್ಲು ಎಂಬ ಹೆಸರು ಬಂದಿದೆ. ಈ ರಾಗಿಕಲ್ಲು ಪೂಜೆಗೂ ಸಹ ಒಳಪಟ್ಟಿದೆ.

ಜನಪದರು ಮುಂಜಾನೆ ಏಳುತ್ತಲೇ ಬಾಂಧವ್ಯ ಬೆಸೆದುಕೊಳ್ಳುವುದು ಬೀಸುವಕಲ್ಲಿನೊಂದಿಗೆ. ಬೀಸುಕಲ್ಲು ಪ್ರಾಚೀನ ಇತಿಹಾಸವನ್ನು ಹೊಂದಿರುವಂತದ್ದು. ಈ ಕಲ್ಲಿನ ಬಗ್ಗೆ ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. ಮಂಗರಸನ ನಿಘಂಟುವಿನಲ್ಲಿ 'ಬೀಸುವ ಕಲ್ಲಕ್ಕುಂ' ಎಂದಿದೆ. ಇದನ್ನೇ 'ಸಂಘಟನಿಕ್ಕು' ಎಂದು ಸಂಸ್ಕೃತದಲ್ಲಿ ಕರೆಯಲಾಗುತ್ತದೆ.

ಮನೆಯ ಹೆಂಗಸು ಶ್ರಮದಾಯಕವಾದ ಬೀಸುವ ಕೆಲಸವನ್ನು ನಿರ್ವಹಿಸಬೇಕಿತ್ತು. ಹೀಗಾಗಿ ಬೀಸುವಾಗ ಉಂಟಾಗುವ ದೈಹಿಕ ಆಯಾಸವನ್ನು ನೀಗಿಸಿಕೊಳ್ಳಲು ಆಕೆ ತನ್ನ ಸುಖ-ದು:ಖಗಳ ಬಗ್ಗೆ, ಅಣ್ಣ-ತಮ್ಮಂದಿರ ಬಗ್ಗೆ, ಸೋದರಿಯರ ಬಗ್ಗೆ, ತಂದೆ-ತಾಯಿಗಳ ಬಗ್ಗೆ ಹಾಡುಗಳನ್ನು ಕಟ್ಟಿಕೊಂಡು ಹಾಡಿಕೊಳ್ಳುತ್ತಿದ್ದರು. ಹೀಗೆ ಹಾಡಿದಂತಹ ಹಾಡುಗಳು ಅದ್ಭುತ ಜನಪದ ಸಾಹಿತ್ಯ ಸೃಷ್ಟಿಗೆ ಕಾರಣವಾಗಿರುವುದನ್ನು ನಾವು ನೋಡಬಹುದಾಗಿದೆ.

೮. ಕಡೆಗೋಲು



ಇದನ್ನು ಕಡೆಯುವ ಕೋಲು ಅಥವಾ ಮೊಸರು ಕಡೆಯುವ ಮಂತು ಎಂದು ಕರೆಯುವರು. ಇದು ಮೊಸರು ಕಡೆದು, ಬೆಣ್ಣೆ ತೆಗೆಯಲು ಮತ್ತು ಮಜ್ಜಿಗೆ ಮಾಡಲು ಬಳಸುವ ಒಂದು ಸಾಧನಕಡೆಗೋಲಿನಲ್ಲಿ ಎರಡು ಭಾಗಗಳಿರುತ್ತವೆ. ಒಂದು ನಾಲ್ಕೈದು ಅಡಿ ಉದ್ದದ ಸ್ವಲ್ಪ ಸಣ್ಣದಾದ, ಕೈಯಿಂದ ಸುಲಭವಾಗಿ ಹಿಡಿಯಬಹುದಾದ ಕೋಲು ಇರುತ್ತದೆ. ಇದನ್ನು ಬಿದಿರಿನ ಗಳ ಅಥವಾ ಮರದ ಉದ್ದವಾದ ಕೋಲಿನಿಂದ ಮಾಡಲಾಗಿದೆ. ಇದರ ಕೆಳಗಿನ ಒಂದು ತುದಿಗೆ ಅಳವಡಿಸಿರುವ ಒಂದು ಮಂತು ಇರುತ್ತದೆ. ಇದನ್ನು ತೇಗ, ಹೊನ್ನೆ, ಮತ್ತಿ ಮೊದಲಾದ ಮೃದು ಮರಗಳ ತುಂಡಿನಿಂದ ತಯಾರಿಸಲಾಗಿರುತ್ತದೆ. ಮೂರು ಅಥವಾ ನಾಲ್ಕು ಇಂಚು ಎತ್ತರ, ನಾಲ್ಕು ಐದು ಇಂಚು ವ್ಯಾಸದ ವೃತ್ತಾಕಾರದ ಮಂತಿನ ಮೇಲ್ಮೈ ಮತ್ತು ಕೆಳಮೈ ಚಪ್ಪಟೆಯಾಗಿರುತ್ತದೆ. ಕಡಗೋಲಿನ ಮಧ್ಯಕ್ಕೆ ಮಾರುದ್ದದ ಎರಡೆಳೆಯ ಸಣ್ಣ ಹಗ್ಗವನ್ನು

ಸುರುಳಿಯಾಗಿ ಸುತ್ತಿ ಅದರ ಕೆಳ ತುದಿಯನ್ನು ಎಡಗೈಯಿಂದ, ಮೇಲ್ತುದಿಯನ್ನು ಬಲಗೈಯಿಂದ ಹಿಡಿದು ಎಳೆದು ಬಿಟ್ಟು ತಿರುಗಿಸಿದರೆ ಮಂತು ಮಡಿಕೆಲ್ಲಿರುವ ನೀರು ಬೆರೆಸಿದ ಮೊಸರಿನೊಳಗೆ ಮಂತು ನಿಂತ ಜಾಗದಲ್ಲೇ ಹಿಂದಕ್ಕೆ ಮುಂದಕ್ಕೆ ತಿರುಗಿ ಮೊಸರನ್ನು ಕಡಿಯುತ್ತಿದ್ದರು. ಇದು ಮಡಿಕೆಗೆ ತಾಗುತ್ತಿರಲಿಲ್ಲ.

ಕಡಗೋಲು ಪ್ರಾಚೀನತೆಯನ್ನು ಹೊಂದಿರುವ ಮನೆಬಳಕೆಯ ವಸ್ತು. ಮಂದರ ಪರ್ವತವನ್ನು ಕಡಗೋಲನ್ನಾಗಿ ಮಾಡಿಕೊಂಡು ದೇವದಾನವರು ಸಮುದ್ರಮಂಥನ ಮಾಡಿದರು ಎಂದು ಪುರಾಣದಲ್ಲಿ ಉಕ್ತವಾಗಿದೆ. ಕೃಷ್ಣ ಬೆಣ್ಣೆ ಕದಿಯುವ ಪ್ರಸಂಗ ಮಹಾಭಾರತದಲ್ಲಿ ಬರುತ್ತದೆ. ಯಶೋಧೆ ಗೋಪಿಕಾಸ್ತ್ರೀಯರೊಡನೆ ಕಡಗೋಲಿನಿಂದ ಮಜ್ಜಿಗೆ ಕಡಿಯುವುದರ ಪ್ರಸ್ತಾಪವಿದೆ.

೯. ಲಟ್ಟಣಿಗೆ



ಲಟ್ಟಣಿಗೆಯನ್ನು ಚಪಾತಿ, ಹೋಳಿಗೆ ಇತ್ಯಾದಿಗಳನ್ನು ಲಟ್ಟಿಸಲು ಬಳಸುತ್ತಿದ್ದರು. ಲಟ್ಟಣಿಗೆಯಿಂದ ಲಟ್ಟಿಸುವಾಗ 'ಲಟ್ ಲಟ್' ಎಂದು ಶಬ್ದ ಬರುವುದರಿಂದ ಇದು ಅನುಕರಣಾತ್ಮಕವಾಗಿ ಬಂದ ಹೆಸರಾಗಿದೆ. ಉತ್ತರ ಕರ್ನಾಟಕದಲ್ಲಿ ಲಟ್ಟಣಿಗೆಯನ್ನು 'ಬೆಲ್ಲಣಿಗೆ, ಲಟ್ಟಣಿಗೆ' ಎಂದು ಕರೆಯುತ್ತಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ 'ಕರ್ಜಿಕಾಯಿ ಕೋಲು' ಎಂದು, ಮಲೆನಾಡಿನ ಕಡೆ 'ಲತ್ತೆ ಗುಣುಕು' ಎಂದು, ಮೈಸೂರಿನ ಕಡೆ 'ಲತ್ತೋಡು', 'ಹಪ್ಪಳದ ಕೋಲು' ಎಂದು, ತುಮಕೂರಿನಲ್ಲಿ 'ಹಪ್ಪಳದ ರಥಗುಂಡು' ಎಂದು ಕರೆಯುವುದು ವಾಡಿಕೆ. ಪ್ರಾದೇಶಿಕವಾಗಿ ಬೇರೆ ಬೇರೆ ನಾಮಗಳಿಂದ ಕರೆದರೂ ಕರ್ನಾಟಕದಾದ್ಯಂತ ಲಟ್ಟಣಿಗೆಯನ್ನು ಬಳಸುತ್ತಾರೆ.

೧೦. ಬಾರದ ಮುಂಡು







ಇದನ್ನು ಮೆಣಸಿನ ಹಣ್ಣಿನ ಖಾರವನ್ನು ಹಿಡಿಯಲು ಈ ಮುಂಡವನ್ನು ಬಳಸುತ್ತಾರೆ. ಒರಳಿನಲ್ಲಿ ಸಾಂಬಾರು ಪಾದಾರ್ಥಗಳನ್ನು ಕಾರದಪುಡಿಯನ್ನು ಕೈನಲ್ಲಿ ಕುಟ್ಟಲು ಬಳಸುತ್ತಿದ್ದರು. ಸುಮಾರು ೨ ರಿಂದ ೩ ಅಡಿ ಉದ್ದದ, ೩ ರಿಂದ ೪ ಇಂಚು ವ್ಯಾಸದ ಒಂದು ಮರದ ತುಂಡು. ಇದಕ್ಕೆ ತುದಿಯಲ್ಲಿ ಯಾವುದೇ ರೀತಿಯ ಬಳೆಗಳನ್ನು ಅಳವಡಿಸಿರುವುದಿಲ್ಲ.

೧೧. ಒಳಕಲ್ಲು



ಇದೊಂದು ಕಲ್ಲಿನಿಂದ ಮಾಡಲ್ಪಟ್ಟ ಒಂದು ಸಾಧನ. ಇದನ್ನು ಒಂದು ದೊಡ್ಡ ಗಾತ್ರದ ಗುಂಡಾದ ಅಥವಾ ಚೌಕಾಕಾರದ ಕಲ್ಲನ್ನು ತೆಗೆದುಕೊಂಡು, ಅದರ ಮಧ್ಯ ಭಾಗದಲ್ಲಿ ಒಂದು ದೊಡ್ಡ ಕುಳಿಯನ್ನು ಮಾಡಿ ಆ ಕುಳಿಗೆ ಹೊಂದುಕೊಳ್ಳುವ ಹಾಗೆ ಒಂದು ಗುಂಡು ಕಲ್ಲನ್ನು ತಯಾರು ಮಾಡಲಾಗಿರುತ್ತದೆ. ಆ ಗುಂಡು ಕಲ್ಲಿಗೆ ತಲೆಯ ಮೇಲೆ ಒಂದು ಸಣ್ಣ ಕುಳಿಯನ್ನು ಮಾಡಿ ಅದಕ್ಕೆ ಸಣ್ಣದಾದ ಗೂಟವನ್ನು ಸಿಕ್ಕಿಸಿರುತ್ತಾರೆ. ಈ ಗೂಟವನ್ನು ಹಿಡಿದು ಬಲದಿಂದ ಎಡಕ್ಕೆ ತಿರುಗಿಸುವ ಮೂಲಕ ಸಾಂಬಾರು ಪದಾರ್ಥ, ಚಟ್ನಿ, ಅಕ್ಕಿಹಿಟ್ಟು ಇತ್ಯಾದಿಗಳನ್ನು ರುಬ್ಬಲು ಬಳಸುತ್ತಾರೆ. ಅಲ್ಲದೇ ಈ ಒಳಕಲ್ಲಿನಲ್ಲಿ ಭತ್ತವನ್ನು ಕುಟ್ಟಿ ಅಕ್ಕಿಯನ್ನು ಮಾಡುತ್ತಿದ್ದರು. ಕೆಲವು ಪೂಜೆಗಳನ್ನು ಮಾಡುವಾಗ ಒಳಕಲ್ಲಿಗೆ ಮಹತ್ವವಾದ ಸ್ಥಾನವನ್ನು ನೀಡಲಾಗಿದೆ. ತೊಟ್ಟಿಲು ಶಾಸ್ತ್ರವನ್ನು ಮಾಡುವಾಗ ಮೊದಲು ತೊಟ್ಟಿಲಿಗೆ ಒಳಕಲ್ಲಿನ ಗುಂಡನ್ನು ಹಾಕಿ ಪೂಜೆ ಮಾಡುತ್ತಾರೆ.

ಅನೇಕ ಪುರಾಣ, ಜನಪದ ಕಥೆ ಮತ್ತು ಹಾಡುಗಳು ಒರಳುಕಲ್ಲಿನೊಂದಿಗೆ ಸೇರಿವೆ. ಇದು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿರುವ ಸಾಧನ. ಒಳಕಲ್ಲು ಅನೇಕ ಶಾಸ್ತ್ರ ಸಂಬಂಧಗಳಲ್ಲಿಯೂ ಬಳಕೆಯಾಗುತ್ತದೆ. ಮದುವೆಯ ಹಿಂದಿನ ದಿನ ಚಪ್ಪರದ ಶಾಸ್ತ್ರದಲ್ಲಿ ಭತ್ತ ಕುಟ್ಟುವ ಶಾಸ್ತ್ರ ಮಾಡುತ್ತಾರೆ. ಹಿಂದಿನ ಮದುವೆ ಕಾರ್ಯದಲ್ಲಿ ಗ್ರಾಮದ ಎಲ್ಲರೂ ಸೇರಿ ಭತ್ತ ಕುಟ್ಟಿ ಮದುವೆ ಕಾರ್ಯಕ್ಕೆ ಬೇಕಾದ ದವಸಧಾನ್ಯ ಸಿದ್ಧ ಮಾಡುತ್ತಿದ್ದುದ್ದರ ಸಂಕೇತವೇ ಈ ಶಾಸ್ತ್ರವೆಂದು ನಮಗೆ ಅನಿಸುತ್ತದೆ. 'ಒರಳಿನಲ್ಲಿ ಕೂತರೆ ಒನಕೆ ಪೆಟ್ಟು ತಪ್ಪೀತೆ', 'ಒರಳ ಹೋಗಿ ಮದ್ದಳೆ ಸಂಗಡ ಹೇಳಿದ ಹಾಗೆ', 'ಒರಳಿನಲ್ಲಿ ಹರಳು ಹುಡಿದರೆ ಅರಳು ಆದೀತೆ' ಎಂಬ ಇತ್ಯಾದಿ ಗಾದೆಗಳು ಒಳಕಲ್ಲನ್ನು ಕುರಿತ ಹೇಳುತ್ತವೆ.



೧೨. ಕಬ್ಬಿಣದ ಒಲೆ



ಇದು ಸಂಚಾರಿ ಒಲೆ ಎನ್ನಬಹುದು. ಇದನ್ನು ಎಲ್ಲಿಗೆ ಬೇಕೋ ಅಲ್ಲಿಗೆ ತೆಗೆದುಕೊಂಡು ಹೋಗಿ ಎಲ್ಲಿ ಬೇಕೊ ಅಲ್ಲಿ ಇಟ್ಟು ಅಡುಗೆ ತಯಾರಿಸಬಹುದು. ಬೆಂಕಿಯ ಹೆಚ್ಚಿನ ಶಾಖವನ್ನು ತಡೆಯಬೇಕಾದ ಕಾರಣ ಇದನ್ನು ಕಬ್ಬಿಣದಿಂದ ತಯಾರಿಸಲಾಗಿದೆ. ಇದು ದುಂಡನೇಯ ಆಕಾರದಲ್ಲಿದ್ದು, ಅರ್ಧ ಅಡಿಯಿಂದ ಒಂದು ಅಡಿ ಎತ್ತರವಿರುವ ಈ ಕಬ್ಬಿಣದ ಒಲೆಯ ಮೂರು ಭಾಗ ಕಬ್ಬಿಣದ ತಗಡಿನ ಮೈಯಿಂದ ಕೂಡಿರುತ್ತದೆ. ಸೌದೆ ಇಡುವುದಕ್ಕೆ ಒಂದು ಭಾಗದಲ್ಲಿ ಖಾಲಿ ಇರುತ್ತದೆ. ಪಾತ್ರೆ ಇಡಲು ಅನುಕೂಲವಾಗುವಂತೆ ಕಬ್ಬಿಣದ ಮೊಳೆಗಳನ್ನು ಕೂಡಿಸಿರಲಾಗುತ್ತದೆ. ಇದನ್ನು ಹಿಡಿದುಕೊಳ್ಳಲು ಎರಡು ಕಡೆ ಬಳೆಗಳಿರುತ್ತದೆ. ಇದರ ಬಳಕೆ ಇತ್ತೀಚೆಗೆ ಕಡಿಮೆಯಾಗಿದೆ.

೧೩. ಮೊರ



ಮೊರವನ್ನು ನಮ್ಮ ಜನಪದರು ಲಕ್ಷ್ಮೀಯ ಪ್ರತಿರೂಪ ಅಥವಾ ದೇವರು ಎಂದೇ ಭಾವಿಸಿರುತ್ತಾರೆ. ಇದನ್ನು ಬಿದಿರಿನ ಅಚ್ಚಿಗಳಿಂದ ಎಣೆದಿರಲಾಗುತ್ತದೆ. ಈ ಮೊರವು ಚೌಕಾಕಾರವಾಗಿದ್ದು, ಇದನ್ನು ಧಾನ್ಯಗಳನ್ನು ಕೇರಲು, ಕಲ್ಲು ಮಣ್ಣಿನಿಂದ ಧಾನ್ಯಗಳನ್ನು ಬೇರ್ಪಡಿಸಲು ಹಾಗೂ ಹಬ್ಬಗಳ ಸಂದರ್ಭಗಳಲ್ಲಿ ಮನೆಯ ಹೆಣ್ಣು ಮಕ್ಕಳಿಗೆ ಬಾಗೀನವನ್ನು ಕೊಡಲು ಬಳಸುತ್ತಾರೆ. ಅಲ್ಲದೇ ಕೆಲವು ಪ್ರದೇಶಗಳಲ್ಲಿ ಹುಟ್ಟಿದ ಮಗು ಸತ್ತು ಹೋದರೆ ಅದನ್ನು ಮೊರದಲ್ಲಿ ಇಟ್ಟು ಮಣ್ಣು ಮಾಡುವುದುಂಟು.

೧೪. ಕುಂದಣಿಗೆ



ಈ ಕುಂದಣಿಗೆಯನ್ನು ಕಮ್ಮಾರರು ಕಬ್ಬಿಣದಿಂದ ಅಥವಾ ಕಲ್ಲಿನಿಂದ ತಯಾರಿಸುತ್ತಾರೆ. ಇದು ಒಂದು ಅಥವಾ ಎರಡು ಅಡಿಉದ್ದವಿರುತ್ತದೆ. ಇದು ನೋಡಲು ಬಾವಿಯಾಕಾರದಲ್ಲಿದ್ದು, ಇದರ ಬಾಯಿ ಅಗಲವಾಗಿರುತ್ತದೆ. ಈ ಕುಂದಣಿಗೆಯಲ್ಲಿ ಭತ್ತ, ರಾಗಿ ಮುಂತಾದ ಧಾನ್ಯಗಳನ್ನು ಕುಟ್ಟುತ್ತಾರೆ. ಇದಲ್ಲದೆ ವಿಶೇಷ ಸಂದರ್ಭಗಳಲ್ಲಿ ಕಜ್ಜಾಯವನ್ನು ಮಾಡಲು ಅಕ್ಕಿಯನ್ನು ಹಿಡಿಯುತ್ತಾರೆ. ಹೀಗೆ ತುಂಬಾ ವಿಶೇಷವಾದ ಕುಂದಣಿಗೆಯು ಇತ್ತೀಚಿನ ದಿನಗಳಲ್ಲಿ ಸಂಪೂರ್ಣವಾಗಿ ಮಾಯವಾಗುತ್ತದೆ.

೧೫. ಕಡಾಯಿ



ಕಿರಿದಾದ ಬಾಯಿ ಇರುವ ಸ್ವಲ್ಪ ಎತ್ತರದ ದುಂಡನೆಯ ಪಾತ್ರೆ. ಇದನ್ನು 'ನೀರೊಲೆ ಪಾತ್ರೆ' ಎಂದು ಕರೆಯುತ್ತಾರೆ. ಇದನ್ನು ಕಂಚು, ಹಿತ್ತಾಳೆ ಹಾಗೂ ತಾಮ್ರ ಇತರೆ ಯಾವುದಾದರೊಂದು ಲೋಹದ ತಗಡಿನಿಂದ ಮಾಡಿರುತ್ತಾರೆ. ಮುಖ್ಯವಾಗಿ ಸ್ನಾನದ ಮನೆಯಲ್ಲಿ ನೀರೊಲೆಯ ಮೇಲೆ ಇಟ್ಟು ನೀರನ್ನು ಕಾಯಿಸಲು ಕಡಾಯಿಗಳನ್ನೇ ಬಳಸುತ್ತಾರೆ. ಇದನ್ನು ಅಡುಗೆ ಮಾಡಲೂ ಸಹ ಬಳಸುತ್ತಾರೆ. ಕೆಲವೊಂದು ಹಳ್ಳಿಗಳಲ್ಲಿಯೂ ಇಂದಿಗೂ ಸಹ ಹರಳೆಣ್ಣೆಯನ್ನು ಕಾಯಿಸಲು ಬಳಸಿಕೊಳ್ಳುತ್ತಾರೆ. ಕಡಾಯಕ್ಕೆ 'ಕಡಾಂಬಿ' ರೂಪವು ಇದೆ. ಸಂಸ್ಕೃತದ 'ಕಟಾಹ'ದ ತದ್ಭವ 'ಕಡಾಯಿ' ಎಂದು ಕಿಟೆಲ್ ಹೇಳಿದ್ದಾರೆ. ಇದಕ್ಕೆ ತಮಿಳಿನಲ್ಲಿ 'ಕಡಾರ', ಮಲೆಯಾಳಂನಲ್ಲಿ 'ಕಿಡಾರ' ಎಂಬ ರೂಪಗಳಿವೆ ಎಂದೂ ಸಹ ಹೇಳಿದ್ದಾರೆ.





೧೬. ಒಳಲೆ ಅಥವಾ ಒಳ್ಳೆ



ಇದು ಚಿಕ್ಕ ಮಕ್ಕಳಿಗೆ ಹಾಲು ಅಥವಾ ಔಷಧಿಗಳನ್ನು ಕುಡಿಸಲು ಬಳಸುವ ಸಾಧನ. ಕಬ್ಬಿಣ ಅಥವಾ ಬೆಳ್ಳಿಯಿಂದ ಮಾಡಲ್ಪಟ್ಟ ಒಳಲೆಗಳು ಹೆಚ್ಚು ಬಳಕೆಯಲ್ಲಿದೆ. ರಾಜ ಮಹಾರಾಜರು ಚಿನ್ನದ ಒಳಲೆಗಳನ್ನು ಬಳಸುತ್ತಿದ್ದರೆಂದು ಹೇಳುತ್ತಾರೆ. ಒಳಲೆಯು ಪುಟ್ಟ ಬಟ್ಟಲಿನಂತ್ತಿದ್ದು, ಒಂದು ಕಡೆ ಹಾಲು ಅಥವಾ ಔಷಧಿ ಮಗುವಿನ ಬಾಯೊಳಗೆ ಸುಲಭವಾಗಿ ಹರಿದು ಹೋಗಲು ಅನುಕೂಲವಾಗುವಂತೆ ಇಳಿಜಾರಾದ ಇಂಗ್ಲೀಷಿನ 'ವಿ' ಆಕಾರದ ಮೂತಿಯು, ಮತ್ತೊಂದು ಕಡೆ ಅದನ್ನು ಬೆರಳುಗಳಲ್ಲಿ ಹಿಡಿದುಕೊಳ್ಳಲು ಸಾಧ್ಯವಾಗುವಂತಹ ಹಿಡಿಯೂ ಇರುತ್ತದೆ. ಔಷಧಿಗಳನ್ನು ಮಕ್ಕಳಿಗೆ ನೀಡುವಾಗ ಒಳಲೆಯು ಒಂದು ಅಳತೆಯ ಪ್ರಮಾಣದಂತೆಯೂ ಬಳಸಲ್ಪಡುತ್ತದೆ.

೧೭. ಹಸೆಮಣೆ



ಇದು ಅತ್ತಿ ಮರದಿಂದ ಮಾಡಿದ ಒಂದು ಪೀಠ. ಸಾಮಾನ್ಯವಾಗಿ ಹಸೆಮಣೆ ಅತ್ತಿಮರದ್ದಾಗಿದ್ದು, ಅದರ ಮೇಲೆ ಚಿತ್ರಗಳನ್ನು ಬರೆಸಿರುತ್ತಾರೆ. ಕೆಲವರಲ್ಲಿ ವಧೂವರರು ಅತ್ತಿಮರದ ಮಣೆಯ ಮೇಲೆಯೇ ಕುಳಿತುಕೊಳ್ಳಬೇಕೆಂಬ ನಿಯಮವಿದೆ. ಮದುವೆಯ ಹಿಂದಿನ ದಿನ ಗಂಡಿನ ಕಡೆಯ ಕೆಲವು ಮುತ್ತೈದೆಯರು ಹೆಣ್ಣಿನ ಮನೆಗೆ ಒಸಗೆಯ ಸಾಮಾಗ್ರಿಗಳನ್ನು ತಂದು ಹೆಣ್ಣನ್ನು ಹಸೆಮಣೆಯ ಮೇಲೆ ಕೂರಿಸಿ ಹೊಸ ಸೀರೆಯನ್ನು ಉಡಿಸಿ ಒಸಗೆಯ ಸಾಮಾನನ್ನು ಅವಳ ಮಡಿಲಿಗೆ ತುಂಬುತ್ತಾರೆ. ಮದುವೆಯ ದಿನದಂದು ಹುಡುಗನನ್ನು ಹಸೆಮಣೆಯ ಮೇಲೆ ನಿಲ್ಲಿಸಿರಲಾಗುತ್ತದೆ. ಈ ಹಸೆಮಣೆಗೂ ಸಹ ಅರಿಶಿಣ, ಕುಂಕುಮ, ಹೂವು ಹಾಕಿ ಪೂಜೆ ಮಾಡುತ್ತಾರೆ. ಈ ಹಸೆಮಣೆಯ ಮೇಲೆ ಕೂರುವ ವಧೂವರರು ಸುಖವಾಗಿರಲೆಂದು

ಎಲ್ಲಾರು ಹರಸುತ್ತಾರೆ. ಮದುವೆಗಷ್ಟೆ ಅಲ್ಲದೇ ಹೆಣ್ಣು ನೆರೆದಾಗ ಹಸೆ ಮಣೆಯ ಮೇಲೆ ಕೂರಿಸಿ ಶಾಸ್ತ್ರ ಮಾಡುತ್ತಾರೆ. ಅಲ್ಲದೆ ಇತರೆ ಶುಭ ಕಾರ್ಯಗಳಲ್ಲಿಯೂ ಬಳಸಿಕೊಳ್ಳುತ್ತಾರೆ.

೧೮. ಒನಕೆ



ಧಾನ್ಯಗಳನ್ನು ಕುಟ್ಟಲು ಅಥವಾ ಜಜ್ಜಲು ಇರುವ ಒಂದು ಮರದ ಸಾಧನ. ಸುಮಾರು ಐದು ಅಡಿ ಉದ್ದದ್ದು. ಎರಡು ಕಡೆ ಕಬ್ಬಿಣದ ಬಳೆ ಇರುತ್ತದೆ. ಇದರಿಂದ ಒರಳಿನಲ್ಲಿ ಇರುವ ಧಾನ್ಯವನ್ನು ಕುಟ್ಟುತ್ತಾರೆ. ಭತ್ತವನ್ನು ಕುಟ್ಟಲು ಹೆಚ್ಚಾಗಿ ಬಳಸುತ್ತಾರೆ. ಗ್ರಹಣದ ಸಂದರ್ಭದಲ್ಲಿ ತಣಿಗೆಯಲ್ಲಿ ನೀರು ತುಂಬಿ ಅದರ ಮಧ್ಯ ಬಳೆಯಿರುವ ಒನಕೆಯನ್ನು ನಿಲ್ಲಿಸಿದರೆ ಗ್ರಹಣ ಹಿಡಿದಾಗ ಒನಕೆ ನಿಲ್ಲುತ್ತದೆಂಬ ನಂಬಿಕೆಯಿದೆ. ಮಳೆಗಾಗಿ ಪ್ರಾರ್ಥಿಸುವ ಸಂದರ್ಭದಲ್ಲಿ ಜೀವಂತ ಕಪ್ಪೆಯನ್ನು ಬಟ್ಟೆಯಲ್ಲಿ ಕಟ್ಟಿ ಒನಕೆಯ ತುದಿಗೆ ಬಿಗಿದು ಮೇಲೊಂದು ಚೊಂಬು ನೀರು ಸುರಿದು ಹೆಗಲ ಮೇಲೆ ಹೊತ್ತು ಕುಣಿಯುತ್ತಾರೆ. ಅಲ್ಲದೇ ಮದುಮೆಯ ಸಂದರ್ಭದಲ್ಲಿ ಒನಕೆ ಶಾಸ್ತ್ರ ಮಾಡುತ್ತಾರೆ. ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ದನಗಳನ್ನು ಕಿಚ್ಚಾಯಿಸಿ ನಂತರ ಅವುಗಳನ್ನು ಮನೆಗೆ ಕರೆತಂದು ಒನಕೆಯನ್ನು ಒದೆಸಿ ಒಳಗೆ ಕರೆದುಕೊಳ್ಳುತ್ತಾರೆ. ಇದರಿಂದ ಮನೆಗೆ ಶುಭವಾಗುವುದೆಂಬ ನಂಬಿಕೆಯಿದೆ.

ಒನಕೆಯಿಂದ ಕುಟ್ಟುವ ಕೆಲಸ ಶ್ರಮದಾಯಕವಾದದ್ದು. ಕುಟ್ಟುವ ಕೆಲಸದ ಆಯಾಸವನ್ನು ನೀಗಿಸಿಕೊಳ್ಳಲು ಜನಪದ ಸಾಹಿತ್ಯವು ಸೃಷ್ಟಿಯಾಯಿತು. ಇದಕ್ಕೆ ಒನಕೆವಾಡುಗಳೆಂದು ಕರೆಯುತ್ತಾರೆ.

"ಓಂ ಎಂದು ಕುಟ್ಟಬೇಕ ಸೋಹಂ ಎಂದು ಜೀಸಬೇಕ

ಓಂ ಸೋಹಂ ಎರಡು ತಿಳಿಯಬೇಕ ನಾರಿ ಹಾಕವ್ವ ಹಾರಿ"

ಎಂದು ಜನಪದ ಗರತಿ ಹಾಡಿಕೊಂಡಿದ್ದಾಳೆ. ಕುಟ್ಟುವ ಕೆಲಸವನ್ನು ಹೆಂಗಸರೇ ಮಾಡುತ್ತಾರಾದರು, ಗಂಡಸರೂ ಕುಟ್ಟುವ ಕೆಲಸದಲ್ಲಿ ಪಾಲ್ಗೊಳ್ಳುತ್ತಾರೆ.

'ಕರಿಸೀರೆ ಉಟ್ಟಿದ್ದಾಳೆ, ಕಾಲುಂಗರ ತೊಟ್ಟಿದ್ದಾಳೆ

ಸರ್ ಅಂತ ಹೋಗ್ತಾಳೆ ಬರ್ ಅಂತ ಬರ್ತಾಳೆ,



ಕರೆದವರ ಮನೆಗೆ ಬರುತ್ತಾಳೆ'

ಎಂಬ ಒಗಟು ಒನಕೆಯನ್ನು ಕುರಿತಾಗಿದೆ. ಇದರಿಂದ ಒನಕೆಯನ್ನು ಕಟ್ಟುವ ರೀತಿ, ಒನಕೆಯ ಸ್ವರೂಪ ಹಾಗೂ ಒನಕೆಯನ್ನು ನೆರೆಹೊರೆಯವರು ಕೊಳ್ಳುವುದರ ಎಲ್ಲಾ ವಿವರಗಳು ಇದೆ.

ಒನಕೆ ಸಂಬಂಧಿಯಾಗಿ ಹಲವು ನಂಬಿಕೆ, ಸಂಪ್ರದಾಯ ಮತ್ತು ಆಚರಣೆಗಳಿವೆ. ಎಮ್ಮೆ ಹಸುಗಳು ಹಾಲು ಕೊಡುವುದನ್ನು ನಿಲ್ಲಿಸಿದರೆ ದೃಷ್ಟಿತಾಗಿದೆ ಎಂದು ತಿಳಿದು ಒನಕೆಗೆ ಸುಣ್ಣ ಮತ್ತು ಕೆಮ್ಮಣ್ಣು ಹಚ್ಚಿ ಹೊಸಿಲ ಬಳಿ ಇಟ್ಟು ಎಮ್ಮೆ ಹಸುಗಳನ್ನು ದಾಟಿಸುತ್ತಾರೆ.

೧೯. ಸಾಣಿಗೆ



ಭತ್ತ, ರಾಗಿ, ಜೋಳ ಇತ್ಯಾದಿಗಳನ್ನು ಹಸನುಮಾಡುವಾಗ ಬಳಕೆಯಾಗುವ ವಸ್ತು. ಇದು ಸುಮಾರು ಹದಿನೆಂಟರಿಂದ ಇಪ್ಪತ್ತೆರಡು ಇಂಚು ವ್ಯಾಸವಿದ್ದು, ಎರಡರಿಂದ ಮೂರು ಇಂಚು ಎತ್ತರದ ಅಂಚುಳ್ಳದ್ದಾಗಿರುತ್ತದೆ. ಕೆಳಭಾಗವನ್ನು ಬೆತ್ತ ಅಥವಾ ಬಿದಿರಿನ ಸೀಳುಗಳನ್ನು ಬಳಸಿಕೊಂಡು ಉದ್ದಕ್ಕೂ ಮತ್ತು ಅಡ್ಡಕ್ಕೂ ಹಾಸಿಕೊಂಡು ಹೆಣೆಯಲಾಗುತ್ತದೆ. ಕಾಳುಗಳ ಗಾತ್ರಕ್ಕೆ ಅನುಸಾರವಾಗಿ ಕಣ್ಣುಗಳನ್ನು ಹೆಣೆದಿರುವ ಸಾಣಿಗೆಗಳಿರುತ್ತವೆ. ಭತ್ತ, ರಾಗಿ, ಜೋಳ, ಇತ್ಯಾದಿಗಳನ್ನು ಕಸ-ಕಡ್ಡಿ, ಮಣ್ಣಿನ ಪುಟ್ಟ ಹರಳುಗಳಿಂದ ಬೇರ್ಪಡಿಸಲು ಕೂಡ ಇದು ಉಪಯೋಗವಾಗುತ್ತದೆ. ಇದನ್ನು ಮೇದರು, ಕೊರಚರು ತಯಾರಿಸುತ್ತಾರೆ.

೨೦. ಒತ್ತು ಶಾವಿಗೆ ಒಳ್ಳು



ಶಾವಿಗೆ ಒಂದು ಆಹಾರ ಪದಾರ್ಥ. ಶಾವಿಗೆ ಒರಳನ್ನು ಮರದಿಂದ ತಯಾರಿಸಲಾಗುತ್ತದೆ. ತಳಭಾಗದಲ್ಲಿ ಬಿದಿರಿನಿಂದ ಸಿದ್ಧಪಡಿಸಿದ ಮೂರು ಅಥವಾ ನಾಲ್ಕು ಕಾಲುಗಳಿದ್ದು, ಹೊಟ್ಟೆಯ ಭಾಗದ ನಡುವೆ ವೃತ್ತಾಕಾರದ ಒರಳು ಇರುತ್ತದೆ. ಒಳಭಾಗಕ್ಕೆ ಕಂಚು, ತಾಮ್ರ, ಕಬ್ಬಿಣ ಅಥವಾ ಮರದಿಂದ ಮಾಡಿದ ಚಿತ್ರ ಕೊರೆದ ಅಂದರೆ ರಂಧ್ರವಿರುವ ಬಿಲ್ಲೆಯನ್ನು ಅಳವಡಿಸಿರುತ್ತಾರೆ. ರಂಧ್ರದೊಳಗೆ ಅಕ್ಕಿ ಅಥವಾ ಸಾವೆಯಿಂದ ತಯಾರಿಸಿದ ಹಿಟ್ಟನ್ನು ತುಂಬಿ ಅದರ ಮೇಲೆ ಒತ್ತುಮಣೆಯನ್ನು ಇಟ್ಟು ಮುಷ್ಠಿಯಿಂದ ಒತ್ತಿದರೆ ಅಥವಾ ಅಮುಕಿದರೆ ಬಿಲ್ಲೆಯ ರಂಧ್ರದಿಂದ ಮೂರುಕಾಲುಗಳ ನಡುವೆ ಹಿಟ್ಟು ದಾರದಂತೆ ಎಳೆಗಳ ರೂಪ ಪಡೆದು ಹೊರಬರುತ್ತದೆ. ಇದನ್ನು ಶಾವಿಗೆ ಮಣೆಗೆ ಬತ್ತಿಯಂತೆ ಉದ್ದವಾಗಿ ಉದುರಿಸಿಕೊಂಡು ಪಕ್ಕದಲ್ಲಿ ಇಡುತ್ತಾರೆ. ಇದನ್ನು ಒಂದು ಬತ್ತಿ, ಎರಡು ಬತ್ತಿ ಎಂದು ಎಣಿಕೆ ಮಾಡುವರು. ಇದು ಒತ್ತು ಶಾವಿಗೆ ಎಂದು ಹೆಸರು ಪಡೆದಿದೆ. ಮೇಲ್ಭಾಗದ ಒತ್ತು ಮಣೆಯನ್ನು ತಳಭಾಗದ ಹೊಟ್ಟೆಮಣೆಗೆ ಹೊಂದಿಕೆಯಾಗುವಂತೆ ಅಳವಡಿಸಿರಲಾಗುತ್ತದೆ. ಇದರ ಎರಡು ಬದಿಯಲ್ಲಿ ಕೈಗಳಿಂದ ಹಿಡಿದುಕೊಳ್ಳಲು ಹಿಡಿಗಳಿವೆ. ಶಾವಿಗೆಯನ್ನು ತಿನ್ನಲು ಕಾಯಿಹಾಲು, ಮೊಳಕೆ, ಹುರುಳಿಕಾಲುಸಾರು ಅಥವಾ ಕೋಳಿ ಸಾರನ್ನು ಮಾಡಿಕೊಳ್ಳುತ್ತಾರೆ.

೨೦. ಕಂಚಿನ ಚೊಂಬು



ಕಂಚಿನಿಂದ ತಯಾರಿಸಿದ ನೀರಿನ ಪಾತ್ರೆ ಇದಾಗಿದ್ದು, ನೀರನ್ನು ಕುಡಿಯಲು, ಮನೆಗೆ ಬಂದವರಿಗೆ ನೀರು ಕೊಡಲು ಬಳಸುತ್ತಿದ್ದರು.

೨೧. ಕಂಚಿನ ಪಾತ್ರೆ








ಕಂಚಿನಿಂದ ತಯಾರಿಸಲಾದ ಈ ಪಾತ್ರೆಯನ್ನು ಅಡುಗೆ ಮೊದಲಾದ ಗೃಹಕೃತ್ಯಕ್ಕೆ ಬಳಸುತ್ತಾರೆ. ಈ ಕಂಚಿನ ತಪ್ಪಲೆಯ ಬಾಯಿ ಅಗಲವಾಗಿರುತ್ತದೆ. ಇದನ್ನು ಕಾಫಿ ಕಾಯಿಸಲು ಹೆಚ್ಚಾಗಿ ಬಳಸುತ್ತಿದ್ದರು. ಅಲ್ಲದೆ ಬೇರೆ ಬೇರೆ ಆಹಾರವನ್ನು ಬೇಯಿಸಲು ಬಳಸುತ್ತಿದ್ದರು.

೧೩. ಕಡೊಲೆ



ಕಡೆಯ ಒಲೆ, ಮಗ್ಗಲಿನ ಒಲೆ, ಎರಡನೆ ಒಲೆ, ಎತ್ತೊಲೆ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಮಂಡ್ಯ ಜಿಲ್ಲೆಯಲ್ಲಿ ಇದನ್ನು 'ವಾಗೊಲೆ' ಎಂದೂ ಸಹ ಕರೆಯುತ್ತಾರೆ. ಸೌದೆ ಹೊಟ್ಟುವ ಮುಖ್ಯ ಒಲೆಯೊಂದಿದ್ದು, ಅದಕ್ಕಿಂತ ಸಣ್ಣದಾದ ಒಂದೋ, ಎರಡೋ ಮುಖ್ಯ ಒಲೆಯ ಎಡಕ್ಕೂ, ಬಲಕ್ಕೂ ಎರಡು ಬದಿಗೂ ಇರುತ್ತದೆ. ಇದು ಕಡೆಯ ಒಲೆಯಾಗಿದೆ.

೧೪. ಅಗಪೆ



ಜನಪದರು ಅಡುಗೆ ಮಾಡಲು ಮರದ ಸೌಟನ್ನು ಬಳಸುತ್ತಿದ್ದರು. ಇದನ್ನು ತೆಂಗಿನ ಕಾಯಿ ಚಿಪ್ಪಿಗೆ ಒಂದು ಮರದ ತುಂಡನ್ನು ಸಿಕ್ಕಿಸಿ, ಸೌಟನ್ನು ತಯಾರು ಮಾಡಿಕೊಳ್ಳುತ್ತಿದ್ದರು. ಇದನ್ನು ಆಹಾರವನ್ನು ಬೇಯಿಸುವಾಗ ಅದನ್ನು ತೊಳಸಲು ಬಳಸುತ್ತಿದ್ದರು. ಅನ್ನ, ಸಾಂಬಾರು, ಕಶಾಯ, ಇತ್ಯಾದಿ ಎಲ್ಲಾ ರೀತಿಯ ಅಡುಗೆಯನ್ನು ಮಾಡಲು ಅಗಪೆಯನ್ನು ಹೆಚ್ಚಾಗಿ ಬಳಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಲೋಹದ ಸೌಟುಗಳನ್ನು ಬಳಸುತ್ತಿದ್ದು ಈಗ ಮರದ ಸೌಟು ಕಣ್ಮರೆಯಾಗಿದೆ.

೧೫. ಮಡಿಕೆಗಳು



ಮಡಿಕೆಗಳು ಗುಂಡಾಗಿದ್ದು, ಇದನ್ನು ಕುಂಬಾರರು ಮಣ್ಣಿನಿಂದ ತಯಾರಿಸುತ್ತಿದ್ದರು. ಇದನ್ನು ಅಡುಗೆ ಮಾಡಲು, ನೀರು ತುಂಬಿಡಲು, ಮಜ್ಜಿಗೆ, ಮೊಸರು ಕಡಿಯಲು, ಹಾಲನ್ನು ಸಂಗ್ರಹಿಸಲು ಇತ್ಯಾದಿ ಎಲ್ಲಾ ರೀತಿಯ ವಸ್ತುಗಳನ್ನು ಸಂಗ್ರಹಿಸಲು ಬಳಸುತ್ತಿದ್ದರು. ಈ ಮಡಿಕೆಗಳಲ್ಲಿ ತುಂಬಿಟ್ಟ ಆಹಾರ ಹಾಗೂ ಧಾನ್ಯಗಳು ಬೇಗ ಹಾಳಾಗುತ್ತಿರಲಿಲ್ಲ. ಮಡಿಕೆಯಲ್ಲಿ ತುಂಬಿಟ್ಟ ನೀರು ಶುದ್ಧವಾಗಿರುತ್ತಿತ್ತು ಹಾಗೂ ತಂಪಾಗಿರುತ್ತಿತ್ತು. ಇದು ಮಾನವನ ಆರೋಗ್ಯಕ್ಕೆ ಸಂಜೀವಿನಿಯಂತಿತ್ತು. ಈ ಮಡಿಕೆಗಳನ್ನು ಮದುವೆ ಸಂದರ್ಭದಲ್ಲಿ ದೇವರನ್ನು ತರಲು ಬಳಸುತ್ತಿದ್ದರು. ಹಬ್ಬಗಳ ಸಂದರ್ಭದಲ್ಲಿ ದೇವರಿಗೆ ಈ ಮಡಿಕೆಯ ಮೂಲಕ ಮಡೆ ಅನ್ನವನ್ನು ಮಾಡಿ ದೇವರಿಗೆ ಅರ್ಪಿಸಿ ಬರುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಈ ಲೋಹದ ಪಾತ್ರೆಗಳ ಬಳಕೆಯಿಂದಾಗಿ ಮಡಿಕೆಯ ಬಳಕೆ ಕಡಿಮೆಯಾಗಿದ್ದು. ಕೆಲವು ಹಳ್ಳಿಗಳಲ್ಲಿ ಮಡಿಕೆಗಳನ್ನು ಇಂದಿಗೂ ಬಳಸುತ್ತಿರುವುದನ್ನು ನೋಡಬಹುದು.

೧೬. ಕುಡಿಕೆಗಳು



"ಮಣ್ಣಿನಿಂದ ತಯಾರಿಸಿದ ಸಣ್ಣ ಪಾತ್ರೆ. ಊಟ ಮಾಡುವಾಗ ನೀರು, ಮೊಸರು, ಮಜ್ಜಿಗೆ, ಹಾಲು ಇತ್ಯಾದಿಗಳನ್ನು ಇಡಲು ಬಳಸುತ್ತಿದ್ದರು. ಇದನ್ನು ಮಣ್ಣಿನ ಮಿಳ್ಳೆ, ಚಿಕ್ಕ ಗಿಂಡಿ, ಎಂದು ಕರೆಯುವರು."[೨] ಯಾವ ವಸ್ತುವನ್ನು ಹಾಕಿ ಇಡುತ್ತಾರೋ ಆ ವಸ್ತುವಿನ ಹೆಸರು ಸೇರಿಸಿ ಕರೆಯುವುದು ರೂಢಿ. ಉದಾ: ಎಣ್ಣೆ ಕುಡಿಕೆ, ಸುಣ್ಣದ ಕುಡಿಕೆ, ತುಪ್ಪದ ಕುಡಿಕೆ, ಮೊಸರಿನ ಕುಡಿಕೆ. ಇತ್ಯಾದಿ. ದುಂಡನೇಯ ಆಕಾರವಿದ್ದು, ಮೇಲೆ ಸ್ವಲ್ಪ ಅಗಲದ ಅಡ್ಡಗೆರೆಯಂತಹ ತೂತು ಇರುವುದರಲ್ಲಿ ನಾಣ್ಯ ಸಂಗ್ರಹಿಸುತ್ತಿದ್ದರು. ಇದನ್ನು ಹಣ ಉಳಿತಾಯದ ದೃಷ್ಟಿಯಿಂದ ಬಳಸುತ್ತಿದ್ದರು. ಅಲ್ಲದೆ ತಡೆ ಹೊಡೆಯಲು, ವಾಮಾಚಾರ ಮಾಡಿಸಲು, ಮನೆಗೆ ಒಳ್ಳೆಯದಾಗಲಿ ಎಂದು ಮಂತ್ರಿಸಿಕೊಂಡು ಬರಲು ಬಳಸುತ್ತಿದ್ದರು.

೧೭. ಕಣಜ



ಕಣದಲ್ಲಿ ತೂರಿ ಶುದ್ಧಗೊಳಿಸಿದ ಧಾನ್ಯಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿ ವರ್ಷಪೂರ್ತಿ ಬಳಸಲು ನಿರ್ಮಿಸಿಕೊಂಡ ಸಾಧನ. ಇದನ್ನು ಮಣ್ಣು ಅಥವಾ ಬಿದಿರಿನ ಅಚ್ಚೆಗಳಿಂದ ಮಾಡಲಾಗಿರುತ್ತದೆ. ಇದು ಪ್ರಾದೇಶಿಕವಾಗಿ ಭಿನ್ನವಾಗಿರುತ್ತದೆ. ಅದರ ಆಳ, ಅಗಲ, ಎತ್ತರ ಹೀಗೆ ಗಾತ್ರದಲ್ಲಿ ವ್ಯತ್ಯಾಸಗಳಿರುತ್ತದೆ. ಅಡ್ಡ ಕಣಜ, ಗುಂಡು ಕಣಜ, ಕುಂಬಾರ ಕಣಜ, ಬಿದಿರಿನ ಕಣಜ, ಹೀಗೆ ಇನ್ನೂ ಹಲವಾರು ಬಗೆಯ ಕಣಜಗಳಿರುವುದನ್ನು ನೋಡಬಹುದು.

೨೮. ಗುಡಾಣಗಳು



ಮಣ್ಣಿನಿಂದ ಮಾಡಿದಂತಹ ಗುಡಾಣಗಳು ಮಡಿಕೆಗಳಿಗಿಂತ ದೊಡ್ಡ ಗಾತ್ರದ್ದು. ಇದನ್ನು ನೀರು ಕಾಯಿಸಲು ಹಾಗೂ ದವಸ ಧಾನ್ಯಗಳನ್ನು ತುಂಬಿಡಲು ಬಳಸುತ್ತಿದ್ದರು. ಉದಾ : ಭತ್ತ, ರಾಗಿ, ಜೋಳ, ಎಳ್ಳು, ಹುರುಳಿಕಾಳು, ತಗಣಿಕಾಳು, ಹೆಸರುಕಾಳು, ಉದ್ದಿನಕಾಳು, ಅವರೆಕಾಳು ಇತ್ಯಾದಿಗಳನ್ನು ಬೂದಿಯೊಂದಿಗೆ ಮಿಶ್ರಣ ಮಾಡಿ ಇಡುತ್ತಿದ್ದರು. ಇದರಿಂದ ಧಾನ್ಯಗಳಿಗೆ ಬೇಗನೆ ಹುಳು ಬರುತ್ತಿರಲಿಲ್ಲ ಹಾಗೂ ಬೇಗ ಹಾಳಾಗುತ್ತಿರಲಿಲ್ಲ.

೨೯. ಕೊಳವೆ ಅಥವಾ ಬೂರಣಿಗೆ



ಇದು ಕಬ್ಬಿಣದಿಂದ ತಯಾರಿಸಲ್ಪಟ್ಟ ವಸ್ತು. ಸುಮಾರು ಒಂದು ಅಡಿ ಉದ್ದವಿರುತ್ತದೆ. ಜನಪದರು ಅಡುಗೆ ಮಾಡುವ ಸಂದರ್ಭದಲ್ಲಿ ಹೊಲೆಯ ಬೆಂಕಿಯು ಹಾರಿಹೋದಾಗ ಅದನ್ನು ಮತ್ತೆ ಹತ್ತಿಸಲು ಈ ಕೊಳವೆಯ ಮೂಲಕ ಜೋರಾಗಿ ಉಸಿರನ್ನು ಊದುವ ಮೂಲಕ ಒಲೆಯಲ್ಲಿ ಮತ್ತೆ ಬೆಂಕಿಯನ್ನು ಹತ್ತಿಸುತ್ತಿದ್ದರು.





೩೦. ಬೀಸಣಿಗೆ




ಬೇಸಿಗೆಯ ಕಾಲದಲ್ಲಿ ಶೆಖೆಯಾಗುವಾಗ ಗಾಳಿಯನ್ನು ಬೀಸಿಕೊಳ್ಳಲು ಬಳಸುತ್ತಿದ್ದಂತಹ ವಸ್ತು. ಇದನ್ನು ಬಿದಿರಿನ ಅಚ್ಚೆಗಳಿಂದ ಎಣೆದಿರುತ್ತಾರೆ. ಸಾಮಾನ್ಯವಾಗಿ ನೋಡಲು ಚೌಕಾಕಾರದಲ್ಲಿದ್ದು, ಅದನ್ನು ಹಿಡಿದುಕೊಳ್ಳಲು ಒಂದು ಉದ್ದವಾದ ಅಚ್ಚೆಯಿರುತ್ತದೆ. ಆ ಅಚ್ಚೆಯನ್ನು ಹಿಡಿದು ಶೆಖೆಯಾದಾಗ ಬೀಸಿಕೊಳ್ಳುತ್ತಿದ್ದರು. ಬೀಸಣಿಗೆಯು ಸುಂದರವಾಗಿ ಕಾಣಲು ಬಿದಿರಿನಿಂದ ಎಣೆದ ಅಚ್ಚೆಗಳಿಗೆ ವಿವಿಧ ರೀತಿಯ ಬಣ್ಣಗಳನ್ನು ಹಾಕಲಾಗಿರುತ್ತದೆ. ಇದರಿಂದ ಜನರಿಗೆ ಬೀಸಣಿಗೆಯು ಆಕರ್ಷಣೀಯವಾಗಿ ಕಾಣುತ್ತದೆ.

೩೧. ಬಿಂದಿಗೆ



ನೀರು ತುಂಬಲು ಬಳಸುತ್ತಿದ್ದಂತಹ ಒಂದು ಸಾಧನ. ಇದನ್ನು ತಾಮ್ರ, ಕಂಚು ಅಥವಾ ಸ್ಟೀಲ್‌ನಿಂದ ತಯಾರಿಸಲಾಗಿರುತ್ತದೆ. ಇದರ ಬಾಯಿ ತುಂಬ ಕಿರಿದಾಗಿದ್ದು, ನೋಡಲು ಗುಂಡಾಗಿರುತ್ತದೆ. ಇದರಲ್ಲಿ ನೀರನ್ನು ತುಂಬಿ ಕುಡಿಯಲು ಬಳಸುತ್ತಿದ್ದರು. ದೇವರಿಗೆ ಪೂಜೆ ಮಾಡುವಾಗ ನೀರನ್ನು ತುಂಬಿ ಗಂಗೆ ಪೂಜೆಯನ್ನು ಮಾಡುತ್ತಾರೆ. ಮದುವೆಯಂತಹ ಶುಭಕಾರ್ಯಗಳಲ್ಲಿ ಬಾವಿಗೆ ಹೋಗಿ ಗಂಗೆ ಪೂಜೆಯನ್ನು ಮಾಡಿ ಬಿಂದಿಗೆಗೆ ನೀರನ್ನು ತುಂಬಿ ಮನೆಗೆ ತರುತ್ತಾರೆ. ಇದನ್ನು ಕಾಗೆ ನೀರು ಎಂದು ಕರೆಯುತ್ತಾರೆ. ಹೀಗೆ ಜನಪದರು ಪೂಜಾ ವೇಳೆಯಲ್ಲಿ ಬಿಂದಿಗೆಗೆ ಮಹತ್ವದ ಸ್ಥಾನವನ್ನು ನೀಡಿದ್ದಾರೆ.

೩.೨. ಸೀಮೆಎಣ್ಣೆ ದೀಪ





ಬೆಳಕನ್ನು ಪಡೆಯಲು ಬಳಸುತ್ತಿದ್ದಂತಹ ಒಂದು ದೀಪ. ಇದನ್ನು ಕಂಚು, ಅಲ್ಯೂಮಿನಿಯಂ ಅಥವಾ ಗಾಜಿನ ಸೀಸಗಳಿಂದ ತಯಾರಿಸಲಾಗಿರುತ್ತದೆ. ಹೀಗೆ ವಿವಿಧ ಲೋಹಗಳ ಸೀಸಗಳನ್ನು ತೆಗೆದುಕೊಂಡು ಅದರ ಮುಚ್ಚಳದಲ್ಲಿ ಚಿಕ್ಕ ತೂತನ್ನು ಮಾಡಲಾಗಿರುತ್ತದೆ. ಈ ಸೀಸಕ್ಕೆ ಸೀಮೆ ಎಣ್ಣೆಯನ್ನು ಹಾಕಲಾಗಿರುತ್ತದೆ. ಬತ್ತಿಯನ್ನು ಮುಚ್ಚಳದ ತೂತಿನಿಂದ ಸ್ವಲ್ಪ ಮೇಲಕ್ಕೆ ಎಳೆದು ಬಿಡಲಾಗಿರುತ್ತದೆ. ಇದಕ್ಕೆ ಬೆಂಕಿಯನ್ನು ಹೊತ್ತಿಸಿದಾಗ ಅದು ಸೀಮೆಎಣ್ಣೆಯನ್ನು ಹೀರಿ ಉರಿಯುತ್ತ ಬೆಳಕನ್ನು ನೀಡುತ್ತದೆ. ಹಿಂದಿನ ಕಾಲದಲ್ಲಿ ವಿದ್ಯುತ್‌ಸಂಪರ್ಕ ಇಲ್ಲದಿದ್ದ ಕಾರಣ ಸೀಮೆಎಣ್ಣೆಯ ದೀಪವನ್ನೇ ಹೆಚ್ಚಾಗಿ ಬಳಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಈ ಸೀಮೆಎಣ್ಣೆ ಬಳಕೆಯೂ ತೀರಾ ಕಡಿಮೆಯಾಗಿದೆ.

೩.೩. ಕುಕ್ಕೆ




ಕುಕ್ಕೆಯನ್ನು 'ಪುಟ್ಟಿ' ಎಂದೂ ಸಹ ಕರೆಯುವರು. ಇದನ್ನು ಬಿದಿರಿನ ಅಚ್ಚೆಗಳಿಂದ ಎಣೆಯಲಾಗಿರುತ್ತದ್ದಲ್ಲದೇ ನೋಡಲು ಗುಂಡಾದ ಪಾತ್ರೆಯ ಹಾಗಿರುತ್ತದೆ. ಧಾನ್ಯಗಳನ್ನು ತುಂಬಲು, ಹಿಂದಿನ ಕಾಲದಲ್ಲಿ ಮದುವೆಯ ಸಮಯದಲ್ಲಿ ಹೆಣ್ಣನ್ನು ಕರೆಯಲು ಹೋಗುವಾಗ ಎಣ್ಣೆ, ಅರಿಶಿಣ, ದಾನ್ಯ, ಹಾಗೂ ಒಡವೆಗಳನ್ನು ತುಂಬಿಕೊಂಡು ಹೋಗಲು, ತಿಥಿಯನ್ನು ಮಾಡುವಾಗ ಸಮಾಧಿಗೆ ಪೂಜೆ ಮಾಡಲು ಪೂಜೆಗೆ ಸಂಬಂಧಿಸಿದ ವಸ್ತುಗಳನ್ನು ಹಾಗೂ ತಿಂಡಿ ತಿನಿಸುಗಳನ್ನು ತುಂಬಿಕೊಂಡು ಹೋಗಲು, ಮನೆಯಲ್ಲಿ ಸಾಕುವ ಕೋಳಿಗಳನ್ನು ಕವುಚಿ ಹಾಕಲು ಬಳಸುತ್ತಿದ್ದರು. ಅಲ್ಲದೇ ಗದ್ದೆಯಲ್ಲಿ ಬೆಳೆದಂತಹ ತೆನೆ ಕುಯ್ಯುವಾಗ ಈ ಕುಕ್ಕೆಗಳನ್ನು ಬಳಸುತ್ತಾರೆ.







೩.೮. ಒಂದ್ರಿ



ಇದನ್ನು ಕಬ್ಬಿಣದ ತಗಡಿನಿಂದ ಮಾಡಲಾಗಿದ್ದು, ನೋಡಲು ಗುಂಡಾಗಿರುತ್ತದೆ. ಚಿಕ್ಕ ಚಿಕ್ಕ ರಂಧ್ರಗಳಿರುವ ಒಂದು ತಟ್ಟೆಯ ಸುತ್ತ ಕಬ್ಬಿಣದ ತಗಡಿನ ಬಳೆಯನ್ನು ಹಾಕಲಾಗಿರುತ್ತದೆ. ಮನೆಯಲ್ಲಿ ಭತ್ತ, ರಾಗಿ, ಜೋಳ, ಅಕ್ಕಿ ಹಾಗೂ ಕಾಳುಗಳನ್ನೆಲ್ಲ ಕಲ್ಲು ಮಣ್ಣಿನಿಂದ ಬೇರ್ಪಡಿಸಲು ಬಳಸುತ್ತಾರೆ. ಕಡ್ಡೊಂದ್ರಿಗಿಂತ ಚಿಕ್ಕದಾಗಿರುತ್ತದೆ.

೩.೯. ಏಣಿ



ಅಟ್ಟದ ಮೇಲೆ ಅಥವಾ ಮರದ ಮೇಲೆ ಹತ್ತಲು ಬಳಸುವ ವಸ್ತು. ಇದನ್ನು ಬಿದಿರಿನ ಬೊಂಬುಗಳಿಂದ ಮಾಡಲಾಗಿದೆ. ಸುಮಾರು ಎಂಟರಿಂದ ಹತ್ತು ಅಡಿ ಉದ್ದವಿರುವ ಎರಡು ಬೊಂಬುಗಳ ನಡುವೆ ಚಿಕ್ಕ ಚಿಕ್ಕ ಬಿದಿರಿನ ಬೊಂಬುಗಳನ್ನು ಅಡ್ಡ ಅಡ್ಡವಾಗಿ ಒಂದೊಂದು ಅಡಿ ಎತ್ತರಕ್ಕೂ ಒಂದೊಂದೆಂದು ಜೋಡಿಸಿರಲಾಗುತ್ತದೆ. ಮೇಲೆ ಹತ್ತಲು ಏಣಿಯು ಮುಖ್ಯವಾದ ಸಾಧನವಾಗಿದೆ.

೩.೧೦. ಈಳಿಗೆಮಣೆ



ಕಾಯಿ ತುರಿಯಲು ಬಳಸುವ ಸಾಧನ. ಇದನ್ನು ಚೌಕಾಕಾರದ ಹಲಗೆ ಅಥವಾ ಪಟ್ಟಿಯನ್ನು ತೆಗೆದುಕೊಂಡು ಅದಕ್ಕೆ ಕಬ್ಬಿಣದಿಂದ ಮಾಡಿದ ತುರಿಯುವ ಸಾಧನವನ್ನು ಹಾಕಲಾಗಿರುತ್ತದೆ. ತುರಿಯುವ ಹಲ್ಲುಗಳು ಗರಗಸದ ಆಗಿರುತ್ತದೆ. ಇದರ ಕೆಳಗಡೆ ತರಕಾರಿಗಳನ್ನು ಕುಯ್ಯಲು ಕುಡುಗೋಲಿನ ತರಹದ ಹಿಡಿಯಿರುತ್ತದೆ. ಅಡುಗೆಮನೆಯ ನಿತ್ಯ ಬಳಕೆಯ ವಸ್ತುಗಳಲ್ಲಿ ಈಳಿಗೆಮನೆಗೆ ಪ್ರಮುಖವಾದ ಸ್ಥಾನವಿದೆ. ತೆಂಗಿನ ಕಾಯಿಯನ್ನು ತುರಿಯುವುದರ ಜೊತೆಗೆ ಕಾಯಿಪಲ್ಲೆ, ಗೆಡ್ಡೆಗೆಣಸು, ಹಣ್ಣುಗಳನ್ನು ಹೆಚ್ಚಲು, ಕತ್ತರಿಸಲೂ ಸಹ ಈಳಿಗೆಮಣೆಯನ್ನು ಬಳಸುತ್ತಾರೆ. ಈಳಿಗೆಮಣೆ ರಚನೆಯಲ್ಲಿ ಬಡಗಿ ಮತ್ತು ಕಂಬಾರರಿಬ್ಬರ ಕಲಾತ್ಮಕತೆ ಸಂಯೋಜನೆಗೊಂಡಿರುತ್ತದೆ. ಈಳಿಗೆಮಣೆಗಳು ಇಂದಿಗೂ ಅಸ್ಥಿತ್ವದಲ್ಲಿದ್ದರೂ ಇದಕ್ಕೆ ಪೈಪೋಟಿ ಕೊಡುವ ರೀತಿಯಲ್ಲಿ ತಿರುಗುವ ತುರಿಮಣೆಗಳು ಮಾರುಕಟ್ಟೆಗೆ ಬಂದಿವೆ.

೩.೭. ಕಂಚಿನ ತಟ್ಟೆ



ಈ ತಟ್ಟೆ ನೋಡಲು ಗುಂಡಾಗಿದ್ದು, ಇದನ್ನು ಕಂಚಿನಿಂದ ತಯಾರಿಸಿರುತ್ತಾರೆ. ಊಟ ಮಾಡಲು ಬಳಸುವ ತಟ್ಟೆಯಾಗಿದೆ. ಜನಪದರಿಗೆ ದೇಹಕ್ಕೆ ಲೋಹಗಳ ಅವಶ್ಯಕತೆಯಿದೆ ಎಂಬುದು ತಿಳಿದಿದ್ದರಿಂದ ಕಂಚು, ತಾಮ್ರ ಇತ್ಯಾದಿ ಲೋಹಗಳಿಂದ ತಯಾರಿಸಿದ ತಟ್ಟೆ ಹಾಗೂ ಪಾತ್ರೆಗಳನ್ನು ಬಳಸಿಕೊಳ್ಳುತ್ತಿದ್ದರು.

೩.೮. ಕಿಬ್ಬಿ/ಗೆರಸೆ



ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬ ಹರಿದಿನ, ಜಾತ್ರೆ, ಉತ್ಸವ ಮುಂತಾದ ವಿಶೇಷ ದಿನಗಳಲ್ಲಿ ಕರಿದ ತಿಂಡಿಗಳನ್ನು ಹಾಕಿಡಲು ಬಳಸುವ ಪರಿಕರ. ಇದು ಸುಮಾರು ಐದು ಇಂಚು ಎತ್ತರವಿದ್ದು, ಸುಮಾರು ಹದಿಮೂರು ಇಂಚು ವ್ಯಾಸವಿರುತ್ತದೆ. ಇದನ್ನು ಬೆತ್ತದಿಂದ ಹೆಣೆದು ಗೇರೆಲೆಣ್ಣೆಯನ್ನು ಹಚ್ಚಲಾಗಿರುತ್ತದೆ. ವಿಶೇಷ ದಿನಗಳಲ್ಲಿ ಬಜ್ಜಿ, ಬೋಂಡ, ವಡೆ, ಮಿರ್ಚ್ ಮುಂತಾದವುಗಳನ್ನು ಎಣ್ಣೆಯಲ್ಲಿ ಕರಿದ ತಿಂಡಿಗಳನ್ನು





ಹಾಕಿಡಲು ಬಳಸುತ್ತಾರೆ. ಬಿತ್ತದ ಕರ್ಬಿಗಳಲ್ಲಿ ಹಾಕಿರಿಸಿದ ಕರಿದ ತಿಂಡಿಗಳು ಬಹಳ ಬೇಗ ಕೆಡುವುದಿಲ್ಲ. ಗಾಳಿ ಚೆನ್ನಾಗಿ ಆಡುತ್ತದೆ. ಕರ್ಬಿಯನ್ನು ಆಯತಾಕಾರದಲ್ಲಿ ಹೆಣೆಯಲಾಗುತ್ತದೆ.

೩೯. ಬುಬಣಿಗೆ ಬುಟ್ಟಿ




ಮದುವೆ ಸಂದರ್ಭಗಳಲ್ಲಿ ಹೆಣ್ಣು ಮತ್ತು ಗಂಡಿನ ಕಡೆಯವರು ಈ ಬುಟ್ಟಿಯನ್ನು ಬಳಸುತ್ತಾರೆ. ಇದನ್ನು ಬಿದಿರಿನ ಅಚ್ಚೆಗಳಿಂದ ಹೆಣೆಯಲ್ಪಟ್ಟದ್ದು ನೋಡಲು ಚೌಕಾಕಾರದಲ್ಲಿದೆ. ಇದನ್ನು ಮುಚ್ಚಲು ಮಚ್ಚಳವನ್ನೂ ಸಹ ಮಾಡಲಾಗಿರುತ್ತದೆ. ಮದುವೆಯ ಸಂದರ್ಭದಲ್ಲಿ ಗಂಡಿನ ಕಡೆಯವರು ಹೆಣ್ಣನ್ನು ಕರೆದುಕೊಂಡು ಬರಲು ಹೋದಾಗ ಈ ಬುಟ್ಟಿಗೆ ಒಡಲೆ ವಸ್ತ್ರಗಳನ್ನು ಹಾಗೂ ಇತರ ಸಂಬಂಧಿಸಿದ ವಸ್ತುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆ ತೆಗೆದುಕೊಂಡು ಹೋಗಲು ಬಳಸುತ್ತಾರೆ.

೪೦. ಬಟ್ಟೆ ಗೂಟ



ಗೋಡೆಗಳಲ್ಲಿ ಬಟ್ಟೆಗಳನ್ನು ಸಣ್ಣ ಚೀಲಗಳನ್ನು ನೇತುಹಾಕಲು ಬಳಸುವ ಒಂದು ಸಾಧನ. ಇದರಲ್ಲಿ 'ಪಟ್ಟಿ' ಮತ್ತು 'ಗೂಟ' ಎಂಬ ಎರಡು ಮುಖ್ಯ ಭಾಗಗಳಿರುತ್ತವೆ. ಗೂಟಗಳ ಸಂಖ್ಯೆಯು ಅಗತ್ಯಕ್ಕನುಸಾರ ವ್ಯತ್ಯಾಸವಾಗಿರುತ್ತದೆ. ಬಟ್ಟೆ ಗೂಟದ ಪಟ್ಟಿಯನ್ನು ಮೊಳೆಗಳಿಂದ ಗೋಡೆಗೆ ಭದ್ರವಾಗಿ ಹಾಕಲಾಗಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಲೋಹದ ಅಥವಾ ಪ್ಲಾಸ್ಟಿಕ್ ಹ್ಯಾಂಗರ್‌ಗಳು ಬಂದ ನಂತರ ಮರದ ಬಟ್ಟೆ ಗೂಟಗಳು ಮರೆಯಾಗುತ್ತಿವೆ.





೪೧. ನಾಕರಬಟ್ಟು



ಉಪ್ಪಿನಕಾಯಿ, ಪಲ್ಯಗಳು, ಚಟ್ನಿ, ಉಪ್ಪು ಮುಂತಾದವುಗಳನ್ನು ಬೇರೆ ಬೇರೆಯಾಗಿ ಹಾಕಿಕೊಂಡು ಏಕಕಾಲದಲ್ಲಿ ಊಟವನ್ನು ಬಡಿಸಲು ಬಳಸುವ ಒಂದು ಸಾಧನ. ಇದರ ಬಟ್ಟಲುಗಳು ಸುಮಾರು ನಾಲ್ಕು ಇಂಚು ವ್ಯಾಸ, ಐದು ಇಂಚು ಎತ್ತರವಿದ್ದು, ಇದನ್ನು ಮರದಿಂದ ಅಥವಾ ಮಣ್ಣಿನಿಂದ ತಯಾರಿಸಿರುತ್ತಾರೆ. ನಾಲ್ಕು ಬಟ್ಟಲುಗಳನ್ನು ಸೇರಿಸಿ ಹಿಡಿದುಕೊಳ್ಳಲು ಹಿಡಿಕೆಯು ಇರುತ್ತದೆ. ಊಟ ಬಡಿಸುವಾಗ ಕಡಿಮೆ ಪಾತ್ರೆಗಳ ಬಳಕೆ ಮತ್ತು ಶ್ರಮದ ಉಳಿತಾಯಕ್ಕೆ ನಾಕರ ಬಟ್ಟಲಿನಂತಹ ಸಲಕರಣೆಗಳು ಸಹಾಯಕವಾಗುತ್ತವೆ.

೪೨. ತೊಟ್ಟಿಲು



ಮಕ್ಕಳನ್ನು ತೂಗಿಮಲಗಿಸಲು ಬಳಸುವ ಸಾಧನ. ಇದು ಸುಮಾರು ಒಂದುವರೆ ಅಡಿ ಎತ್ತರ, ಮೂರು ಅಡಿ ಉದ್ದ, ಒಂದುವರೆ ಅಡಿ ಅಳತೆ ಉಳ್ಳದ್ದಾಗಿರುತ್ತದೆ. ಇದರ ಒಳಭಾಗದಲ್ಲಿ ಹಲಗೆಗಳನ್ನು ಜೋಡಿಸಲು ಎರಡು ಪಟ್ಟಿಗಳಿರುತ್ತವೆ. ಈ ಹಲಗೆಗಳನ್ನು ಜೋಡಿಸಲು ನಾಲ್ಕು ಕಂಬಗಳಿದ್ದು, ಕೆಲವು ತೊಟ್ಟಿಲುಗಳಲ್ಲಿ ಇದರ ಮೇಲೆ ಬುಗುರಿಯಾಕಾರದ ಮಣಿಗಳಿರುತ್ತವೆ. ಕೆಲವು ತೊಟ್ಟಿಲುಗಳಲ್ಲಿ ಇದರ ಮೇಲೆ ಬುಗುರಿಯಾಕಾರದ ಮಣಿಗಳಿರುತ್ತವೆ. ಮಕ್ಕಳ ನಾಮಕರಣದ ಬಳಿಕ ಸಾಮಾನ್ಯವಾಗಿ ತೊಟ್ಟಿಲಿನ ಬಳಕೆಯಾಗುತ್ತದೆ. ಆರ್ಥಿಕತೆಗುಣವಾಗಿ ತೊಟ್ಟಿಲನ್ನು ಬಳಸುತ್ತಾರೆ. ತೊಟ್ಟಿಲನ್ನು ಸಾಮಾನ್ಯವಾಗಿ ತೇಗ, ಹಲಸು ಮುಂತಾದ ಮರಗಳಿಂದ ತಯಾರಿಸುತ್ತಾರೆ. ತೊಟ್ಟಿಲುಗಳನ್ನು ಕಲಾತ್ಮಕವಾಗಿ ರಚಿಸುತ್ತಾರೆ. ಲೋಹಗಳಿಂದಲೂ ಸಹ ತೊಟ್ಟಿಲುಗಳನ್ನು ನಿರ್ಮಿಸಿಕೊಳ್ಳುವುದುಂಟು





೪೩. ತತ್ರಾಣಿ



ಕುಡಿಯುವ ನೀರು ಹಾಕಿಡಲು ಬಳಸುವ ಮಣ್ಣಿನ ಸಾಧನ. ಇದನ್ನು ಹೊಲಗಳಲ್ಲಿ ಕೆಲಸ ಮಾಡುವಾಗ ಕುಡಿಯುವ ನೀರಿನ ಅಗತ್ಯವನ್ನು ಪೂರೈಸಿಕೊಳ್ಳುವುದಕ್ಕೆ ಬಳಸಿಕೊಳ್ಳುತ್ತಾರೆ. ತತ್ರಾಣಿಯು ಚಿಕ್ಕದ್ದಾಗಿದ್ದರೆ ಅದರ ಕುತ್ತಿಗೆಯ ಭಾಗಕ್ಕೆ ಹಗ್ಗ ಹಾಕಿ ಒಯ್ಯಬಹುದು. ದೊಡ್ಡದ್ದಾಗಿದ್ದರೆ ಹಾಗೆ ಮಾಡಿದಾಗ ತತ್ರಾಣಿಯ ಮೇಲ್ಭಾಗವು ಕಿತ್ತುಕೊಳ್ಳುವ ಅಪಾಯವಿರುವುದರಿಂದ ಅದರ ಸುತ್ತಲೂ ಲಂಬವಾಗಿ ಹಗ್ಗವನ್ನು ಆಧಾರವಾಗಿ ಹಾಕಿಕೊಳ್ಳಲು ಪುಟ್ಟ ಓಣಿಯಂತಹ ಹಗ್ಗವಿರುತ್ತದೆ. ತತ್ರಾಣಿಯನ್ನು ಹೆಗಲಲ್ಲಿ ಹಾಕಿಕೊಂಡು ಒಯ್ಯುವುದು ರೂಢಿ. ನೀರು ವ್ಯರ್ಥವಾಗದಂತೆ ಸರಿದುಕೊಳ್ಳಲು ತತ್ರಾಣಿಯ ಬಾಯಿಯ ಬಳಿ ಸಣ್ಣ ಕೊಳವೆಯಂಥ ರಚನೆ ಇದೆ. ಅದನ್ನು ಮುಚ್ಚಲು ಬೆಣೆ ಕೂಡ ಇರುತ್ತದೆ. ತತ್ರಾಣಿಯು ಆವೆ ಮಣ್ಣಿನಿಂದ ತಯಾರಾಗುವುದರಿಂದ ಅದರಲ್ಲಿ ಹಾಕಿಟ್ಟ ನೀರು ತಂಪಾಗಿರುತ್ತದೆ. ಪ್ಲಾಸ್ಟಿಕ್ ಕ್ಯಾನ್, ವಾಟರ್ ಬಾಟಲ್ಗಳು ತತ್ರಾಣಿಯ ಸ್ಥಾನವನ್ನು ಆಕ್ರಮಿಸಿರುವುದಾದರೂ ಅದರ ಗುಣಮಟ್ಟವನ್ನು ತಲುಪಲು ಸಾಧ್ಯವಿಲ್ಲ.

೪೪. ಅಡಕತ್/ ಅಡಕತ್ತರಿ




ಅಡಿಕೆಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಕತ್ತರಿಸಿಕೊಳ್ಳುವುದಕ್ಕೆ ಬಳಸುವ ಸಾಧನ. ಸಾಮಾನ್ಯವಾಗಿ ಇದರ ಮುಂಭಾಗವು ಗಿಳಿ ಕೊಕ್ಕಿನ ಆಕಾರದಲ್ಲಿರುತ್ತದೆ. ಅಡಕತ್‌ಗಳ ಗಾತ್ರದಲ್ಲಿ ಮತ್ತು ವಿನ್ಯಾಸಗಳಲ್ಲಿ ವ್ಯತ್ಯಾಸವಿದೆ. ಸುಮಾರು ಹದಿನೈದು ಇಂಚು ಉದ್ದ, ನಾಲ್ಕು ಇಂಚು ಅಗಲದಿಂದ ಸುಮಾರು ನಾಲ್ಕು ಇಂಚು ಉದ್ದ ಒಂದು ಇಂಚು ಅಗಲದ ಅಡಕತ್ತಗಳಿವೆ. ದೊಡ್ಡ ಗಾತ್ರದ ಅಡಕತ್‌ಗಳನ್ನು ಅಂಗಡಿಗಳಲ್ಲಿ ವ್ಯಾಪಾರಸ್ಥರು ಹೆಚ್ಚಾಗಿ ಬಳಸುತ್ತಾರೆ. ಅಡಕತ್ ಬುಡದಲ್ಲಿನ ಸರಳವಾದ ದಪ್ಪ ತಗಡಿನ





ಎರಡು ತುದಿಗಳು ಹಿಡಿಕೆಯಾಗಿ ಬಳಕೆಯಾಗುತ್ತದೆ. ಇದೇ ತಗಡಿನಲ್ಲಿ ಹಿಡಿಯನ್ನುಳಿದಂತೆ ಉಳಿದ ಭಾಗವು ಅಲಗನ್ನು ಹೊಂದಿದೆ. ಇದು ಮತ್ತು ಬುಡದಲ್ಲಿ ಹಿಡಕೆಯಾಗಿರುವ ಇನ್ನೊಂದು ತಗಡು ಅಲಗಿನಡಿಗೆ ಸಮಾಂತರವಾಗಿ ಮುಂದುವರೆದು ಕೆಳಭಾಗದ ಅಲಗಿನ ತಗಡಿನೊಂದಿಗೆ ಮೊಳೆಯೊಂದರಿಂದ ಜೋಡಣೆಯಾಗುತ್ತದೆ.

೪೭. ಅಡಿಕೆ ಬುಟ್ಟಿ



ಅಡಿಕೆ ಬೆಳೆಯುವ, ಎಲೆ ಅಡಿಕೆ ಹಾಕಿಕೊಳ್ಳುವವರು ಅಡಿಕೆಯನ್ನು ಸಂಗ್ರಹಿಸಿಟ್ಟುಕೊಳ್ಳಲು ಬಳಸುವ ಬುಟ್ಟಿ. ಇದು ಸುಮಾರು ೧೦ ಇಂಚು ಎತ್ತರವಾಗಿದ್ದು, ಸುಮಾರು ೮ ಇಂಚು ವ್ಯಾಸವನ್ನು ಹೊಂದಿರುತ್ತದೆ. ಇದನ್ನು ಬೆತ್ತದ ಸಣ್ಣ ಸಣ್ಣ ಅಚ್ಚೆಯಿಂದ ಹೆಣೆದಿರುತ್ತಾರೆ. ಅಡಿಕೆಯನ್ನು ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸಿ ತಮ್ಮ ಉಪಯೋಗಕ್ಕೆ ಎಷ್ಟು ಬೇಕೋ ಅಷ್ಟನ್ನು ಸಂಗ್ರಹಿಸಿಕೊಳ್ಳುತ್ತಾರೆ. ಅಲ್ಲದೆ ಬೆತ್ತದ ಬುಟ್ಟಿಯಲ್ಲಿ ಎಲೆ, ಸುಣ್ಣದ ಡಬ್ಬಿ, ಕೊಬ್ಬರಿ ಚೂರು, ಏಲಕ್ಕಿ, ಲವಂಗ ಹಾಗೂ ತಂಬಾಕು ಇತ್ಯಾದಿ ತಾಂಬೂಲದ ಪರಿಕರಗಳು ಇರುತ್ತವೆ.

೪೮. ಅಡ್ಡಣಿಗೆ



ಊಟ ಮಾಡುವಾಗ ತಟ್ಟೆಯನ್ನು ಅಗತ್ಯ ಎತ್ತರದಲ್ಲಿ ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಬಳಸಿಕೊಳ್ಳುವ ಸಾಧನ. ಮರದಿಂದ ನಿರ್ಮಾಣಗೊಂಡ ಅಡ್ಡಣಿಗೆಯು ತಟ್ಟೆ ಇಟ್ಟುಕೊಳ್ಳುವ ಭಾಗದಲ್ಲಿ ವೃತ್ತಾಕಾರದ ಅಥವಾ ಚೌಕಾಕಾರದ ಹಲಗೆಯನ್ನು ಹೊಂದಿರುತ್ತದೆ. ಕಬ್ಬಿಣದ್ದಾದರೆ ವೃತ್ತಾಕಾರದ ಪಟ್ಟಿಯನ್ನಷ್ಟೇ ಹೊಂದಿರುತ್ತದೆ. ಎರಡರಲ್ಲೂ ಮೂರು ಮೂರು ಕಾಲುಗಳಿರುತ್ತವೆ. ಅಡ್ಡಣಿಗೆಯನ್ನು ಮನೆಯ ಯಜಮಾನನಿಗಷ್ಟೆ ಬಳಸಿಕೊಳ್ಳುವ ಆದ್ಯತೆ ಇತ್ತು. ಈಗ ಅಡ್ಡಣಿಗೆಯ ಬಳಕೆ ಅಪರೂಪವಾಗಿದೆ.





೩೭. ಇಲಿಬೋನು



ಪೈರು ಧಾನ್ಯಗಳನ್ನು ತಿಂದು ಹಾಳು ಮಾಡುವ ಇಲಿಗಳನ್ನು ಹಿಡಿಯಲು ಗ್ರಾಮೀಣರು ಆವಿಷ್ಕರಿಸಿ ಕೊಂಡಿರುವ ಒಂದು ಉಪಕರಣ. ಇದು ನೀಳವಾದ ಒಂದು ಪುಟ್ಟ ಬುಟ್ಟಿಯಾಕಾರದಲ್ಲಿದ್ದು ಅದರ ಮುಂಭಾಗದಲ್ಲಷ್ಟೆ ತೆರೆದುಕೊಂಡಿರುತ್ತದೆ. ಇದು ಥಕ್ಕನೆ ಮುಚ್ಚಿಕೊಳ್ಳುವಂತೆ ಸೂಕ್ತ ಪ್ರಮಾಣದ ಲೋಹದ ತಗಡೊಂದನ್ನು ನಿರ್ಮಿಸಿ, ಅದರ ಒಂದು ಬದಿಯನ್ನು ಕಡ್ಡಿ ಅಥವಾ ಸ್ಟ್ರಿಂಗ್ ಒಂದರಿಂದ ಜೋಡಿಸಿ ಬೋನಿನ ಒಳಭಾಗದಲ್ಲಿ ಎಳೆದು ಕಟ್ಟಲಾಗುತ್ತದೆ. ಇಲಿಯು ಬೋನಿನೊಳಗೆ ಪ್ರವೇಶಿಸಿ ಒಂದಿಷ್ಟು ಅತ್ತಿತ್ತ ಸರಿದಾಡಿದಾಗ ಈ ಜೋಡಣೆಯು ತಪ್ಪಿಹೋಗಿ ಬೋನಿನ ಬಾಗಿಲು ಒಮ್ಮೆಲೆ ಮುಚ್ಚಿಕೊಳ್ಳುತ್ತದೆ. ಇಲಿಯು ಒಳಗೆ ಬಂದಿಯಾಗುತ್ತದೆ.

೩೮. ಈರುಳ್ಳಿ ಬುಟ್ಟಿ



ಈರುಳ್ಳಿ ಸಂಗ್ರಹಿಸಿಡಲು ಬಳಸುವ ಸಾಧನ. ಇದು ಸುಮಾರು ಒಂದು ಅಡಿ ಎತ್ತರವಿದ್ದು, ಒಂದು ಅಡಿ ವ್ಯಾಸವನ್ನು ಹೊಂದಿರುತ್ತದೆ. ಈ ಬುಟ್ಟಿಯನ್ನು ಕಬ್ಬಿಣದ ಸಣ್ಣ ಸಣ್ಣ ತಂತಿಗಳಿಂದ ಹೆಣೆಯಲಾಗಿರುತ್ತದೆ. ಈ ಬುಟ್ಟಿಯ ಮೇಲ್ಭಾಗದಲ್ಲಿ ಮುಚ್ಚಲು ಒಂದು ಮುಚ್ಚಳವಿದ್ದು, ಹಿಡಿದುಕೊಳ್ಳಲು ತಂತಿ ಹಿಡಿಕೆ ಇರುತ್ತದೆ. ಬುಟ್ಟಿಯಲ್ಲಿಟ್ಟಿರುವ ಈರುಳ್ಳಿಗೆ ಗಾಳಿ ಆಡುವುದರಿಂದ ಈರುಳ್ಳಿಯು ದೀರ್ಘಕಾಲ ಬಾಳಿಕೆ ಬರುತ್ತವೆ. ಪ್ಲಾಸ್ಟಿಕ್ ಬುಟ್ಟಿಗಳು ಬಂದ ಮೇಲೆ ಇದರ ಬಳಕೆ ಕಡಿಮೆಯಾಗುತ್ತಿದೆ.

೬೯. ಎತ್ತಿನ ಕೊಂಬಿನ ನಶ್ಯದಬ್ಬಿ



ನಶ್ಯ ಹಾಕುವವರು ನಶ್ಯ ತುಂಬಿಟ್ಟುಕೊಳ್ಳಲು ಬಳಸುವ ಡಬ್ಬಿ. ಇದು ಸುಮಾರು ೨.೪ ಇಂಚು ಎತ್ತರವಿದೆ. ಸುಮಾರು ೩ ಇಂಚು ವ್ಯಾಸವನ್ನು ಹೊಂದಿದೆ. ಎತ್ತಿನ ಕೊಂಬಿನಿಂದ ತಯಾರಿಸಿದ್ದಾರೆ. ಎತ್ತಿನ ಕೊಂಬಿನ ತುದಿಭಾಗವು ಇದಕ್ಕೆ ಉಪಯೋಗವಾಗಿದೆ. ಇತ್ತೀಚೆಗೆ ಲೋಹದ ನಶ್ಯ ಡಬ್ಬಿಗಳು ಬಂದ ಮೇಲೆ ಇದರ ಬಳಕೆ ಬಹಳ ಕಡಿಮೆಯಾಗಿದೆ. ವಿವಿಧ ರೂಪದ ನಶ್ಯ ಡಬ್ಬಿಗಳನ್ನು ನೋಡಬಹುದಾಗಿದೆ. ಬೆಳ್ಳಿ, ಸಿಲ್ವರ್, ಗಾಜು, ಪ್ಲಾಸ್ಟಿಕ್‌ಗಳಿಂದ ಕೂಡ ನಶ್ಯಡಬ್ಬಿಗಳು ನಿರ್ಮಾಣಗೊಳ್ಳುತ್ತವೆ.

೭೦. ಬೆಂಗು ಗಡಿಗೆ



'ಅರಿವಿ' ಎಂಬ ಸಿಹಿ ಪದಾರ್ಥ ಮಾಡುವಾಗ (ಗೋಧಿ ಹಿಟ್ಟು, ಬೆಲ್ಲವನ್ನು ನೀರಿನಿಂದ ಮಿಶ್ರಣ ಮಾಡಿ ಸುಮಾರು ಮೂರು ನಾಲ್ಕು ತಾಸು ಬಿಡುತ್ತಾರೆ) ಬಳಕೆಯಾಗುವ ವಸ್ತು. ಇದು ಸುಮಾರು ಹದಿನಾಲ್ಕು ಇಂಚು ಎತ್ತರ, ಕಂಠದ ಬಾಯಿಯ ವ್ಯಾಸ ಒಂಭತ್ತು ಇಂಚು, ನಡು ಪಟ್ಟಿಯ ಸುತ್ತಳತೆ ಐವತ್ತನಾಲ್ಕು ಇಂಚು ಇರುತ್ತದೆ. ಕಂಠದ ಕೆಳಭಾಗದಲ್ಲಿ ಸುತ್ತಲೂ ನಾಲ್ಕು ಕಡೆ ಬಾಣ, ಸಂಕಲನ ಚಿಹ್ನೆ, ತ್ರಿಭುಜ, ವೃತ್ತಾಕಾರದ ರಂಧ್ರಗಳಿರುತ್ತವೆ. ಈ ಬೆಂಗು ಗಡಿಗೆಯನ್ನು ಒಲೆ ಮೇಲೆ ಬೋರಲು ಹಾಕಿ ತೆಳುವಾದ ಬಟ್ಟೆಯನ್ನು ಅದರ ಮೇಲೆ ಹಾಸಿ ನೆನೆಸಿಟ್ಟು, ಲಟ್ಟಿಸಿದ ಅರಿವಿಯನ್ನು ಸುಡಲು ಈ ಗಡಿಗೆಯನ್ನು ಬಳಸುತ್ತಾರೆ.





೫೧.ಕರ್ಜಿಕಾಯಿ ಒತ್ತೊಳ್ಳು



ಹಬ್ಬ ಹರಿದಿನ, ಜಾತ್ರೆ, ಉತ್ಸವ, ಮದುವೆ, ಮುಂಜಿಗಳಲ್ಲಿ ಕರ್ಜಿಕಾಯಿ ಮಾಡಲು ಬಳಸುವ ಪರಿಕರ. ಈ ಸಾಧನವು ಸುಮಾರು ಒಂದು ಅಡಿ ಉದ್ದವಿರುತ್ತದೆ. ಇದರ ಮಧ್ಯಭಾಗದಲ್ಲಿ ಸುಮಾರು ಐದು ಇಂಚಿನ ಸುಮಾರು ಅರ್ಧಚಂದ್ರಾಕಾರದ ಎರಡು ಒರಳುಗಳಿವೆ. ಇದರ ಎರಡೂ ಕಡೆಗೂ ಕಬ್ಬಿಣದ ಕೊಂಡಿಗಳನ್ನು ಹಾಕಿದ್ದಾರೆ. ಒರಳಿನ ಅರ್ಧವೃತ್ತಾಕಾರ ಭಾಗದಲ್ಲಿ ಗರಗಸದ ಪುಟ್ಟ ಹಲ್ಲುಗಳಂತೆ ಕಬ್ಬಿಣದ ತಗಡನ್ನು ಜೋಡಿಸಿರುತ್ತಾರೆ. ಹೆಚ್ಚಾಗಿ ವಿಶೇಷ ದಿನಗಳಲ್ಲಿ, ವಿಶೇಷ ಅಡುಗೆ ಮಾಡುವ ಸಂದರ್ಭದಲ್ಲಿ ಈ ಸಲಕರಣೆಯನ್ನು ಬಳಸುತ್ತಾರೆ. ಮರ, ಲೋಹ, ಪ್ಲಾಸ್ಟಿಕ್‌ನಿಂದ ಇದನ್ನು ತಯಾರಿಸುತ್ತಾರೆ.

೫೨. ಕೈಪೆಟ್ಟಿಗೆ ಅಥವಾ ಆಭರಣ ಪೆಟ್ಟಿಗೆ



ಬೆಲೆಬಾಳುವ ಒಡವೆ ಮತ್ತು ಹಣವನ್ನು ಸಂರಕ್ಷಿಸಲು ಬಳಸುವಂತಹ ಸಾಧನ. ಸುಮಾರು ಏಳು ಇಂಚು ಅಗಲ, ಹತ್ತೂವರೆ ಇಂಚು ಉದ್ದ, ಮೂರೂವರೆ ಇಂಚು ಎತ್ತರವನ್ನು ಹೊಂದಿ ಆಯತಾಕಾರದಿಂದ ಕೂಡಿದೆ. ಬೀಗ ಹಾಕುವ ವ್ಯವಸ್ಥೆ ಹೊಂದಿದೆ. ಇದನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕೊಂಡೊಯ್ಯಲು ಮೇಲ್ಭಾಗದಲ್ಲಿ ಹಿಡಿಯೂ ಇದೆ. ಹಣ ಒಡವೆಗಳನ್ನು ಕಳ್ಳಕಾಕರಿಂದ ಸಂರಕ್ಷಿಸಲು ಈ ಪೆಟ್ಟಿಗೆ ಬಳಕೆಯಾಗುತ್ತಿತ್ತು. ಇದನ್ನು ಲೋಹದಿಂದ (ಕಬ್ಬಿಣ) ತಯಾರಿಸಿರುತ್ತಾರೆ. ಈಗ ಈ ತರಹದ ಪೆಟ್ಟಿಗೆಗಳ ಬಳಕೆ ಕಡಿಮೆ.

೫೩. ಗಂಧ ತೇಯುವ ಕಲ್ಲು ಅಥವಾ ಸಾಣೆಕಲ್ಲು



ಶ್ರೀಗಂಧ, ಚಂದನ, ಔಷಧದ ಬೇರು-ನಾರು, ಬಜೆ, ಗೋರಂಧ ಮುಂತಾದವುಗಳನ್ನು ತೇಯಲು ಬಳಸುತ್ತಾರೆ. ಚಿಕ್ಕ ಮಕ್ಕಳಿಗೆ ಗದ್ದಕಟ್ಟು (ಕೆನ್ನೆಬಾವು ಅಥವಾ ಕೆಪ್ಪಟ್ರಾಯ) ಆದಾಗ ನಾಮದಂಡೆಯನ್ನು ತೇಯಲು ಬಳಸುತ್ತಾರೆ. ಇದನ್ನು ವಿಶಿಷ್ಟವಾದ ಬಳಪದ ಕಲ್ಲಿನಿಂದ ತಯಾರಿಸಿದೆ. ಇದರ ಮೇಲೆ ತೇಯ್ದು ಔಷಧವನ್ನು ಕುಡಿಸುವುದರಿಂದ ಮಕ್ಕಳು ಬೇಗ ಆರೋಗ್ಯವಂತರಾಗುತ್ತಾರೆ ಎಂಬ ನಂಬಿಕೆ ಜನಪದರದು.

ಈ ವಸ್ತುವು ಸುಮಾರು ಒಂದು ಅಡಿ ವ್ಯಾಸವಿದ್ದು ವೃತ್ತಾಕಾರದಲ್ಲಿರುತ್ತದೆ. ಇದರ ಮಧ್ಯಭಾಗವು ಸ್ವಲ್ಪ ತಗ್ಗಾಗಿರುತ್ತದೆ. ನೆಲದಲ್ಲಿಟ್ಟರೆ ಅಲುಗಾಡದಂತೆ ಅದರ ತಳವು ವಿನ್ಯಾಸಗೊಂಡಿದೆ. ಇವುಗಳ ಗಾತ್ರದಲ್ಲಿ ವ್ಯತ್ಯಾಸವಿರುತ್ತವೆ. ಕಲ್ಲಿನಲ್ಲಿ ಗಂಧ ತೇಯುವ ಘಟ್ಟವಲ್ಲಿಯರ ಕುರಿತಾಗಿ ಹಳೆಯ ಕಾವ್ಯಗಳು ವಿವರಗಳನ್ನು ಕೊಡುತ್ತವೆ.

೨೮೪. ಚಕ್ಕುಲಿ ಒತ್ತೊಳ್ಳು ಅಥವಾ ಒತ್ತೊರಳು




ಚಕ್ಕುಲಿ, ಕಾರಕಡ್ಡಿ ಮುಂತಾದ ತಿಂಡಿಗಳಿಗೆ ರೂಪಕೊಡುವ ಸಾಧನ. ಸುಮಾರು ಮೂರು ಇಂಚು ಚೌಕಾಕಾರದ ಒರಳು ಮತ್ತು ಅದೇ ಅಳತೆಯ ಅಥವಾ ಆಕಾರದ ಒತ್ತು ಇದರ ಅವಿಭಾಜ್ಯ ಅಂಗಗಳು. ಅವಕ್ಕೆ ಇಬ್ಬದಿಗಳಲ್ಲೂ ಹಿಡಿಕೆಗಳು ಇದೆ. ಒರಳಲ್ಲಿ ಸುಮಾರು ಎರಡು ಇಂಚು ವ್ಯಾಸ, ಮೂರು ಇಂಚು ಆಳದ ರಂಧ್ರ, ರಂಧ್ರದ ಕೆಳಗಿನ ಭಾಗದಲ್ಲಿ ಚಕ್ಕುಲಿ, ಕಾರಕಡ್ಡಿಯಂಥ ತಿಂಡಿಗಳಿಗೆ ಅನುಸಾರವಾಗಿ ಹಿಟ್ಟನ್ನು ಹೊರಹಾಕುವ ಲೋಹದ ಬಿಲ್ಲೆಗಳನ್ನು ಅಳವಡಿಸುವ ಅನುಕೂಲತೆ ಇದೆ. ಚಕ್ಕುಲಿ 'ಹುರಿ'ಯ ಗಾತ್ರ ವೈವಿಧ್ಯವನ್ನು ಅಬು ಮಾಡುವಂತೆ ಬಿಲ್ಲೆಗಳಲ್ಲಿ ರಂಧ್ರ ವ್ಯತ್ಯಾಸವಿರುತ್ತದೆ. ಕಡಿಮೆ ಸುತ್ತಳತೆಯ ರಂಧ್ರದ ಆಳದಷ್ಟೇ ಉದ್ದದ ಒತ್ತನ್ನು ಜೋಡಿಸಲಾಗುತ್ತದೆ. ಒತ್ತೊಳ್ಳನ್ನು ಬಳಸಲು ಕಡಿಮೆ ಬಲ ಸಾಕು. ಒತ್ತೊರಳುಗಳು ಸಾಗುವಾನಿ, ಹಲಸು ಮುಂತಾದ ಮರಗಳಿಂದ ತಯಾರಿಸಲಾಗುತ್ತದೆ.

೨೮೫. ಚೊಪ್ಪಿಗೆ



ಗ್ರಾಮೀಣ ಪ್ರದೇಶಗಳಲ್ಲಿ ದನ, ಎಮ್ಮೆ, ಆಡು, ಕುರಿ ಮೇಯಿಸುವವರು ಟೊಪ್ಪಿಗೆಯನ್ನು ಬಳಸುತ್ತಾರೆ. ಮಾನಿಬೇರಿ ಹುಲ್ಲಿನ ಕಡ್ಡಿಯಿಂದ ಹೆಣೆಯುತ್ತಾರೆ. ಈ ಹುಲ್ಲಿನ ಕಡ್ಡಿಯು ಒಂದು ಹಂತಕ್ಕೆ ಬೆಳೆದು ಬಂದಾಗ ಅಂದರೆ ಹೆಚ್ಚು ಎಳೆಯದೂ ಅಲ್ಲ, ಹೆಚ್ಚು ಬಲಿತಿರುವುದೂ ಅಲ್ಲದೆ, ಹೆಣೆಯಲು ಅನುಕೂಲವಾಗುವಂತಹ ಅವಧಿಯಲ್ಲಿ ಅವನ್ನು ಕತ್ತರಿಸಿಕೊಂಡು ಹೆಣೆಯುತ್ತಾರೆ. ವರ್ಷದ ಒಂದು ಅವಧಿಯಲ್ಲಿ ಮಾತ್ರ ಈ ಮಾನಿಬೇರಿ ಹುಲ್ಲಿನ ಕಡ್ಡಿ ಸಿಗುತ್ತದೆ. ಪೋಲಿಸರ ಟೊಪ್ಪಿಗೆಯಂತೆಯೇ ಇದರ ಆಕಾರ ಇರುತ್ತದೆ. ಇದನ್ನು ಹಾಕಿಕೊಳ್ಳುವುದರಿಂದ ಇದು ಬಿಸಿಲಿನ ತಾಪವನ್ನು ತಡೆದು ದೇಹಕ್ಕೆ ಹಿತ ನೀಡುತ್ತದೆ. ಹುಲ್ಲನ್ನು ಸಂಗ್ರಹಿಸಿ, ಬಿಸಿಲಿನಲ್ಲಿ ಒಂದು ಹದಕ್ಕೆ ಒಣಗಿಸಿ ಟೊಪ್ಪಿಗೆ ಹೆಣೆಯುವುದು ಒಂದು ವಿಶೇಷ ಕರಕುಶಲ ಕಲೆಯಾಗಿದೆ.

೫೬. ತವೆ ಹಂಚು



ರೊಟ್ಟಿ ಬೇಯಿಸಲು ಬಳಸುವ ಲೋಹದ ಸಾಧನ. ಇದರ ವ್ಯಾಸ ಸುಮಾರು ಒಂಭತ್ತು ಇಂಚು ತೆಳುವಾಗಿದೆ. ಇದು ಸುಮಾರಾಗಿ ತೆಪ್ಪದ ಆಕಾರದಲ್ಲಿರುತ್ತದೆ. ದನಿಯಾ, ಮೆಣಸಿನಕಾಯಿ, ಕಡಲೆಬೀಜ ಇತ್ಯಾದಿಗಳನ್ನು ಹುರಿಯಲು ಕೂಡ ಬಳಕೆಯಾಗುತ್ತದೆ. ತವೆಗಳ ಗಾತ್ರದಲ್ಲಿ ವ್ಯತ್ಯಾಸವಿದೆ. ಲೋಹದಿಂದ ಕೂಡ ತವೆಗಳನ್ನು ನಿರ್ಮಿಸುತ್ತಾರೆ.

೫೭. ದಿನಸಿ ಬಟ್ಟಲು




ಅಡುಗೆ ಮನೆಯಲ್ಲಿ ಸಾಂಬಾರ ಪದಾರ್ಥಗಳನ್ನು ಇಟ್ಟುಕೊಳ್ಳಲು ಬಳಸುವ ಸಾಧನ. ಇದು ಸುಮಾರು ೨೦ ಇಂಚು ವ್ಯಾಸವನ್ನು ಹೊಂದಿರುತ್ತದೆ. ಇದರಲ್ಲಿ ಸುಮಾರು ಐದು ಇಂಚು ವ್ಯಾಸದ ಐದು ಗುಳಿಗಳಿವೆ. ದಿನಸಿ ಬಟ್ಟಲು ದುಂಡಾಗಿದ್ದು ಅದನ್ನು ಹಿಡಿದುಕೊಳ್ಳಲು ಹಿಡಿಕೆ ಇರುತ್ತದೆ. ಸಾಗುವಾನಿ, ಬೇವು ಮುಂತಾದ ಮರಗಳಿಂದ ತಯಾರಿಸುತ್ತಾರೆ. ಈ ಸಾಧನದಲ್ಲಿ ಸಾಂಬಾರ ಪದಾರ್ಥಗಳನ್ನು





ಇಡುವುದರಿಂದ ಅವು ಬಹಳ ದೀರ್ಘಕಾಲ ಬಾಳಿಕೆ ಬರುತ್ತವೆ ಎನ್ನುವುದು ಬಳಕೆದಾರರ ಅನುಭವ. ಪ್ಲಾಸ್ಟಿಕ್, ಸ್ಟೀಲ್, ಸಿಲ್ವರ್, ತಾಮ್ರ, ಕಂಚಿನ ಬಟ್ಟಲು ಬಂದಮೇಲೆ ಈ ವಸ್ತುವಿನ ಬಳಕೆ ಕಡಿಮೆಯಾಗಿದೆ.

೨೮. ನಿಂಬೆ ಒತ್ತೊಳ್ಳು



ನಿಂಬೆಯ ರಸವನ್ನು ಹಿಂಡಲು ಬಳಸುವ ಸರಳ ಸಲಕರಣೆ. ಒಂದೇ ಗಾತ್ರದ ಎರಡು ಪುಟ್ಟ ಮರದ ಹಲಗೆಗಳಿಂದ ಇದರ ನಿರ್ಮಾಣ. ಹಿಡಿಕೆಯ ಆಕಾರದ ಮುಂದೆ ಒಂದರಲ್ಲಿ ನಿಂಬೆ ಹೋಳು ನಿಲ್ಲುವಷ್ಟು ಗಾತ್ರದ ಒಂದು ಅರೆ ರಂಧ್ರವಿದೆ. ರಂಧ್ರದ ಕೆಳಗೆ ಸಣ್ಣ-ಸಣ್ಣ ನಾಲ್ಕೋ ಐದೋ ತೀರ ಕಿರು ರಂಧ್ರಗಳು ಇದ್ದು, ಹಿಂಡಲ್ಪಟ್ಟ ನಿಂಬೆರಸವು ಕೆಳಗೆ ಒಸರುವುದಕ್ಕೆ ಅನುವಾಗುತ್ತದೆ. ಇನ್ನೊಂದರಲ್ಲಿ ನಿಂಬೆಯ ಹೋಳನ್ನು ಮೇಲಿನಿಂದ ಒತ್ತಲು ಅನುಕೂಲವಾಗುವಂತೆ ಮರದ ಒಂದು ಸಣ್ಣ ಉಂಡೆಯನ್ನು ಮೊಳೆ ಹೊಡೆದು ಜೋಡಿಸಲಾಗುತ್ತದೆ. ಎರಡೂ ಹಲಗೆಗಳ ತುದಿಗೆ ಒಂದು ಬಿಜಾಗ್ರಿಯನ್ನು ಅಥವಾ ಮರದನ್ನು ಜೋಡಿಸುತ್ತಾರೆ. ಇದರಿಂದ ಎರಡು ಹಲಗೆಗಳು ಸಲೀಸಾಗಿ ಕಾರ್ಯವೆಸಗಲು ಅನುಕೂಲವಾಗುತ್ತದೆ. ಈಗ ಪ್ಲಾಸ್ಟಿಕ್, ಲೋಹದ ಒತ್ತೊಳ್ಳುಗಳು ಬಂದಿವೆ. ಆದುದರಿಂದ ಮರದ ಒತ್ತೊಳ್ಳುಗಳ ಬಳಕೆ ಕಡಿಮೆಯಾಗಿದೆ.

೨೯. ಪಡ್ಡಿನ ಹಂಚು ಅಥವಾ ಪಡ್ಡಂಚು



ಅಕ್ಕಿಯಿಂದ ತಯಾರಿಸುವ ಪಡ್ಡು ಎಂಬ ತಿಂಡಿಯನ್ನು ಬೇಯಿಸುವ ಹಂಚು ವೃತ್ತಾಕಾರದಲ್ಲಿರುತ್ತದೆ. ಈ ಹಂಚುಗಳಲ್ಲಿ ವ್ಯತ್ಯಾಸಗಳಿವೆ. ಇದರಲ್ಲಿ ಸುಮಾರು ಒಂದು ಇಂಚು ಆಳ, ಒಂದೂವರೆ ಇಂಚು ವ್ಯಾಸದ (ಅಳತೆಯಲ್ಲಿ ಸ್ವಲ್ಪ ವ್ಯತ್ಯಾಸವಿದೆ) ಐದರಿಂದ ಹನ್ನೊಂದು ಗುಳಿಗಳಿರುತ್ತವೆ.





ಇದರಲ್ಲಿ ಒಂದಿಷ್ಟು ಎಣ್ಣೆ ಹೊಯ್ದು ಪಡ್ಡನ್ನು ಬೇಯಿಸುತ್ತಾರೆ. ಇದನ್ನು ಬಳಪದ ಕಲ್ಲಿನಿಂದ ತಯಾರಿಸಿದ್ದಾರೆ. ಪಡ್ಡಿನ ಹಂಚುಗಳನ್ನು ಲೋಹದಿಂದಲೂ ನಿರ್ಮಿಸುತ್ತಾರೆ. ಬೆಸಸಂಖ್ಯೆಯ ಗುಳಿಗಳ ಹಂಚುಗಳೇ ಹೆಚ್ಚಾಗಿದ್ದರೂ ಅಪೂರ್ವವಾಗಿ ಸಮಸಂಖ್ಯೆಯ ಗುಳಿಗಳವೂ ಇವೆ.

೬೦. ಲಾಟೀನು ಅಥವಾ ಲಾಟಾಣಿ



ಬೆಳಕಿಗಾಗಿ ಬಳಸುವ ಸಾಧನ. ದೀಪ ಹೊತ್ತಿಸಿದ ನಂತರ ಗಾಳಿಗೆ ನಂದಿ ಹೋಗದಂತೆ ಗಾಜಿನ ಬುರುಡೆಯನ್ನು ಅಳವಡಿಸಲಾಗುತ್ತದೆ. ಇದರ ಬತ್ತಿಯನ್ನು ಎತ್ತುವುದಕ್ಕೆ ಮತ್ತು ಇಳಿಸುವುದಕ್ಕೆ ವ್ಯವಸ್ಥೆ ಇರುತ್ತದೆ. ಸೀಮೆಎಣ್ಣೆ ಹಾಕಲು ಬುಡದಲ್ಲಿ ನಳಿಕೆಯ ವ್ಯವಸ್ಥೆ ಇರುತ್ತದೆ. ಎತ್ತಿಕೊಂಡು ಒಯ್ಯಲು ಮೇಲ್ಭಾಗದಲ್ಲಿ ಹಿಡಿಕೆಯ ವ್ಯವಸ್ಥೆ ಇದೆ. ಕಬ್ಬಿಣದ ತೆಳು ತಗಡಿನಿಂದ ಲಾಟೀನುಗಳನ್ನು ತಯಾರಿಸುತ್ತಾರೆ. ಸೀಮೆಎಣ್ಣೆ ಮತ್ತು ಬತ್ತಿಗಳಿಂದ ಉರಿಯುತ್ತದೆ. ಲಾಟೀನುಗಳನ್ನು ಮನೆ, ಕಾವಲು ಚಪ್ಪರ, ಎತ್ತಿನಗಾಡಿಗಳ ರಾತ್ರಿ ಪಯಣಗಳಿಗೆ ಬಳಸುತ್ತಿದ್ದರು.

ಅಡಿಟಿಪ್ಪಣಿಗಳು

೧. ನಾಯಕ ಮತ್ತು ರಾಮೇಗೌಡ ಡಿ.ಬಿ.,ಕನ್ನಡ ಜಾನಪದ ನಿಘಂಟು ಪದ ಸಂಸ್ಕೃತಿ ಕೋಶ, ಸಂಪುಟ–೩, ಕನ್ನಡ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ,೨೦೧೭, ಪು – ೫೬


೨. ಅದೇ, ಪು – ೬೩



೨.೨. ಅಲಂಕಾರಿಕ ಪರಿಕರಗಳು

ದೈವದತ್ತ ಸೊಬಗನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಜನಪದ ಮನಸ್ಸು ಎಂದೂ ಹಿಂದೆ ಬಿದ್ದಿಲ್ಲ. ತನ್ನನ್ನು, ತನ್ನ ಪರಿವಾರವನ್ನು, ತನಗೆ ಇಷ್ಟವಾದ ಪ್ರಾಣಿಪಕ್ಷಿಗಳನ್ನು ಶೃಂಗರಿಸಿಕೊಳ್ಳುವ: ತಾನು ಇರುವ ಮನೆ, ಬೀದಿ, ಊರು, ದೈವದೇವತೆಗಳ ಮೂರ್ತಿಗಳು, ಗುಡಿ-ಆಲಯಗಳನ್ನು ಅಂದಗೊಳಿಸುವ ಕೆಲಸದಲ್ಲಿ ಜನಪದ ಚಿತ್ತ ಸದಾ ಅನುರಕ್ತ. ಹಾಗೆ ಅಲಂಕಾರ ಮಾಡುವ ಕೆಲವು ಸಾಮಾಗ್ರಿಗಳನ್ನು ಈ ವಿಭಾಗದಲ್ಲಿ ಪರಿಚಯಿಸುತ್ತಿದ್ದೇನೆ. ಲಂಬಾಣಿಗರಂಥ ಕೆಲವು ವಿಶಿಷ್ಟ ಸಮುದಾಯಗಳ ವೇಷಭೂಷಣಗಳನ್ನು ಈ ಅಧ್ಯಾಯದಲ್ಲಿ ಕಾಣಬಹುದಾಗಿದೆ. ಗೃಹಾಲಂಕಾರ ಮಾಡುವ ಕೆಲವು ವಸ್ತುಗಳನ್ನು ಮತ್ತು ರೈತರಿಗೆ ತುಂಬ ಆಪ್ತವಾದ ಎತ್ತುಗಳನ್ನು ಶೃಂಗರಿಸುವ ಕೆಲವು ವಸ್ತುಗಳನ್ನು ಈ ಅಧ್ಯಾಯದಲ್ಲಿ ಪರಿಚಯಿಸುತ್ತಿದ್ದೇನೆ. ಜನಪದರು ಬಳಸುತ್ತಿದ್ದ ಅಲಂಕಾರಿಕ ಸಾಮಾಗ್ರಿಗಳು ಅವರ ಸಾಮಾಜಿಕ ಗೌರವವನ್ನು ಹೆಚ್ಚಿಸುವಂತಹವಾಗಿದ್ದವು. ಮಂಡ್ಯ ಜಿಲ್ಲೆಯ ಜನರ ಅಲಂಕಾರಿಕ ಪರಿಕರಗಳು ಇಲ್ಲಿನ ಸಾಂಸ್ಕೃತಿಕ ವಿಚಾರದ ದೃಷ್ಟಿಯಿಂದ ಮಹತ್ವದ ಪಾತ್ರ ವಹಿಸುತ್ತವೆ.

೧. ಅಂಗೂಟಿ



ಲಂಬಾಣಿಗರು ಉಂಗುರವನ್ನು ತಮ್ಮ ಭಾಷೆಯಲ್ಲಿ 'ಅಂಗೂಟಿ' ಎನ್ನುತ್ತಾರೆ. ಇದನ್ನು ಲಂಬಾಣಿ ಸ್ತ್ರೀಯರು ತಮ್ಮ ಎಡಗೈಯ ಮಧ್ಯ ಬೆರಳಿಗೆ ತೊಡುತ್ತಾರೆ. ಗೌರಿ ಹುಣ್ಣಿಮೆಯಲ್ಲಿ ಇವರು ಮಾಡುವ ಸಾಂಪ್ರದಾಯಿಕ ನೃತ್ಯದಲ್ಲಿ ಇದನ್ನು ವಿಶೇಷವಾಗಿ ಧರಿಸುವ ಸಂಪ್ರದಾಯವಿದೆ. ಅಂಗೂಟಿ ಅಲಂಕಾರಿಕವಾಗಿ ನಿರ್ಮಿತವಾಗಿದೆ. ಅಂಗೂಟಿದಲ್ಲಿ 'ಉಂಗುರ' ಭಾಗವು ಮೇಲ್ಭಾಗದಲ್ಲಿ ಬೆರಳಿನ ಉದ್ದಕ್ಕೂ ಚಾಚಿ ಅಲ್ಲಿ ಮೂರು ಪುಟ್ಟ 'ಕಳಸ' ಗಳ ಆಕಾರಗಳನ್ನು ಒಳಗೊಂಡಿರುತ್ತದೆ. ಈ ಚಾಚು ಸುಮಾರು ಎರಡು ಇಂಚು ಉದ್ದವಿರುತ್ತದೆ. ಅಂಗೂಟಿವನ್ನು ಸೀಮೆಬೆಳ್ಳಿ ಅಥವಾ ಮನೆಯಲ್ಲಿ ಅಲಂಕಾರಕ್ಕಾಗಿ ಇಡಲು ಬಳಸುವ ಒಂದು ವಿಶೇಷ ಸಾಧನ. ಈ ಸೀಸೆಯು ಸುಮಾರು ಒಂದು ಅಡಿ ಎತ್ತರವಿದೆ. ಸುಮಾರು ಮೂರು ಇಂಚು ಅಗಲವಿದೆ. ಇದರ ಕಂಠವು ಸುಮಾರು ಎರಡು ಇಂಚು ಎತ್ತರವಿದ್ದು, ಸುಮಾರು ಒಂದು ಇಂಚು ವ್ಯಾಸವಿದೆ. ಇದರ ಮೇಲ್ಭಾಗದಲ್ಲಿ ಗೋಡೆಗೆ ನೇತುಹಾಕಲು ಒಂದು ಕಬ್ಬಿಣದ ಕೊಂಡಿ ಇದೆ. ವಿಶೇಷವೆಂದರೆ ಈ ಸೀಸೆಯ ಒಳಗಡೆ ಮುತ್ತು ಮಣಿಗಳು, ಉಲ್ಲನ್ ದಾರ ಮತ್ತು ಪ್ಲಾಸ್ಟಿಕ್‌ನಿಂದ ಹೆಣೆದ ನಾಲ್ಕು ಕಂಬಗಳಿದ್ದು ಮಂಚದ ಆಕೃತಿಯಲ್ಲಿದೆ. ಮಂಚದ ಮೇಲೆ ತಾಯಿ ಮತ್ತು ಮಗು ಮಲಗಿರುವ ಗೊಂಬೆಗಳಿವೆ. ಇಳಿಬಿಟ್ಟಿರುವ ಬಲ್ಬಿನಂತೆ ಇರುವ ಒಂದು ದೊಡ್ಡ ಮುತ್ತನ್ನು ನೇತುಹಾಕಲಾಗಿದೆ. ಒಟ್ಟಾರೆ ಅಲಂಕಾರದ ಸೀಸೆಯು ನೋಡಲು ತುಂಬಾ ಚೆನ್ನಾಗಿದೆ. ಮತ್ತು



ವಿಸ್ಮಯಕಾರಿಯಾಗಿದೆ. ಇದನ್ನು ಮನೆಯ ಗೋಡೆ ಅಥವಾ ಬೆಂಚಿನ ಮೇಲೆ ಇಡುವ ಕ್ರಮವು ರೂಢಿಯಲ್ಲಿದೆ. ಅಲಂಕಾರಿಕ ಗಾಜಿನ ಸೀಸೆಗಳಲ್ಲಿ ವಿವಿಧ ಬಗೆಗಳಿರುತ್ತವೆ. ಇವುಗಳನ್ನು ಕುಶಲತೆಯಿಂದ ಹೆಣೆದಿದ್ದಾರೆ.

೨. ಕನ್ನಡಿ ಪೆಟ್ಟಿಗೆ



ಮನೆಗಳಲ್ಲಿ ಅಲಂಕಾರಕ್ಕಾಗಿ ಬಳಸುತ್ತಿದ್ದ ವಿಶೇಷ ವಸ್ತು ಅಥವಾ ಸಾಧನ. ಸಾಮಾನ್ಯವಾಗಿ ಒಂದರಿಂದ ಒಂದೂವರೆ ಅಡಿ ಅಗಲ, ಎರಡರಿಂದ ಎರಡೂವರೆ ಅಡಿ ಎತ್ತರದಲ್ಲಿರುತ್ತದೆ. ಹಗುರವಾದ ಮರದಿಂದ ತಯಾರಿಸಿದ ಈ ಪೆಟ್ಟಿಗೆಗೆ ಕನ್ನಡಿ ಗಾಜನ್ನು ಅಳವಡಿಸಿದ್ದಾರೆ. ಕೆಳಭಾಗದಲ್ಲಿ ಒಂದು ಪೆಟ್ಟಿಗೆಯನ್ನು ತಯಾರಿಸಿ ಅದರಲ್ಲಿ ಕುಂಕುಮ, ತಲೆಗೆ ಹಾಕುವ ಎಣ್ಣೆ, ಬಾಚಣಿಗೆ, ಸುಗಂಧ ದ್ರವ್ಯಗಳು ಮುಂತಾದವನ್ನು ಇಟ್ಟಿರುತ್ತಾರೆ. ತಲೆಬಾಚಿಕೊಳ್ಳಲು ಕೂಡ ಬಳಕೆಯಾಗುತ್ತದೆ. ಹೆಣ್ಣುಮಕ್ಕಳು ಅಲಂಕಾರ ಮಾಡಿಕೊಳ್ಳಲು ಈ ಕನ್ನಡಿ ಪೆಟ್ಟಿಗೆಯನ್ನು ಉಪಯೋಗಿಸುತ್ತಾರೆ.

೩. ಕಾಡುಕೋಣದ ಕೋಡು



ಮನೆಯ ಅಲಂಕಾರಕ್ಕಾಗಿ ಬಳಸುವ ಕಾಡುಕೋಣದ ಕೊಂಬುಗಳು. ಮರ ಅಥವಾ ಮಣ್ಣಿನಿಂದ ತಯಾರಿಸಿಕೊಂಡ ಕಾಡುಕೋಣದ ಮುಖಕ್ಕೆ ಈ ಕಾಡು ಕೋಣದ ಕೊಂಬುಗಳನ್ನು ಜೋಡಿಸಿಕೊಂಡು ಅಲಂಕಾರಕ್ಕಾಗಿ ಬಳಸುತ್ತಾರೆ. ಮನೆಯ ಒಳಗಿನ ಪಡಸಾಲೆ, ಅಂಗಳದ ಅಗಲವಾದ ಗೋಡೆಗೆ ಇದನ್ನು ಹಾಕುವುದು ಹೆಚ್ಚು. ಕಾಡುಪ್ರಾಣಿಗಳನ್ನು ಬೇಟೆಯಾಡಿದ ವೀರತನದ ಸಾಂಕೇತಿಕದ ಪ್ರತೀಕವಾಗಿ ಇದನ್ನು ಬಳಸುತ್ತಾರೆ. ಇತ್ತೀಚೆಗೆ ಕಾಡುಪ್ರಾಣಿಗಳ ಬೇಟೆ ನಿಷೇಧವಾಗಿರುವ ಕಾರಣ ಇಂತಹ ಕೊಂಬುಗಳ ಬಳಕೆ ಅಪೂರ್ವವಾಗಿದೆ.





೮. ಕುಲಾವಿ ಅಥವಾ ಕುಲಾಯಿ



“ಸಣ್ಣಮಕ್ಕಳಿಗೆ ತಲೆಗೆ ಕಟ್ಟಲು ಉಪಯೋಗಿಸುವ ಬಟ್ಟೆಯ ಟೋಪಿ. ಚಿಕ್ಕಮಕ್ಕಳಿಗೆ ಇದನ್ನು ಕಟ್ಟುವುದರಿಂದ ಧೂಳು, ಬಿಸಿಲು, ಶೀತಬಾಧೆಯನ್ನು ತಡೆಯುವುದು ಇದರ ಮುಖ್ಯ ಉದ್ದೇಶ”.[೧] ಇದು ಪುಟ್ಟಮಕ್ಕಳಿಗೆ ಅಲಂಕಾರ ಸಾಧನವೂ ಹೌದು. ತಲೆಯ ಮೇಲ್ಭಾಗ ಮತ್ತು ಹಿಂಭಾಗವು ಆವೃತವಾಗುವಷ್ಟು ಗಾತ್ರದಲ್ಲಿ ಇದನ್ನು ರಚಿಸಿಕೊಂಡು ಕಿವಿಯ ಇಕ್ಕೆಲಗಳಿಂದಲೂ ಕೆಳಗಿಳಿಸಿ ಗಲ್ಲದ ಕೆಳಭಾಗದಲ್ಲಿ ಇದನ್ನು ಎರಡು ಕಸೆಗಳಿಂದ ಕಟ್ಟುತ್ತಾರೆ. ಇದು ವರ್ಣಮಯವಾಗಿರುತ್ತದೆ. ಇದರ ಮೇಲ್ಭಾಗ ಮತ್ತು ಅಂಚುಗಳುದ್ದಕ್ಕೂ ಪುಟ್ಟ ಪುಟ್ಟ ಕುಂಚಿಕೆಗಳನ್ನು ಹೆಣೆಯುತ್ತಾರೆ. ಇದು ಕೇವಲ ಅಲಂಕಾರದ ಉದ್ದೇಶವುಳ್ಳವು. ಮೃದುವಾದ ಹತ್ತಿ ಬಟ್ಟೆ ಅಥವಾ ಮೃದವಾದ ಉಣ್ಣೆಬಟ್ಟೆಯಿಂದ ತಯಾರಿಸಿಕೊಳ್ಳುತ್ತಾರೆ.

ಹಸುಗೂಸಿಗೆ ತಾಯಿಯ ಕಡೆಯಿಂದ ಮೊದಲು ಕುಲಾವಿಯನ್ನು ಹೊಲಿಸಿ ಕೊಡಿಸುವ ಸಂಪ್ರದಾಯವಿದೆ. ಬೇರೆ ಬೇರೆ ತೆರನ ವಿನ್ಯಾಸದ ಮತ್ತು ಗುಣಮಟ್ಟದ ಸಿದ್ಧಟೊಪ್ಪಿಗೆಗಳು ಮಾರುಕಟ್ಟೆಗೆ ಬಂದಿರುವುದರಿಂದ ಹಳೆಯ ರೀತಿಯ ಕುಲಾವಿಗಳು ವಿರಳವಾಗುತ್ತಿವೆ. ಕುಲಾವಿಯ ಪ್ರತಿ ನೇಯ್ಗೆಯಲ್ಲೂ ವಾತ್ಸಲ್ಯವು ಅನಾವರಣಗೊಳ್ಳುತ್ತದೆ.

೯. ಕೃಷ್ಣಚಕ್ರ



ಪೌರಾಣಿಕ ನಾಟಕದಲ್ಲಿ ಕೃಷ್ಣ ಅಥವಾ ವಿಷ್ಣು ಪಾತ್ರದಾರಿ ಬಳಸುವ ಒಂದು ಆಯುಧ. ಇದು ಸುಮಾರು ಹನ್ನೆರಡು ಇಂಚು ಉದ್ದವಿದೆ. ಕೆಳಭಾಗದಲ್ಲಿ ಹಿಡಿಯಲು ಹಿಡಿಕೆಯಿದ್ದು ಮೇಲ್ಭಾಗ ಚಕ್ರಾಕಾರ ಹೊಂದಿದೆ. ಚಕ್ರವು ಸುಮಾರು ಆರೂವರೆ ಇಂಚು ವ್ಯಾಸವನ್ನು ಹೊಂದಿದೆ.





೬. ಕೋಡಣಸು ಅಥವಾ ಕೊಡಂಚು



ಎತ್ತಿನ ಕೋಡುಗಳ ತುದಿಗೆ ಅಲಂಕಾರಕ್ಕಾಗಿ ಬಳಸುವ ಪುಟ್ಟ ಸಾಧನ. ಇವು ಕೊಳವೆಯ ಆಕಾರದಲ್ಲಿದ್ದು, ಅದರ ತುದಿಯ ದುಂಡಾಕಾರ ಅಥವಾ ಪುಟ್ಟ ಕಳಸಾಕಾರದಲ್ಲಿರುತ್ತದೆ. ಕೋಡಣಸುಗಳ ಬುಡದಲ್ಲಿ ಎರಡು ಪುಟ್ಟ ರಂಧ್ರಗಳಿದ್ದು, ಅವುಗಳ ಮೂಲಕ ಮೊಳೆ ಅಥವಾ ತಂತಿಗಳನ್ನು ಕೋಡಿನ ತುದಿಯಲ್ಲಿ ಕೊರೆದ ಪುಟ್ಟರಂಧ್ರದೊಳಗೆ ಬರುವಂತೆ ಹಾಯಿಸಿ ತಂತಿಯ ತುದಿಗಳನ್ನು ಒಳಕ್ಕೆ ಬಾಗಿಸಲಾಗುತ್ತದೆ. ಕೋಡಣಸುಗಳು ಸುಮಾರು ಎರಡರಿಂದ ಐದು ಇಂಚುಗಳಷ್ಟು ಉದ್ದವಿರುತ್ತದೆ. ಇವುಗಳ ಸುತ್ತಲೂ ಅಲಂಕಾರಕ್ಕಾಗಿ ಕಿರು ಪ್ರಮಾಣದ ಕುಸುರಿ ಕೆಲಸ ಮಾಡಿರುವುದೂ ಕಂಡುಬರುತ್ತದೆ.

ಕೋಡಣಸುಗಳನ್ನು ಎತ್ತುಗಳಿಗೆ ಸಾಮಾನ್ಯವಾಗಿ ನಿತ್ಯವೂ ತೊಡಿಸುತ್ತಾರೆ. ಕೆಲವೆಡೆ ಕಾರಹುಣ್ಣಿಮೆಯ ಹಬ್ಬದಂದು ಕರಿಹೋರಿಗೆ ಚಿನ್ನ ಬೆಳ್ಳಿಯ ಕೋಡಣಸುಗಳನ್ನು ತೊಡಿಸಿ ಬಂಗಾರದ ಗೆಜ್ಜೆಗಳಿಂದ ಅಲಂಕರಿಸುವ ಸಂಭ್ರಮೋಪೇತ ಆಚರಣೆ ನಡೆಯುತ್ತಿತ್ತು. ಹಬ್ಬ, ಮೆರವಣಿಗೆಗಳಂಥ ಸಂದರ್ಭಗಳಲ್ಲಿ ಎತ್ತುಗಳ ಕೊಂಬುಗಳ ತುದಿಗೆ ಉಣ್ಣೆಯ ಗೊಂಡೆಗಳನ್ನು ಕಟ್ಟಿ ಇನ್ನಷ್ಟು ಅಂದವಾಗಿ ಅಲಂಕಾರ ಮಾಡುತ್ತಾರೆ. ಕೋಡಣಸುಗಳನ್ನು ಅಲಂಕಾರಕ್ಕಾಗಿ ಮಾತ್ರ ಬಳಸದೆ ಎತ್ತುಗಳು ಪರಸ್ಪರ ಇರಿಯುವಾಗ, ಮನುಷ್ಯರಿಗೆ ಹಾಯುವಾಗ, ಹೆಚ್ಚಿನ ಅಪಾಯವನ್ನು ತಪ್ಪಿಸುವುದಕ್ಕಾಗಿಯೂ ಬಳಸಲಾಗುತ್ತದೆ. ಕೋಡಣಸುಗಳನ್ನು ಅಲ್ಯೂಮಿನಿಯಂ, ಕಂಚು ಅಥವಾ ಹಿತ್ತಳೆ, ಬೆಳ್ಳಿ, ಬಂಗಾರಗಳಿಂದ ಕೂಡ ತಯಾರಿಸುತ್ತಾರೆ. ಅಮೂಲ್ಯ ಲೋಹಗಳ ಕೋಡಣಸುಗಳನ್ನು ಅಪೂರ್ವ ಸಂದರ್ಭಗಳಲ್ಲಷ್ಟೇ ಬಳಸುತ್ತಾರೆ.

೭. ಗಚ್ಚೊ



"ಲಂಬಾಣಿ ಮಹಿಳೆಯರು ಮದುವೆ ಸಂದರ್ಭದಲ್ಲಿ ಬಳಸುವ ವಸ್ತ್ರ. ಇದು ಚೌಕಾಕಾರದಿಂದ ಕೂಡಿದ ಬಿಳಿಯ ಬಟ್ಟೆ ತೆಳುವಾಗಿರುವುದು. ಇದು ಎಂಟು ಇಂಚು ಉದ್ದ- ಅಗಲವಿದೆ".[೨] ಲಂಬಾಣಿ, ಮಹಿಳೆ ಲಗ್ನವಾದ ನಂತರ ಗಂಡನ ಮನೆಗೆ ಬಂದಾಗ ನೀರು ಅಥವಾ ಗಂಗೆ ತರುವ ಆಚರಣೆಯಲ್ಲಿ ಕೊಡ ಹೊತ್ತು ತರುವಾಗ ತಲೆಯ ಮೇಲಿನ ಸಿಂಬೆಗೆ ಅಲಂಕಾರಯುತವಾಗಿ ನೇತಾಡಿಸುವುದಕ್ಕೆ ಬಳಸುವ ವಸ್ತ್ರ. ಇದನ್ನು ನಾನಾ ಬಣ್ಣದ ದಾರಗಳನ್ನು ಬಳಸಿ ಕಸೂತಿಹಾಕಿ ಸಮುದಾಯದ ಮಹಿಳೆಯರೇ ತಯಾರಿಸುತ್ತಾರೆ.

೮. ಗಾಜಿನ ಸೀಸೆ



ಮನೆಗಳಲ್ಲಿ ಅಲಂಕಾರಕ್ಕಾಗಿ ಇಡಲು ಬಳಸುವ ಒಂದು ವಿಶೇಷ ಸಾಧನ. ಈ ಸೀಸೆಯು ಸುಮಾರು ಒಂದು ಅಡಿ ಎತ್ತರವಿದೆ. ಸುಮಾರು ಮೂರು ಇಂಚು ಅಗಲವಿದೆ. ಇದರ ಕಂಠವು ಸುಮಾರು ಎರಡು ಇಂಚು ಎತ್ತರವಿದ್ದು, ಸುಮಾರು ಒಂದು ಇಂಚು ವ್ಯಾಸವಿದೆ. ಇದರ ಮೇಲ್ಭಾಗದಲ್ಲಿ ಗೋಡೆಗೆ ನೇತುಹಾಕಲು ಒಂದು ಕಬ್ಬಿಣದ ಕೊಂಡಿ ಇದೆ. ವಿಶೇಷವೆಂದರೆ ಈ ಸೀಸೆಯ ಒಳಗಡೆ ಮುತ್ತುಮಣಿಗಳು, ಉಲ್ಲನ್ ದಾರ ಮತ್ತು ಪ್ಲಾಸ್ಟಿಕ್‌ನಿಂದ ಹೆಣೆದ ನಾಲ್ಕು ಕಂಬಗಳಿದ್ದು, ಮಂಚದ ಆಕೃತಿಯಲ್ಲಿದೆ. ಮಂಚದ ಮೇಲೆ ತಾಯಿ ಮತ್ತು ಮಗು ಮಲಗಿರುವ ಗೊಂಬೆಗಳಿವೆ. ಇಳಿಬಿಟ್ಟಿರುವ ಬಲ್ಬಿನಂತೆ ಇರುವ ಒಂದು ದೊಡ್ಡ ಮುತ್ತನ್ನು ನೇತು ಹಾಕಲಾಗಿದೆ. ಒಟ್ಟಾರೆ ಅಲಂಕಾರದ ಸೀಸೆಯು ನೋಡಲು ತುಂಬಾ ಚೆನ್ನಾಗಿದೆ ಮತ್ತು ವಿಸ್ಮಯಕಾರಿಯಾಗಿದೆ. ಇದನ್ನು ಮನೆಯ ಗೋಡೆ ಅಥವಾ ಬೆಂಚಿನ ಮೇಲೆ ಇಡುವ ಕ್ರಮವು ರೂಢಿಯಲ್ಲಿದೆ. ಅಲಂಕಾರಿಕ ಗಾಜಿನ ಸೀಸೆಗಳಲ್ಲಿ ವಿವಿಧ ಬಗೆಗಳಿರುತ್ತವೆ. ಇವುಗಳನ್ನು ಕುಶಲತೆಯಿಂದ ಹೆಣೆದಿದ್ದಾರೆ.

೯. ಗುಂಗ್ಲೋ







ಲಂಬಾಣಿ ಮಹಿಳೆಯರು ತಮ್ಮ ತಲೆ ಅಥವಾ ಹಣೆಯಲ್ಲಿ ಅಲಂಕಾರಕ್ಕೆ ಬಳಸುವ ಆಭರಣ. ಇದು ಸುಮಾರು ಇಪ್ಪತ್ತೇಳು ಇಂಚು ಉದ್ದ, ಎರಡು ಇಂಚು ಅಗಲದ ರಚನೆಯಾಗಿದೆ. ಇದರ ತುದಿಗಳು ಹಾಗೂ ಮಧ್ಯಭಾಗದಲ್ಲಿ ರಿಬ್ಬನ್ನಿನ ಹೂಗಳನ್ನು ಜೋಡಿಸಲಾಗುತ್ತದೆ. ನಡುಪಟ್ಟಿಯ ಮೇಲೆ ಕನ್ನಡಿಯನ್ನು ಲಗತ್ತಿಸಿದ ಕೈವಸ್ತ್ರದ ಪಟ್ಟಿಗಳಿರುತ್ತವೆ. ಇದನ್ನು ಸೀರೆಯ ಸೆರಗಿಗೆ ಜೋಡಿಸಲಾಗಿದೆ. ಲಂಬಾಣಿ ಸಮುದಾಯದ ಮಹಿಳೆಯರು ಹಬ್ಬ ಹರಿದಿನಗಳಲ್ಲಿ ಗುಂಗ್ಟೋ ಸಹಿತವಾದ ಉಡುಪನ್ನು ಧರಿಸುತ್ತಾರೆ. ಇದನ್ನು ಸ್ವತಃ ಅದೇ ಸಮುದಾಯದ ಹೆಣ್ಣುಮಕ್ಕಳು ವಿವಿಧ ಬಣ್ಣದ ಬಟ್ಟೆ, ದಾರ, ಕನ್ನಡಿ ಚೂರುಗಳನ್ನು ಅಳವಡಿಸಿಕೊಂಡು ಹೆಣೆದು ತಯಾರಿಸುತ್ತಾರೆ.

೧೦. ಚಟಗೆ ಅಥವಾ ಕಾಲುಂಗುರ



ಮಹಿಳೆಯರು ಕಾಲಿನ ಬೆರಳಿಗೆ ಧರಿಸುವ ಉಂಗುರವಾಗಿದೆ. ಲಂಬಾಣಿಗರು ತಮ್ಮ ಭಾಷೆಯಲ್ಲಿ 'ಚಟಗೆ' ಎಂದು ಕರೆಯುತ್ತಾರೆ. ಇದನ್ನು ಮದುವೆ ಸಂದರ್ಭದಲ್ಲಿ ಗಂಡನ ಮನೆಯವರು ಮದುಮಗಳ ಕಾಲಿಗೆ ಹಾಕುವ ಸಂಪ್ರದಾಯವಿದೆ. ಬೆರಳಿಗೆ ತಕ್ಕಂತೆ ವಿವಿಧ ಗಾತ್ರ ಮತ್ತು ವಿನ್ಯಾಸದ ಕಾಲುಂಗುರಗಳಿವೆ. ಇದನ್ನು ಧರಿಸುವುದು ಮುತ್ತೈದೆತನದ ಸಂಕೇತವಾಗಿದೆ. ಸಿಲ್ವರ್, ಕಾಡುಬೆಳ್ಳಿ ಮುಂತಾದ ಲೋಹಗಳಿಂದ ತಯಾರಿಸುತ್ತಾರೆ. ಗಂಡ ಸತ್ತವರು ಕಾಲುಂಗುರವನ್ನು ತೊಡಬಾರದೆಂಬ ನಿಷೇಧವು ಇವರಲ್ಲಿದೆ.

೧೧. ಚಿರತೆಯ ಮುಖ







ಮನೆಯ ಅಲಂಕಾರಕ್ಕೆ ಬಳಸಿದ ಒಂದು ವಿಶೇಷ ಪರಿಕರ. ಬೇಟೆಗಾರಿಕೆಯಲ್ಲಿ ದೊರೆತ ಚಿರತೆಯ ಮುಖವನ್ನು ರಕ್ಷಿಸಿ ಸುಮಾರು ಒಂದುವರೆ ಅಡಿ ಎತ್ತರ, ಒಂದು ಅಡಿ ಅಗಲ ಮರದ ಹಲಗೆಯ ತುಂಡಿಗೆ ಅಳವಡಿಸಲಾಗಿದೆ. ಹಿಂದೆ ದೊಡ್ಡ ದೊಡ್ಡ ಶ್ರೀಮಂತರ ಮನೆಗಳಲ್ಲಿ ಪ್ರತಿಷ್ಠೆಗಾಗಿ ಇಂತಹ ಅಲಂಕಾರಿಕ ವಸ್ತುಗಳನ್ನು ಬಳಸುತ್ತಿದ್ದರು.

೧೨. ಜರಿ ಪಟಗ



ಹಬ್ಬ, ಜಾತ್ರೆ, ಮದುವೆ ಮುಂತಾದ ಶುಭಸಂದರ್ಭಗಳಲ್ಲಿ ಪುರುಷರು ತಲೆಗೆ ಸುತ್ತಿಕೊಳ್ಳಲು ಬಳಸುವ ವಸ್ತ್ರ. ಈ ಪಟಗವನ್ನು ಮನೆಯ ಹಿರಿಯ ಗ್ರಾಮದ ಮುಖಂಡರು ಸುತ್ತಿಕೊಳ್ಳುವ ಕ್ರಮ ಹೆಚ್ಚು ರೂಢಿಯಲ್ಲಿತ್ತು. ಇದು ಪ್ರತಿಷ್ಠೆಯ ಸಂಕೇತವಾಗಿಯೂ ಬಳಕೆಯಾಗುತ್ತಿತ್ತು. ಇದು ಸುಮಾರು ಎರಡು ಮೀಟರ್ ಉದ್ದ, ಒಂದೂವರೆ ಮೀಟರ್ ಅಗಲವಿದ್ದು, ಆಯತಾಕಾರದಲ್ಲಿರುತ್ತದೆ. ಇದನ್ನು ನೇಕಾರರು ರೇಷ್ಮೆ ನೂಲಿನಿಂದ ತಯಾರಿಸುತ್ತಿದ್ದರು. ಜನರು ತಮ್ಮ ಆರ್ಥಿಕತೆಗನುಗುಣವಾಗಿ ವಿವಿಧ ರೀತಿಯ ರುಮಾಲುಗಳನ್ನು ಬಳಸುತ್ತಿದ್ದರು.

೧೩. ದಿಕಾಂಜ್ಜಿ ಬೀಜ



ಎತ್ತು ಮತ್ತು ಎಮ್ಮೆಗಳಿಗೆ ದೃಷ್ಟಿಯಾಗದಂತೆ ಕೊರಳಿಗೆ ಕಟ್ಟುವ ಒಂದು ಸಾಧನ. 'ದಿಕಾಂಜ್ಜಿ' ಎನ್ನುವುದು ಲಂಬಾಣಿಗರ ಭಾಷೆ. ಇದು ಸುಮಾರು ಎರಡು ಇಂಚು ವ್ಯಾಸವಿರುವ ಬೀಜ. ಕಂದು ಬಣ್ಣದ್ದಾಗಿದ್ದು ನಯವಾಗಿ ಚಪ್ಪಟೆಯಾಗಿದೆ. ಸಾಮಾನ್ಯವಾಗಿ ಆಕಳು ಮತ್ತು ಎಮ್ಮೆಗಳು ಗರ್ಭಧರಿಸಿದಾಗ





ಪೀಡೆ, ಪಿಶಾಚಿಗಳ ಕೆಟ್ಟ ದೃಷ್ಟಿ ಬೀಳಬಾರದೆಂಬ ಕಾರಣಕ್ಕೆ ಜಾನುವಾರುಗಳ ಕೊರಳಿಗೆ ಕಟ್ಟುತ್ತಾರೆ. ಇದರಿಂದ ಪೀಡೆ ಪಿಶಾಚಿಗಳ ಕಾಟ ಇರುವುದಿಲ್ಲ ಎನ್ನುವುದು ಲಂಬಾಣಿಗರ ನಂಬಿಕೆ.

೧೪. ಬಲಿಯಾ



ಲಂಬಾಣಿಗರ ಭಾಷೆಯಲ್ಲಿ ಬಲಿಯಾ ಎಂದರೆ ತೋಳಬಂದಿ ಎಂದರ್ಥ. ಇದನ್ನು ಫೈಬರ್ ಅಥವಾ ರಬ್ಬರಿನಿಂದ ತಯಾರಿಸುತ್ತಾರೆ. ಲಂಬಾಣಿ ಮಹಿಳೆಯರು ತಮ್ಮ ತೋಳುಗಳಲ್ಲಿ ಇವನ್ನು ಧರಿಸುತ್ತಾರೆ. ಬಳೆಯ ಒಂದು ಭಾಗವನ್ನು ತುಂಡರಿಸಿರುವ ಕಾರಣ ತೋಳುಗಳಲ್ಲಿ ಇದನ್ನು ಧರಿಸಲು ಸುಲಭವಾಗಿರುತ್ತದೆ. ಒಂದೊಂದು ತೋಳಿಗೆ ಎರಡೆರಡು ಬಳೆಗಳಂತೆ ಸಾಮಾಜಿಕ, ಧಾರ್ಮಿಕ ಕಟ್ಟು-ಕಟ್ಟಳೆಯಂತೆ ತೋಳುಗಳಲ್ಲಿ ಧರಿಸುತ್ತಾರೆ. ಈ ಬಳೆಗಳು ಮಂಗಳ ಸೂತ್ರಕ್ಕೆ ಸಮಾನವಾದುದ್ದೆಂಬ ಕಲ್ಪನೆಯವರದು. ಮದುವೆಯಾದ ದಿನದಂದು ಗಂಡನ ಮನೆಯವರು ಕೊಡುವ ಇಂಥ ಐದು ಬಳೆಗಳಲ್ಲಿ ನಾಲ್ಕನ್ನು ವಿವಾಹಿತೆ ಧರಿಸಿದರೆ ಉಳಿದ ಒಂದನ್ನು ಅವಳ ತಾಯಿಗೆ ಕೊಡುವ ಸಂಪ್ರದಾಯವಿದೆ. ತಾಯಿಗೆ ಈ ಬಳೆಯು ಮಗಳನ್ನು ಕೊಟ್ಟುದಕ್ಕೆ ಪ್ರತಿಯಾಗಿ ನೀಡುವ ಕಾಣಿಕೆಯಾಗಿರುತ್ತದೆ. ತೋಳಿಗೆ ಈ ಬಳೆಯನ್ನು ಧರಿಸುವುದೆಂದರೆ ಗಂಡನೇ ತಾಳಿಕಟ್ಟಿದ್ದಕ್ಕೆ ಸಮಾನವಾಗುತ್ತದೆ. ಗಂಡ ಜೀವಂತವಿರುವ ತನಕ ಇದನ್ನು ತೆಗೆದು ಹಾಕುವಂತಿಲ್ಲ. ಗಂಡನು ಸತ್ತಾಗ ಕೆಲವರು ಈ ಬಳೆಗಳನ್ನು ಪತಿಯ ಚಿತೆಗೆ ಹಾಕುವ ರೂಢಿ ಇತ್ತು. ಈಗ ಅಂಥ ಆಚರಣೆ ಕಡಿಮೆಯಾಗಿದೆ.

೧೫. ದೃಷ್ಟಿಗೊಂಬೆ



ಹೊಸ ಮನೆಗೆ ದೃಷ್ಟಿತಾಗದಂತೆ ಹಾಗೂ ಅಲಂಕಾರಕ್ಕಾಗಿ ಬಳಸುವಂತಹ ಬಿದಿರಿನ ವಸ್ತು. ಇದು ಸುಮಾರು ಮುಕ್ಕಾಲು ಅಡಿ ಉದ್ದವಿರುತ್ತದೆ. ಇದರ ಮೈಮೇಲೆಲ್ಲಾ ಚಿಕ್ಕ ಚಿಕ್ಕ ಚುಕ್ಕೆಗಳ ಆಕಾರದಿಂದ ಕೂಡಿದ್ದು (ಇವು ಬೇರುಗಳನ್ನು ಕತ್ತರಿಸಿದ ಬುಡ) ಬಿದಿರಿನ ಗಡ್ಡೆಯಿಂದ ನಿರ್ಮಿತವಾಗಿದೆ. ಇದನ್ನು


ಮನೆಯ ಮುಂಭಾಗದಲ್ಲಿ ಜೋತಾಡಿಸಿ ಕಣ್ಣಿಗೆ ಕಾಣುವಂತೆ ಕಟ್ಟಿರುತ್ತಾರೆ. ಕಟ್ಟಿರುವ ಮನೆಗೆ ದೃಷ್ಟಿ ತಗಲಬಾರದು ಎಂಬ ನಂಬಿಕೆಯಿಂದ ಇದನ್ನು ಕಟ್ಟುತ್ತಾರೆ. ಅಲ್ಲದೆ ರಾತ್ರಿ ಸಂದರ್ಭದಲ್ಲಿ ಪ್ರಾಣಿ ಪಕ್ಷಿಗಳು ಮನೆಯೊಳಗೆ ನುಸುಳಬಾರದು ಎನ್ನುವ ಕಾರಣಕ್ಕೂ ಈ ಗೊಂಬೆಯನ್ನು ಕಟ್ಟುತ್ತಾರೆ.

೧೬. ಮರದ ಸರಪಳಿ



ಮರದಿಂದ ತಯಾರಿಸಿದ ಸರಪಳಿ. ಇದನ್ನು ಅಲಂಕಾರಕ್ಕಾಗಿ ಬಳಸಲಾಗುತ್ತದೆ. ಒಂದೇ ಮರದ ತುಂಡಿನಿಂದ ಕೊರೆದು ಸುಂದರವಾದ ಈ ಸರಪಳಿ ನಿರ್ಮಿಸಲಾಗಿದೆ. ಇದು ಕಲಾವಿದನ ಉತ್ತಮ ಕಲಾ ಕೌಶಲ್ಯಕ್ಕೆ ಸಾಕ್ಷಿಯೆನಿಸಿದೆ. ಮರದ ತುಂಡು ಎಲ್ಲೂ ಒಡೆಯದಂತೆ ಒಂದರೊಳಗೆ ಮತ್ತೊಂದು ಬಳೆಯನ್ನು ಜೋಡಿಸಿ ಒಂದು ಅಡಿಯಷ್ಟು ಉದ್ದದ ಈ ಸರಪಳಿಯನ್ನು ನಿರ್ಮಿಸಲಾಗಿದೆ. ಇದರ ಒಂದು ತುದಿಯಲ್ಲಿ ಚೌಕಾಕಾರದ ಬೀಗವಿರುವಂತೆ ಕೆತ್ತಲಾಗಿದೆ. ಬಡಗಿಗಳು ಹವ್ಯಾಸಕ್ಕಾಗಿಯೂ ಇಂತಹವುಗಳನ್ನು ಅಪರೂಪವಾಗಿ ನಿರ್ಮಿಸುತ್ತಿದ್ದರು ಎನ್ನಲಾಗಿದೆ.

೧೭. ಮುತ್ತಿನಸರ



ಅಲಂಕಾರಕ್ಕಾಗಿ ಗೊಂಬೆಗೆ ಹಾಕುವ ಮುತ್ತಿನ ಸರ. ಇದನ್ನು ಬಿಳಿ ಬಣ್ಣದ ಮುತ್ತಿನ ಮಣಿಗಳಿಂದ ಹೆಣೆದಿದ್ದಾರೆ. ದೊಡ್ಡ ಮತ್ತು ಚಿಕ್ಕ ಮುತ್ತಿನ ಮಣಿಗಳನ್ನು ಪ್ಲಾಸ್ಟಿಕ್ ದಾರಕ್ಕೆ ಪೋಣಿಸಲಾಗಿದೆ. ಮನೆಯ ಗೋಡೆಯ ಮೇಲೆ ಅಥವಾ ಷೋಕೇಸ್‌ನಲ್ಲಿ ಅಲಂಕಾರಕ್ಕಾಗಿ ಹಾಕುವ ಕ್ರಮವೂ ರೂಢಿಯಲ್ಲಿದೆ. ಅಲ್ಲದೆ ಮನೆಯ ಅಲಂಕಾರವನ್ನು ಹೆಚ್ಚಿಸಲು ಅಪರೂಪವಾಗಿ ಬಳಕೆಯಾಗುತ್ತಿದೆ.






೧೮. ಸಾರಂಗದ ಕೊಂಬು



ಮನೆಯ ಮುಂದೆ ಅಲಂಕಾರಕ್ಕಾಗಿ ಬಾಗಿಲ ಮೇಲ್ಭಾಗದಲ್ಲಿ ಮರದ ಸಾರಂಗದ ಮುಖವಾಡಕ್ಕೆ ಈ ಕೊಂಬನ್ನು ಜೋಡಿಸಿ ಇಡುತ್ತಾರೆ. ಇದರಲ್ಲಿ ಗಟ್ಟಿಮುಟ್ಟಾದ ವಸ್ತುಗಳನ್ನು ನೇತು ಹಾಕಲೂ ಬಳಸುತ್ತಾರೆ. ಈ ಕೊಂಬುಗಳ ಹೆಚ್ಚಿನ ಭಾಗವೂ ಟೊಳ್ಳಾಗಿರುತ್ತದೆ. ತಳಭಾಗದ ದಪ್ಪ ಸುಮಾರು ಒಂದೂವರೆ ಇಂಚಿನಷ್ಟಿದ್ದರೆ ತುದಿಯ ಕಡೆಗೆ ಸಾಗುತ್ತಾ ಗಾತ್ರ ಕಡಿಮೆಯಾಗಿ ತುದಿಯನ್ನು ಚೂಪಾಗಿರುತ್ತದೆ. ನೇರವಾಗಿರದೆ ವಕ್ರ ವಕ್ರವಾಗಿರುವ ಈ ಕೊಂಬಿನ ಮೇಲೆ ಬಳೆಯಾಕಾರದ ಗೆರೆಗಳಿರುತ್ತವೆ. ಇದು ಸಾರಂಗದ ಕೊಂಬಾಗಿದ್ದು ಹಿಂದೆ ಯಾವುದೋ ಸಂದರ್ಭದಲ್ಲಿ ಅದು ಸತ್ತ ಬಳಿಕ ಅದನ್ನು ಸಂಗ್ರಹಿಸಲಾಗಿದೆ ಅಥವಾ ಬೇಟೆಯಾಡಿ ಅದನ್ನು ಸಂಗ್ರಹಿಸಬಹುದಾಗಿರುತ್ತದೆ. ಇತ್ತೀಚೆಗೆ ಇದರ ಲಭ್ಯತೆ ಕಡಿಮೆಯಾಗಿದ್ದು ಬಳಕೆಯೂ ಕಡಿಮೆಯಾಗಿದೆ. ಹೀಗೆಯೇ ಕಾಡು ಕೋಣಗಳ ಕೊಂಬನ್ನೂ ಬಳಸಲಾಗುತ್ತದೆ.

೧೯. ಹಣೆಕಟ್ಟು



ಜನಪದರಿಗೆ ಎತ್ತುಗಳೆಂದರೆ ಪಂಚಪ್ರಾಣ. ಅವು ತಮ್ಮ ಕುಟುಂಬದ ಸದಸ್ಯರೆಂದೂ ಸುಖ ಸಂಪದಗಳ ಕಾರಣಕರ್ತರೆಂದೂ ಭಾವನೆ. ಅವನ್ನು ನಾನಾ ವಿಧ ಆರೈಕೆ ಮಾಡಿ, ಶೃಂಗರಿಸಿ ಆನಂದಿಸುವುದು ಅನೇಕರ ಹವ್ಯಾಸ. ಹಣೆಕಟ್ಟು ಅಂಥ ಒಂದು ಅಲಂಕಾರ ಸಾಧನ. ಇದು ಸುಮಾರು ಎಂಟರಿಂದ ಹತ್ತು ಇಂಚುಗಳಷ್ಟು ಉದ್ದ ಮತ್ತು ಸುಮಾರು ಆರರಿಂದ ಎಂಟು ಇಂಚುಗಳಷ್ಟು ಅಗಲವಿದ್ದು ಬೇರೆ ಬೇರೆ ಆಕಾರದಲ್ಲಿರುತ್ತವೆ. ಅರಳಿಎಲೆ, ವಜ್ರಾಕಾರ, ಅರ್ಧಚಂದ್ರ ಮುಂತಾದ ಆಕಾರದಲ್ಲಿ ಹಣೆಕಟ್ಟುಗಳನ್ನು ನಿರ್ಮಿಸುತ್ತಾರೆ. ಸರಳವಾದ ದಾರವೊಂದಕ್ಕೆ ಪದಕವನ್ನು ಜೋಡಿಸಿದಂತೆಯೂ ಇದು





ಇರುತ್ತದೆ. ದಪ್ಪ ಬಟ್ಟೆಯ ಮೇಲೆ ಕನ್ನಡಿಯ ಚೂರು, ಬಣ್ಣಬಣ್ಣದ ಮಣಿಗಳು, ಮುತ್ತುಗಳು, ಕವಡೆ, ಚಿಪ್ಪುಗಳು, ಪುಟ್ಟ ಶಂಖಗಳು, ತೂತಿನಬಿಲ್ಲೆ, ನಾನಾ ಬಣ್ಣದ ದಾರಗಳು, ಕಿರುಗೆಜ್ಜೆ ಮುಂತಾದುವುಗಳನ್ನು ನಾನಾ ವಿನ್ಯಾಸಗಳಲ್ಲಿ ಪೋಣಿಸಿ ಹಣೆಕಟ್ಟನ್ನು ರಚಿಸುತ್ತಾರೆ. ಹೊರಂಚಿನ ಸುತ್ತ ಅಲ್ಲಲ್ಲಿ ಉಣ್ಣೆಯ ಗೊಂಡೆಗಳನ್ನು ಪೋಣಿಸಿ ಹಣೆಕಟ್ಟನ್ನು ಅಲಂಕರಿಸುತ್ತಾರೆ. ಹಣೆಕಟ್ಟನ್ನು ನಿತ್ಯಬಳಕೆ ಮಾಡುವುದಿಲ್ಲ. ಕಾರಹುಣ್ಣಿಮೆ, ಹಟ್ಟಿ ಹಬ್ಬ, ಮದುವೆ ದಿಬ್ಬಣ, ಮೆರವಣಿಗೆ ಮುಂತಾದ ಸಂದರ್ಭಗಳಲ್ಲಿ ಹಣೆಕಟ್ಟು, ಕೋಡಣಸು ಮುಂತಾದವುಗಳಿಂದ ಎತ್ತುಗಳನ್ನು ಅಲಂಕರಿಸಲಾಗುತ್ತದೆ.

ಅಡಿಟಿಪ್ಪಣಿಗಳು

೧. ನಾಯಕ ಮತ್ತು ರಾಮೇಗೌಡ ಡಿ.ಬಿ.,ಕನ್ನಡ ಜಾನಪದ ನಿಘಂಟು ಪದ ಸಂಸ್ಕೃತಿ ಕೋಶ, ಸಂಪುಟ–೩, ಕನ್ನಡ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ೨೦೧೭, ಪು -೧೩೮

೨. ಅದೇ, ಪು–೧೭

೨.೩. ಆಟ ಅಥವಾ ಆಟಿಕೆಯ ಪರಿಕರಗಳು

ಜನಪದೀಯರ ಸಂಸ್ಕೃತಿಯ ವಿಶೇಷತೆಗಳನ್ನು ಅರ್ಥೈಸಿಕೊಳ್ಳುವಲ್ಲಿ ಆ ಜನರು ಮನರಂಜನೆಗಾಗಿ ಹಾಗೂ ಬೇಸರದ ನಿವಾರಣೆಗಾಗಿ ಬುದ್ಧಿಶಕ್ತಿಯನ್ನು ಪ್ರದರ್ಶಿಸುವುದಕ್ಕಾಗಿ ಆಡುತ್ತಿದ್ದ ಆಟಗಳು, ಈ ಆಟಗಳಿಗಾಗಿ ಬಳಸುತ್ತಿದ್ದ ಆಟಿಕೆಗಳು (ಪರಿಕರಗಳು) ಬಹುಮುಖ್ಯ ಪಾತ್ರ ವಹಿಸುತ್ತವೆ ಎಂಬುವನ್ನು ಮರೆಯಲಾಗದು. ಮನುಷ್ಯ ತನ್ನ ಬಾಲ್ಯವಸ್ಥೆಯಿಂದ ಬದುಕಿನ ವಿವಿಧ ಹಂತಗಳಲ್ಲಿ ತನ್ನ ದೈಹಿಕ ಮತ್ತು ಮಾನಸಿಕ ಆಸಕ್ತಿ, ಶಕ್ತಿಗಳಿಗನುಣವಾಗಿ ವೈವಿಧ್ಯಮಯ ಆಟ ಹಾಗೂ ಕ್ರೀಡೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿರುತ್ತಾನೆ. ಹೀಗಾಗಿ ಪ್ರತಿಯೊಂದು ಸಂಸ್ಕೃತಿಯಲ್ಲಿಯೂ ಆ ನೆಲದ ಪರಿಸರಕ್ಕನುಗುಣವಾದ ವಿವಿಧ ಬಗೆಯ ಆಟಗಳು ಇದ್ದೇ ಇರುತ್ತವೆ.ಸಮುದಾಯದ ಪಾರಂಪರಿಕ ಜ್ಞಾನ ಕಿರಿಯ ತಲೆಮಾರಿಗೆ ಹಸ್ತಾಂತರವಾವುದಕ್ಕೆ ಪೂರಕವಾದ ಪರಿಕರಗಳನ್ನು ಜನಪದರು ನಿರ್ಮಿಸಿಕೊಂಡಿದ್ದಾರೆ. ಅವರ ಜಾಣ್ಮೆಗೆ ಉದಾಹರಣೆಗಾಗಿ ಗ್ರಾಮೀಣ ಮಕ್ಕಳೂ ನಲಿಯುತ್ತ ಆಟವಾಡುತ್ತ ಕಲಿತುಕೊಳ್ಳುವುದಕ್ಕೆ ಸೂಕ್ತವಾದ ಮತ್ತು ಅವರ ಮನಕ್ಕೆ ಮುದವನ್ನೂ ಆಸಕ್ತಿಯನ್ನೂ ತರಬಲ್ಲ, ಅನೇಕ ಆಟಿಕೆಗಳಿವೆ. ಇವು ಕ್ಷಿಪ್ರಗತಿಯಲ್ಲಿ ಮಕ್ಕಳ ಬೌದ್ಧಿಕ ವಿಕಾಸವನ್ನು ಮಾಡುವಂಥವು ಈ ವಿಭಾಗದಲ್ಲಿ ಅಂತಹ ವಸ್ತುಗಳನ್ನು ಪರಿಚಯಿಸಲು ಆರಂಭಿಸಿದ್ದೇನೆ. ಬೀಸುವ ಕಲ್ಲು, ಮೊರ, ಬುಟ್ಟಿ, ಗೊಂಬೆಗಳು ಮುಂತಾದವುಗಳ ಮೂಲಕ ಆ ಮಕ್ಕಳಿಗೆ ಗ್ರಾಮೀಣ ಬದುಕಿನ ಸೊಗಡನ್ನುಣಿಸಿ ಮುಂದಿನ ದಿನಗಳಿಗೆ ಅವರನ್ನು ಅಣಿಮಾಡುವ ಕೆಲಸವನ್ನು ಜನಪದರು ಕೌಶಲ ಪೂರ್ಣವಾಗಿ ನಿರ್ವಹಿಸುತ್ತಾರೆ ಎಂಬುವನ್ನು ಮಂಡ್ಯ ಜಿಲ್ಲೆಯ ವಿವಿಧ ಜನಪದೀಯ ಆಟಗಳ ವಿಶೇಷತೆಗಳನ್ನು ಗುರುತಿಸುವ ಮೂಲಕ ನಿರೂಪಿಸುವ ಪ್ರಯತ್ನ ಮಾಡಲಾಗಿದೆ.

೧. ಅಳುಗುಳಿಮಣೆ ಅಥವಾ ಚೆನ್ನೆಮಣೆ



“ಜನರು ತಮ್ಮ ಬಿಡುವಿನ ವೇಳೆಯಲ್ಲಿ ಬೇಸರ ಕಳೆಯಲು ಆಡುವಂತಹ ಆಟದ ಒಂದು ಪರಿಕರ. ಹರಳು + ಗುಳಿ+ ಮಣೆ = ಈ ಮೂರು ಪ್ರಮುಖವಾಗಿವೆ. ಹೆಚ್ಚಾಗಿ ಹೆಣ್ಣು ಮಕ್ಕಳು ಆಡುವ ಒಳಾಂಗಣ ಆಟವಾಗಿದೆ”.[೧] ಚಿಕ್ಕ ವಯಸ್ಸಿನವರಿಂದ ದೊಡ್ಡ ವಯಸ್ಸಿನವರೆಗೂ ಹೆಣ್ಣು ಗಂಡು ಎಂಬ ಭೇದ ಭಾವವಿಲ್ಲದೆ ಈ ಆಟವನ್ನು ಆಡುತ್ತಾರೆ. ಈ ಪರಿಕರವು ಸುಮಾರು ಅರ್ಧ ಅಡಿ ಅಗಲ ಎರಡು ಅಡಿ ಉದ್ದವಿರುತ್ತದೆ. ಈ ಮಣೆಯಲ್ಲಿ ಏಳು ಗುಳಿಗಳುಳ್ಳ ಎರಡು ಸಾಲುಗಳಿವೆ. ಈ ಆಟಕ್ಕೆ ಕವಡೆ, ಮಂಜೊಟ್ಟಿ ಬೀಜ, ಹುಣಸೆ ಬೀಜ, ಮುಂತಾದವುಗಳನ್ನು ಬಳಸುತ್ತಾರೆ. ಈ ಆಟಕ್ಕೆ ಸಂಬಂಧಿಸಿದಂತೆ ಕೆಲವು ಜನಪದ ಕತೆಗಳಿವೆ.



ಜನಪದರು ತಮ್ಮ ಮನೆಯಲ್ಲಿ ಕುಳಿತು ಬಿಡುವಿದ್ದಾಗ (ಸಾಮಾನ್ಯವಾಗಿ ಮಳೆಗಾಲದಲ್ಲಿ) ಇದನ್ನು ಆಡುವ ಕ್ರಮ ಹೆಚ್ಚು ರೂಢಿಯಲ್ಲಿದೆ. ಸಾಗುವಾನಿ, ಹಲಸು ಮುಂತಾದ ಮರದಿಂದ ತಯಾರಿಸುತ್ತಾರೆ. ಈ ಆಟವನ್ನು ಕೆಲವು ತಿಂಗಳಲ್ಲಷ್ಟೆ ಆಡಬೇಕೆಂಬ ನಿಯಮವಿದೆ. ಉಳಿದ ತಿಂಗಳುಗಳಲ್ಲಿ ಆಡಬಾರದೆಂಬ ನಿಷೇಧ ತುಳುನಾಡಿನಲ್ಲಿ ಮಾತ್ರವಿದೆ.

೨. ಆನೆಗೊಂಬೆ



“ಮಕ್ಕಳು ಆಟಿಕೆಗಾಗಿ ಬಳಸುವ ವಸ್ತು. ಇದು ಸುಮಾರು ನಾಲ್ಕೂವರೆ ಇಂಚು ಎತ್ತರ, ನಾಲ್ಕು ಇಂಚು ಅಗಲವಿದೆ. ಇದನ್ನು ಮಕ್ಕಳು ಆಟಿಕೆಗಾಗಿ ಬಳಸುತ್ತಾರೆ. ಸೂಕ್ಷ್ಮ ಕೆತ್ತನೆಯಿಂದ ಬಳಪದ ಕಲ್ಲಿನಲ್ಲಿ ಇದನ್ನು ಶಿಲ್ಪಿ ಕೆತ್ತಿದ್ದಾನೆ”.[೨]

೩. ಕಲ್ಬಟ್ಟ



ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳು ಅಡುಗೆ ಮಾಡುವ ಆಟಕ್ಕಾಗಿ ಇದನ್ನು ಬಳಸುತ್ತಾರೆ. ಇದು ಸುಮಾರು ೨ ಇಂಚು ವ್ಯಾಸ ಇದೆ. ಆಟ ಆಡುವ ಸಂದರ್ಭದಲ್ಲಿ ಚಟ್ನಿ, ಹಿಂಡಿ, ಮೊಸರು ಇಡುವ ಪಾತ್ರೆಯನ್ನಾಗಿ ಇದನ್ನು ಬಳಕೆ ಮಾಡುತ್ತಾರೆ. ಇದನ್ನು ಬಳಪದ ಕಲ್ಲಿನಿಂದ ತಯಾರಿಸಲಾಗಿದೆ.

೪. ದೂಡುಬಂಡಿ









ಸುಮಾರು ಒಂದು ವರ್ಷದ ಆಸುಪಾಸಿನ ಮಕ್ಕಳು ನಡಿಗೆಯನ್ನು ಕಲಿಯುವ ಹಂತದಲ್ಲಿ ನಡೆಯಲು ಆಸರೆಯಾಗಿ ಇದನ್ನು ಬಳಸುತ್ತಾರೆ. ಈ ಬಂಡಿಯಲ್ಲಿ ಐದು ಪಟ್ಟಿಗಳು ಮೂರು ಚಕ್ರಗಳು ಇವೆ. ಒಂದೂವರೆ ಅಡಿ ಉದ್ದದ ಪಟ್ಟಿಗಳು, ಒಂದೂವರೆ ಅಡಿ ಉದ್ದದ ಹಿಡಿಕೆ ಸಮೇತ ಪಟ್ಟಿ, ಮೂರು ಇಂಚು ವ್ಯಾಸ ಇರುವ ಮೂರು ಚಕ್ರಗಳನ್ನು ಒಳಗೊಂಡಿರುತ್ತದೆ. ಮಕ್ಕಳು ಈ ಬಂಡಿಯನ್ನು ಹಿಡಿದುಕೊಂಡು ಸರಾಗವಾಗಿ ನಡೆಯುವುದನ್ನು ಕಲಿಯುತ್ತಾರೆ. ಪ್ಲಾಸ್ಟಿಕ್ ಬಂಡಿ ಬಳಕೆಗೆ ಬಂದ ನಂತರ ಈ ಬಂಡಿಗಳ ಬಳಕೆ ಕಡಿಮೆಯಾಗಿದೆ.

೫. ಬೀಸೋಕಲ್ಲು



ಇದು ಸುಮಾರು ಏಳು ಇಂಚುವ್ಯಾಸದ ಆಟಿಕೆ ಬೀಸುವ ಕಲ್ಲು. ಇದರ ತಳಗಲ್ಲು ಚೌಕಾಕಾರದಲ್ಲಿದೆ. (ಬಳಕೆಯ ಕಲ್ಲಲ್ಲಿ ವೃತ್ತಾಕಾರವಿರುತ್ತದೆ). ಇದರ ವಿಶೇಷವೆಂದರೆ ಇದರ ಮೇಲಿನ ಕಲ್ಲು ಕಾಷ್ಠಚಿತ್ತಾರದಿಂದ ಆಕರ್ಷಕವಾಗಿದೆ. ದಳದಳವಾಗಿ ಸೂರ್ಯಕಾಂತಿ ಅರಳಿದಂತೆ ಮಕ್ಕಳ ಮನಸ್ಸನ್ನು ಮುದಗೊಳಿಸುವಂತಿದೆ. ನಡುಗೂಟಕ್ಕೆ ಜೋಡಣೆಯಾಗುವ ರಂಧ್ರದ ಇಬ್ಬದಿಗಳಲ್ಲಿ ಇನ್ನೆರಡು ರಂಧ್ರಗಳಿದ್ದು, ನಿಜವಾಗಿಯೂ ಕಾಳುಗಳನ್ನು ಒಳಗೆ ಎಳೆದುಕೊಳ್ಳುವಂತಿದೆ. ಹೊರ ಅಂಚಿನ ಒಂದೆಡೆ ಹಿಡಿಕೆಯ ಗೂಟವನ್ನು ಜೋಡಿಸುವ ರಂಧ್ರವೂ ಇದೆ. ಹಗುರವಾದ ಮರದಿಂದ ರಚಿತವಾದ ಈ ಒಟ್ಟು ಬೀಸುಗಲ್ಲು ಎಳೆಯ ಪ್ರಾಯದ ಗ್ರಾಮೀಣ ಕನ್ಯೆಯರಿಗೆ ಮುದನೀಡುವಂತೆ ನಿರ್ಮಾಣವಾಗಿದೆ.

ಸರಳರೀತಿಯಲ್ಲೂ ಇಂಥ ಬೀಸುಗಲ್ಲುಗಳು ರಚನೆಯಾಗುತ್ತವೆ. ಎಲ್ಲ ಆಟಿಕೆ ಬೀಸುಕಲ್ಲುಗಳಲ್ಲೂ ತಳಗಲ್ಲು ಚೌಕಾಕಾರವಾಗಿರುತ್ತದೆ. ನಡುಗೂಟವೂ ಹಿಡಿಗೂಟದ ರಂಧ್ರವೂ ಇದ್ದೇ ಇರುತ್ತವೆ. ಮೇಲಿನ ಭಾಗ ಸರಳವಾಗಿ ವೃತ್ತಾಕಾರದ ಹಲಗೆಯಷ್ಟೇ ಆಗಿರುವುದೂ ಇದೆ. ಆಟಿಗೆ ಬೀಸುವ ಕಲ್ಲುಗಳೆಲ್ಲ ಮರದಿಂದಲೇ ರಚಿತವಾಗಿವೆ ಹೊರತು ಕಲ್ಲಿನಿಂದಲ್ಲ ಎನ್ನುವುದು ಗಮನಾರ್ಹ. ಚಿಕ್ಕಂದಿನಲ್ಲೇಮಕ್ಕಳನ್ನು ಮುಂದಿನ ದಿನಗಳ ಬದುಕಿಗೆ ಅಣಿಗೊಳಿಸುವ ಸಿದ್ಧತೆ ಎಂಬ ನೆಲೆಯಲ್ಲಿ ಆಟಿಕೆಯ ಸಾಮಗ್ರಿಗಳಾಗಿ ಗೊಂಬೆ, ತತ್ರಾಣಿ, ಮೊರ, ಬುಟ್ಟಿ, ಬೀಸುಗಲ್ಲು ಮುಂತಾದವುಕ್ಕೆ ತುಂಬಾ ಸಾಂಸ್ಕೃತಿಕ ಮಹತ್ವವಿದೆ.



೬. ಬುಗುರಿ



ಚಿಕ್ಕಮಕ್ಕಳಿಂದ ಹಿಡಿದು ಪ್ರಾಯದ ಮಕ್ಕಳವರೆಗೂ ಆಡುವಂತಹ ಒಂದು ಗ್ರಾಮೀಣ ಆಟವೆಂದರೆ ಬುಗುರಿ. ಗ್ರಾಮೀಣ ಪ್ರದೇಶಗಳಲ್ಲಿ ಈ ಆಟವು ಹೆಚ್ಚಾಗಿ ಕಂಡುಬರುತ್ತದೆ. ಸುಮಾರು ಮೂರು ಇಂಚಿನಿಂದ ಐದು ಇಂಚು ಎತ್ತರದ ಬುಗುರಿಗಳಿರುತ್ತವೆ. ಬುಗುರಿಯು ಮಧ್ಯದವರೆಗೆ ಶಂಖದ ಆಕಾರದಲ್ಲಿರುತ್ತದೆ. ತಳವು ಮೊಳೆಯ ಅಗ್ರಭಾಗದಿಂದ ಕೂಡಿದ್ದು, ಮೇಲೇರಿದಂತೆ ದೊಡ್ಡದಾಗುತ್ತಾ ಹೋಗುತ್ತದೆ. ಬುಡದಿಂದಲೇ ಆರಂಭಿಸಿ ಮೇಲಿನವರೆಗೂ ಬುಗುರಿಯ ಸುತ್ತಲೂ ಅಡ್ಡಕ್ಕೆ ಗೆರೆಗಳನ್ನು ಕೊರೆದಿರುತ್ತಾರೆ. ಅವುಗಳ ಮೇಲೆಯೇ ದಾರವನ್ನು ಸುತ್ತಿ ವಿಶಿಷ್ಟ ಕೌಶಲ್ಯದಿಂದ ಬುಗರಿಯನ್ನು ಜೋರಾಗಿ ಬೀಸುತ್ತಾರೆ. ಬುಗುರಿಯು ಹೀಗೆ ಬೀಸಿದ ರಭಸಕ್ಕೆ ತುಂಬಾ ಹೊತ್ತು ನೆಲದ ಮೇಲೆ ತಿರುಗುತ್ತದೆ. ಎದುರಾಳಿಯ ಬುಗುರಿಯ ಮೇಲೆಯೇ ಹೀಗೆ ಹೊಡೆದು ಅದನ್ನು ಕೆಡವುವಂಥ ಆಟಗಳು ಸಮರಕಲೆಯ ಮೂಲ ಪಾಠದಂತೆ ಕಂಡುಬರುತ್ತವೆ.

೭. ಬುಟ್ಟಿ



ಗ್ರಾಮೀಣ ಪ್ರದೇಶಗಳಲ್ಲಿ ಚಿಕ್ಕ ಮಕ್ಕಳು ಆಟ ಆಡುವ ಚಿಕ್ಕ ಬುಟ್ಟಿ. ಇದು ಸುಮಾರು ಮೂರು ಇಂಚು ಎತ್ತರವಾಗಿದೆ. ಇದರ ತಳಭಾಗವು ಎರಡು ಇಂಚು ಇದ್ದು ಸಮತಟ್ಟಾಗಿರುತ್ತದೆ. ಇದರ ಮೇಲ್ಭಾಗವು ಐದು ಇಂಚು ವ್ಯಾಸವಿರುತ್ತದೆ. ಈ ಬುಟ್ಟಿಯನ್ನು ಬಿದಿರಿನ ಸಣ್ಣ ಸಣ್ಣ ಕಡ್ಡಿಗಳಿಂದ ಹೆಣೆದು ಗೇರೆಣ್ಣೆ ಹಚ್ಚುತ್ತಾರೆ. ಚಿಕ್ಕ ಮಕ್ಕಳು ಆಟ ಆಡುವ ಸಂದರ್ಭದಲ್ಲಿ ಮಣ್ಣಿನಲ್ಲಿ ಮನೆಕಟ್ಟಿಕೊಂಡು ಈ ಬುಟ್ಟಿಯಲ್ಲಿ ಮಣ್ಣು ಕಲ್ಲು, ಹುಲ್ಲು, ಸೊಪ್ಪು ತುಂಬಿಕೊಂಡು ಆಟವನ್ನು ಆಡುತ್ತಾರೆ. ಬದುಕಿನ ಮೂಲಪಾಠಗಳನ್ನು ಮಕ್ಕಳು ಇಂಥ ಆಟಗಳಿಂದ ಕಲಿಯಲು ಅವಕಾಶವಾಗುತ್ತಿತ್ತು. ಇತ್ತೀಚೆಗೆ ಆಟದ ಪ್ಲಾಸ್ಟಿಕ್ ವಸ್ತುಗಳು ಬಂದ ಮೇಲೆ ಇಂಥ ವಸ್ತುಗಳು ಕಣ್ಮರೆಯಾಗುತ್ತಿವೆ.






೮. ಮಂಕರಿ ಅಥವಾ ಮುಟ್ಲ



ಇದು ಒಂದು ಪುಟ್ಟ ಮೊರವಾಗಿದ್ದು ಮಕ್ಕಳಿಗೆ ಆಟಿಕೆಯಾಗಿಯೂ ತರಬೇತಿ ಸಾಧನವಾಗಿಯೂ ಬಳಕೆಯಾಗುತ್ತದೆ. ಇದನ್ನು ಸ್ಥಳೀಯರು ಮಂಕರಿ ಎಂದು ಕರೆಯುತ್ತಾರೆ. ಮಕ್ಕಳ ವಯಸ್ಸು ಗಾತ್ರಗಳಿಗನುಗುಣವಾಗಿ ಇದರ ಗಾತ್ರದಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳಿರುತ್ತವೆ. ಇದನ್ನು ಪುಟ್ಟ ಹುಡುಗಿಯರು ಎತ್ತಿಕೊಂಡು ಚಪ್ಪರಿಸುವ, ಕೇರುವ ಕೆಲಸವನ್ನು ಆಟವಾಡುತ್ತಾ ಆಡುತ್ತ ಕಲಿತು ಬಿಡುತ್ತಾರೆ. ಇದನ್ನು ಬಿದಿರು ಬೆತ್ತಗಳ ಸೀಳುಗಳಿಂದ ತಯಾರಿಸಿ ಅದಕ್ಕೆ ಗೇರೆಣ್ಣೆಯನ್ನು ಲೇಪಿಸಲಾಗುತ್ತದೆ. ಇದುಸುಮಾರು ಆರು ಇಂಚಿನಿಂದ ಎಂಟು ಇಂಚುಗಳ ತನಕ ಉದ್ದಗಲವುಳ್ಳದ್ದಾಗಿರುತ್ತದೆ.

ಇದು ಕೇವಲ ಮಕ್ಕಳ ಆಟಿಕೆಯಾಗಿ ಮಾತ್ರವಲ್ಲದೆ ದೇವರಿಗೆ ನೈವೇದ್ಯವನ್ನು ಇಡಲು ಮತ್ತು ದೇವರನ್ನು ಉದ್ವಸನ ಮಾಡುವಾಗ (ಕಳುಹಿಸಿಕೊಡುವುದು) ನೈವೇದ್ಯ, ಬಳೆ, ತಾಂಬೂಲ, ಕುಡಿಕೆ ಇತ್ಯಾದಿಗಳನ್ನು ಇಟ್ಟುಕೊಳ್ಳುವುದಕ್ಕೂ ಬಳಕೆಯಾಗುತ್ತದೆ. ಮುಟ್ಲವು ಆಟಿಕೆಯಾಗಿ ಬಳಕೆಯಾಗುವ ಸಂದರ್ಭಗಳಾಗಲಿ ಈ ಆಚರಣೆಯಾಗಲಿ ಹಳ್ಳಿಗಳಲ್ಲಿ ಇತ್ತೀಚೆಗೆ ತೀರ ವಿರಳವಾಗಿವೆ.

೯. ಚೌಕಾಬಾರ



ಚೌಕಾಕಾರದ ಆಕೃತಿಯಲ್ಲಿ ಇರುವ ರಚನೆಯಲ್ಲಿ ಗುರುತಿರುವ ಭಾಗವನ್ನು ಘಟ್ಟವೆನ್ನುತ್ತಾರೆ. ಅದರಲ್ಲಿ ೪ ಕಾಯಿಗಳನ್ನು ಇಡಬೇಕು. ಪ್ರತಿಯೊಬ್ಬರು ಬೇರೆ ಬೇರೆ ರೀತಿಯ ಕಾಯಿಗಳನ್ನು ಇಡಬೇಕು.





ಕವಡೆ ಅಥವಾ ಹುಣಸೆ ಬೀಜವನ್ನು ಕೈ ಮೂಲಕ ನೆಲದ ಮೇಲೆ ಹಾಕುವುದು ಅಥವಾ ಬಟ್ಟಲಲ್ಲಿ ಕುಲುಕಿ ಹಾಕುವುದು. ಅದರಲ್ಲಿ ಬಿದ್ದ ಸಂಖ್ಯೆಯಂತೆ ಘಟ್ಟದಿಂದ ಕಾಯಿಗಳನ್ನು ಮುಂದಕ್ಕೆ ನಡೆಸುವುದು. ಹೀಗೆ ನಡೆಸುವಾಗ ಎದುರಿಗೆ ಬೇರೆಯವರ ಕಾಯಿ ಸಿಕ್ಕರೆ ಹೊಡೆಯುವುದು. ಹೀಗೆ ಹೊಡಿಸಿಕೊಂಡ ಕಾಯಿ ಅಲ್ಲಿಂದ ತಮ್ಮ ಮನೆಯ ಘಟ್ಟ ಸೇರುತ್ತದೆ. ಪುನ: ಅದು ಅಲ್ಲಿಂದ ಪ್ರಾರಂಭಿಸಬೇಕು. ಕಾಯಿ ಹೀಗೆ ಎಲ್ಲ ಚೌಕಗಳನ್ನು ದಾಟುತ್ತಾ ಒಳ ಚೌಕದೊಳಗೆ ಸಾಗಬೇಕು ಕಾಯಿ ಒಡೆದಿದ್ದರೆ ಮಾತ್ರ ಒಳ ಪ್ರವೇಶ ಇಲ್ಲದಿದ್ದರೆ ಹೊರ ಚೌಕವನ್ನು ಕಾಯಿ ಒಡೆಯುವವರೆಗೂ ಸುತ್ತಾ ಕಾಯಬೇಕು. ಒಳಚೌಕದ ಸುತ್ತಿನ ಮಧ್ಯ ಭಾಗವನ್ನು ಸೇರಿದರೆ ಕಾಯಿ ಹಣ್ಣಾದಂತೆ ಎಲ್ಲಾ ಕಾಯಿಯನ್ನು ಯಾರು ಬೇಗ ಹಣ್ಣು ಮಾಡುತ್ತಾರೆ ಅವರು ಗೆದ್ದಂತೆ ಇದೇ ರೀತಿ ಕ್ರಮದಂತೆ ೭ ಮನೆ, ೯ ಮನೆ ಸಾಧ್ಯವಿದ್ದರೆ ೧೧ ಮನೆಯ ಆಟವನ್ನು ಆಡಬಹುದು.

೧೦. ಚಿನ್ನಿದಾಂಡು



ಚಿನ್ನಿದಾಂಡು ಅಥವಾ ಗಿಲ್ಲಿದಾಂಡು ಅಥವಾ ಹಾಚಿಗೆಂಡೆ ಅಥವಾ ಚಿನ್ನಿಕೋಲು ಒಂದು ಜನಪ್ರಿಯ ಗ್ರಾಮೀಣ ಆಟ. ಇದರಲ್ಲಿ ಮರದ ಕೋಲಿನಿಂದ ಮಾಡಿದ ಒಂದು ಚಿಕ್ಕ ಚಿನ್ನಿ ಅಥವಾಗಿಲ್ಲಿ ಅಥವಾ ಹಾಚಿ ಮತ್ತು ಸ್ವಲ್ಪ ದೊಡ್ಡದಾದ ಒಂದು ದಾಂಡು ಅಥವಾ ಕೋಲು ಇವುಗಳ ಸಹಾಯದಿಂದ ಆಡಲಾಗುತ್ತದೆ. ಇದನ್ನು ವೈಯಕ್ತಿಕವಾಗಿ ಅಥವಾ ತಂಡವಾಗಿ ಆಡಬಹುದು. ಇದನ್ನು ಆಡಲು ಸಾಕಷ್ಟು ಜಾಗ ಬೇಕು. ಸುಮಾರು ಒಂದು ಗೇಣು ಉದ್ದದ ನೆಲದ ಮೇಲೆ ಕೊರೆದ ಒಂದು ಗುಂಡಿ ಇರಬೇಕು. ಗುಂಡಿಯಷ್ಟೇ ಉದ್ದವಾದ ಮರದ ಕೋಲಿನಿಂದ ಮಾಡಿದ ಚಿನ್ನಿ ಅಥವಾ ಗಿಲ್ಲಿಯ ಎರಡು ಬದಿ ಚೂಪಾಗಿರಬೇಕು ಚಿನ್ನಿಗಿಂತ ಕನಿಷ್ಠ ಎರಡೂವರೆ – ಮೂರು ಪಟ್ಟು ಉದ್ದವಾದ ಮರದ ಕೋಲಿನಿಂದ ಮಾಡಿದ ನೇರವಾದ ದಾಂಡು ಈ ಆಟಕ್ಕೆ ಬೇಕು. ಆಟಗಾರನು ಗುಂಡಿಯಮೇಲೆ ಅಡ್ಡವಾಗಿ ಚಿನ್ನಿಯನ್ನು ಇಡುತ್ತಾನೆ. ಎದುರು ತಂಡದ ಆಟಗಾರರು ಸನ್ನದ್ಧರಾಗಿದ್ದಾರೆಂದು ತಿಳಿಯಲು 'ಹೋ' ಎಂದು ಕೂಗಿದ ನಂತರ ಚಿನ್ನಿಯ ಕೆಳಭಾಗದಲ್ಲಿ ದಾಂಡನ್ನಿಟ್ಟು ಚಿನ್ನಿಯನ್ನು ದೂರ ಚಿಮ್ಮುವಂತೆ ಹೊಡೆಯುತ್ತಾನೆ. ಎದುರು ಆಟಗಾರನು



ಅದು ನೆಲಕ್ಕೆ ಬೀಳುವಷ್ಟರಲ್ಲಿ ಹಿಡಿಯಬಹುದು ಹಿಡಿದರೆ ಆಟಗಾರ ತನ್ನ ಪಾಳಿ ಕಳೆದು ಕೊಂಡಂತೆ ಅದನ್ನು ಎದುರು ಆಟಗಾರ ಹಿಡಿಯದಿದ್ದರೆ ದಾಂಡನ್ನು ಗುಂಡಿಯಿಂದ ಒಂದು ದಾಂಡಿನಷ್ಟು ದೂರ ಹಿಂದೆ ಇಡಬೇಕು. ಆಟಗಾರನು ದಾಂಡಿನಿಂದ ಚಿನ್ನಿಯನ್ನು ಗಾಳಿಯಲ್ಲಿರುವಾಗ ಎಷ್ಟು ಸಲ ಬೇಕಾದರೂ ಹೊಡೆಯಬಹುದು. ಚಿನ್ನಿಯನ್ನು ಎರಡಕ್ಕಿಂತ ಹೆಚ್ಚು ಬಾರಿ ಹೊಡದರೆ ಗಿಲ್ಲಿ ಎಂದು ಕರೆಯಲಾಗುತ್ತದೆ. ಚಿನ್ನಿ ಬಿದ್ದ ಸ್ಥಳದಿಂದ ಗುಂಡಿಯವರೆಗಿನ ದೂರವನ್ನು ಆಟಗಾರನೇ ಊಹಿಸಬೇಕು. ಗಿಲ್ಲಿ ಆಗಿದ್ದರೆ ಚಿನ್ನಿಯಿಂದ ಅಳೆಯಬೇಕು ಎಷ್ಟು ಬಾರಿ ಗಿಲ್ಲಿಯಾಗಿದೆಯೋ ಅಷ್ಟರಿಂದ ಅಂಕಗಳನ್ನು ಗುಣಿಸಬೇಕು. ಗಿಲ್ಲಿ ಆಗಿಲ್ಲದಿದ್ದರೆ ದಾಂಡಿನಿಂದ ಅಳೆಯುವುದು ಪದ್ಧತಿ ಊಹಿಸಿದ್ದಕ್ಕಿಂತ ಕಡಿಮೆ ದೂರವಿದ್ದರೆ ಆಟಗಾರ ಪಾಳಿ ಕಳೆದು ಕೊಂಡಂತೆ ಸರಿಯಾಗಿ ಊಹಿಸಿದರೆ ಆಟಗಾರ ಅಥವಾ ಅವನ ತಂಡಕ್ಕೆ ಅಂಕಗಳು ದೊರೆತಂತೆ ಮೊದಲೇ ನಿರ್ಧರಿಸಿದ ಅಂಕವನ್ನು ತಲುಪುವರೆಗೆ ಅಥವಾ ಯಾರು/ಯಾವ ತಂಡ ಹೆಚ್ಚು ಅಂಕಗಳಿಸಿರುತ್ತದೆಯೋ ಆ ಆಟಗಾರ ಅಥವಾ ತಂಡ ಗೆದ್ದಂತೆ.

ಅಡಿ ಟಿಪ್ಪಣಿಗಳು

೧. ನಾಯಕ ಮತ್ತು ರಾಮೇಗೌಡ ಡಿ.ಬಿ.,ಕನ್ನಡ ಜಾನಪದ ನಿಘಂಟು ಪದ ಸಂಸ್ಕೃತಿ ಕೋಶ, ಸಂಪುಟ–೧, ಕನ್ನಡ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ೨೦೧೫, ಪು –೩೫೯

೨. ರಮೇಶ ಸಾ. ಬಿ.,ಜಾನಪದ ವಸ್ತುಕೋಶ, ಕನ್ನಡ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ,೨೦೧೩, ಪು –೧೦೦

೨.೪. ಕಲೆಗಳಿಗೆ ಸಂಬಂಧಿಸಿದ ಪರಿಕರಗಳು

ಜನಪದ ಬದುಕಲ್ಲಿ ಹಾಡು ಕುಣಿತಗಳದ್ದು ಸಿಂಹಪಾಲು. ಬದುಕಿನ ಕಷ್ಟಕಾರ್ಪಣ್ಯಗಳನ್ನು ಸಹ್ಯವಾಗಿಸಿಕೊಳ್ಳಲು, ಸುಖ ಸಂತೋಷಗಳನ್ನು ಇತರರಿಗೆ ಹಂಚಲು, ಕಲೆ ಮನುಷ್ಯ ಮನಸ್ಸಿಗೆ ಸೂಕ್ತ ಮಾಧ್ಯಮ. ಈ ವಿಭಾಗದಲ್ಲಿ ಕೆಲವು ಕಲಾ ಪರಿಕರಗಳನ್ನು ಪರಿಚಯ ಮಾಡಿಕೊಳ್ಳೋಣ. ಇದರಲ್ಲಿ ಧಾರ್ಮಿಕ ಕಲಾಪರಿಕರಗಳು, ಮನೋರಂಜನೆ ಕಲಾಪರಿಕರಗಳು, ಮತ್ತು ಉಭಯೋದ್ದೇಶಿ ಪರಿಕರಗಳು ಒಳಗೊಳ್ಳುತ್ತವೆ. ದೃಶ್ಯ ಮತ್ತು ಶ್ರವ್ಯಕಲೆಗಳ ಪರಿಕರಗಳು ಜನಪದರ ಕಲಾಸಕ್ತಿಯದ್ಯೋತಕಗಳಾಗಿ ತಮ್ಮದೇ ವೈಶಿಷ್ಟಗಳನ್ನುಳ್ಳವು. ಈ ವಿಭಾಗದಲ್ಲಿ ಕೆಲವು ವಸ್ತುಗಳು ಮಾತ್ರ ಈ ಪ್ರಾಥಮಿಕ ಹಂತದಲ್ಲಿ ಅಡಕವಾಗಿವೆ. ಜನಪದರ ಪಾಲಿಗೆ ತಮ್ಮ ಉಸಿರಾಟದಷ್ಟೆ ಪ್ರಮುಖವಾದದ್ದು ಕಲೆ. ಈ ಬಗೆಯ ಜನಪದ ಕಲೆಗಳು ನಿರ್ದಿಷ್ಟ ಪ್ರಾಕೃತಿಕ ಸ್ಥಳೀಯ ಪರಿಸ್ಥಿತಿಗಳಿಂದಾಗಿ ಸೃಷ್ಟಿ ಕೊಂಡಿವೆ ಎನ್ನಬಹುದು. ಈ ಕಲೆಗೂ ಮನರಂಜನೆಗೂ ಅವಿನಾಭಾವ ಸಂಬಂಧವಿದೆ. ಜನಪದೀಯರ ಧಾರ್ಮಿಕ ಆಚರಣೆ, ಮನರಂಜನೆ, ಪ್ರತಿಭೆಯ ಪ್ರದರ್ಶನಕ್ಕಾಗಿ ವಿವಿಧ ಬಗೆಯ ಕಲಾತ್ಮಕ ವಸ್ತುಗಳ ತಯಾರಿಕೆ ಮತ್ತು ಬಳಕೆ ಮಾಡಲಾಗುತ್ತಿತ್ತು. ಇವುಗಳನ್ನು ಉಪಯೋಗಿಸಿಕೊಂಡು ಮಂಡ್ಯ ಜಿಲ್ಲೆಯ ಜನಸಾಮಾನ್ಯರು ತಮ್ಮ ಸಂಸ್ಕೃತಿಯ ಮಹತ್ವವನ್ನು ಸಾರುವ ಪ್ರಯತ್ನ ಮಾಡಿರುವುದನ್ನು ಗುರುತಿಸುವ ಜೊತೆಗೆ ಇವು ಸಂವಹನ ಮಾಧ್ಯಮವೂ ಆಗಿದ್ದವೆಂಬುದನ್ನು ನಿರೂಪಿಸುವ ಪ್ರಯತ್ನ ಇಲ್ಲಿದೆ.

೧. ಏಕತಾರಿ/ತಂಬೂರಿ




ಜನಪದ ಸಂಗೀತ ಸಾಧನಗಳಲ್ಲಿ ಒಂದು. ಇದು ಸುಮಾರು ನಾಲ್ಕರಿಂದ ಐದು ಅಡಿ ಉದ್ದವಿದೆ. ಇದರ ಕೆಳಭಾಗದಲ್ಲಿ ಬಿದರಿನ ಕಡ್ಡಿಗಳನ್ನು ಕುಂಬಳಕಾಯಿಯ ಆಕಾರದಲ್ಲಿ ಹೆಣೆದಿದೆ. ಇದರ ಅಲಂಕಾರಕ್ಕಾಗಿ ವಿವಿಧ ಬಣ್ಣಗಳನ್ನು ಲೇಪಿಸಿದೆ. ಇದಕ್ಕೆ ಸುಮಾರು ನಾಲ್ಕರಿಂದ ಐದು ಅಡಿ ಉದ್ದದ ಬಿದರಿನ ಕೋಲನ್ನು ಜೋಡಿಸಿ ಅದರ ಕೊನೆಯ ತುದಿಯಿಂದ ಸ್ವಲ್ಪ ಕೆಳಭಾಗದಲ್ಲಿ ಬೆಣೆ ಜೋಡಿಸಿದ್ದಕ್ಕೆ ಬಿರುಡೆಯಿಂದ ಹೊರಟ ತಂತಿಯನ್ನು ಬಿಗಿಯಲಾಗಿದೆ. ಬುಟ್ಟಿಯ ಮೇಲೆ ಹಾದು ಹೋದ ತಂತಿಯ ಬುಟ್ಟಿಗೆ ತಾಗದಂತೆ ನಾಣ್ಯ ಅಥವಾ ಗಡಿಗೆಯ ತುಂಡನ್ನು ಮೇಣದ ಸಹಾಯದಿಂದ ಅಂಟಿಸಿ ಇಟ್ಟಿದ್ದಾರೆ. ಆಗ ಅದರ ನಾದ ಸ್ಪಷ್ಟವಾಗಿ ಹೊರಹೊಮ್ಮುತ್ತದೆ. ಈ ತರಹದ ಏಕತಾರಿ ಅಪೂರ್ವವಾಗಿದೆ. ದಾಸರ



ಪದಗಳನ್ನು ಹಾಡಲು ಏಕತಾರಿಗಳನ್ನು ಬಳಸುತ್ತಾರೆ. ಕೆಲವು ಕಡೆ ಭಜನೆ ಮಾಡುವ ಸಂದರ್ಭಗಳಲ್ಲಿ ಕೂಡ ಅವನ್ನು ಉಪಯೋಗಿಸುತ್ತಾರೆ. ಏಕತಾರಿಯು ತಂತಿವಾದ್ಯವಾಗಿದೆ.

೨. ಕೋಲಾಟದ ಕೋಲುಗಳು



ಕೋಲಾಟದಲ್ಲಿ ಬಳಸುವ ವಸ್ತುಗಳು . ಇವು ಸುಮಾರು ಹದಿನಾಲ್ಕು ಇಂಚು ಉದ್ದ, ಮೂರು ಇಂಚು ಸುತ್ತಳತೆ ಹೊಂದಿವೆ. ಜನಪದ ಕಲೆಯಾದ ಕೋಲಾಟದಲ್ಲಿ ಒಬ್ಬರು ಮತ್ತೊಬ್ಬರೊಂದಿಗೆ ಕೋಲು ಹಾಕಲು ಬಳಸುವ ಈ ಕೋಲುಗಳ ನಾದವು ಜೋರಾಗಿಯೂ ಹಿತಕರವಾಗಿಯೂ ಇರುತ್ತದೆ. ಇವುಗಳನ್ನು ಅತ್ತಿಮರದಿಂದ ಕಲಾವಿದರೇ ತಯಾರಿಸಿಕೊಳ್ಳುತ್ತಾರೆ. ಕೋಲು ಕತ್ತರಿಸುವಾಗ ಹಾಗೂ ಆಟ ಮುಗಿದಾಗ ವಿಶಿಷ್ಟ ಬಗೆಯ ವಿಧಿ-ನಿಷೇಧ, ಪದ್ಧತಿ ಆಚರಣೆಗಳ ಚೌಕಟ್ಟಿನಲ್ಲಿ ನಡೆಯುವುದು ಗಮನಾರ್ಹ.

೩. ಗೆಜ್ಜೆಪಟ್ಟಿ



ಜನಪದ ಕಲಾವಿದರು ನೃತ್ಯ ಮಾಡುವ ಸಂದರ್ಭದಲ್ಲಿ ಬಳಕೆ ಮಾಡುವ ಸಾಮಾಗ್ರಿ. ಸುಮಾರು ಒಂದು ಅಡಿ ಉದ್ದ, ಎರಡು ಇಂಚು ಅಗಲದ ಬಟ್ಟೆಯ ಪಟ್ಟಿಗೆ, ಎರಡು ಅಥವಾ ಮೂರು ಸಾಲುಗಳಲ್ಲಿ ಸಣ್ಣ ಸಣ್ಣ ಗೆಜ್ಜೆಗಳನ್ನು ಪೋಣಿಸುತ್ತಾರೆ. ಯಕ್ಷಗಾನ ದೊಡ್ಡಾಟ, ವೀರಭದ್ರನ ಕುಣಿತ, ಪೂಜಾಕುಣಿತ, ಕೋಲಾಟ ಮುಂತಾದ ಕುಣಿತಗಳನ್ನು ಮಾಡುವಾಗ ಈ ಗೆಜ್ಜೆಸರವನ್ನು ಬಳಕೆ ಮಾಡುತ್ತಾರೆ. ಗೆಜ್ಜೆಗಳನ್ನು ಕಂಚಿನಿಂದ ತಯಾರು ಮಾಡುತ್ತಾರೆ. ಜನಪದ ಕಲಾವಿದರು ಈ ಗೆಜ್ಜೆ ಸರಕ್ಕೆ ವಿಶೇಷವಾದ ಗೌರವವನ್ನು ಕೊಡುತ್ತಾರೆ.


೪. ಡೊಳ್ಳಿನ ಪಡಗ



ಕರ್ನಾಟಕ ಜನಪದ ವಾದ್ಯಗಳಲ್ಲಿ ಹೆಚ್ಚು ಪ್ರಚಲಿತವಾಗಿರುವ ಒಂದು ವಾದ್ಯಡೊಳ್ಳು. ಇದು ಮೂಲತ: ಒಂದು ಧಾರ್ಮಿಕ ವಾದ್ಯ. ಆತೋದ್ಯವಾದ್ಯ ವಿಭಾಗಕ್ಕೆ ಸೇರಿದ್ದು. ಹಾಲುಮತ ಸಮುದಾಯದವರು ಇದನ್ನು ತಮ್ಮ ಕುಲವಾದ್ಯವೆಂದು ಪರಿಗಣಿಸುತ್ತಾರೆ. ಜೀರಪ್ಪ, ಮಾಲಿಂಗರಾಯ,


ಮಾಯವ್ವ, ಅಮೋಘಸಿದ್ಧ, ರೇವಣಸಿದ್ಧ ಮುಂತಾದ ದೈವಗಳ ಆರಾಧನೆಯಲ್ಲಿ ಇದು ಬಳಕೆಯಾಗುತ್ತದೆ. ಗ್ರಾಮದ ಪ್ರತಿಯೊಂದು ಮಂಗಳ ಕಾರ್ಯಕ್ಕೂ ಇದು ಅತ್ಯಗತ್ಯವೆಂದು ಪರಿಗಣಿತವಾಗಿದೆ. ಸುಮಾರು ಅರ್ಧ ಅಂಗುಲ ದಪ್ಪದ ಒಂದೂವರೆ ಅಥವಾ ಎರಡು ಅಡಿ ವ್ಯಾಸದ ಮರದ ತುಂಡನ್ನು ಸಿಲಿಂಡರ್ ಆಕಾರದಲ್ಲಿ ಕೊರೆಯಲಾಗುತ್ತದೆ. ಬೇವು, ಹೊನ್ನೆ, ಮಾವು, ಹೆಬ್ಬೇವು, ಹಲಸು, ಹೆಬ್ಬಲಸು, ಶಿವನೆ ಇತ್ಯಾದಿ ಮರಗಳಿಂದ ಪಡಗಗಳನ್ನು ತಯಾರಿಸುತ್ತಾರೆ.

೫. ತಾಳ



ತಾಳವನ್ನು ಸಾಮಾನ್ಯವಾಗಿ ಭಜನೆ ಸಂದರ್ಭಗಳಲ್ಲಿ ಸಂಗೀತ ಸಾಧನವಾಗಿ ಬಳಸಲಾಗುತ್ತದೆ. ಯಕ್ಷಗಾನ, ದೊಡ್ಡಾಟಗಳ ಭಾಗವಂತರು ಕೂಡ ಇಂಥ ತಾಳಗಳನ್ನು ಬಾರಿಸುತ್ತ ಭಾಗವತಿಕೆ ಮಾಡುತ್ತಾರೆ. ಹಿತ್ತಾಳೆ ಅಥವಾ ಕಂಚಿನಿಂದ ತಯಾರಿಸಲಾಗುವ ಈ ತಾಳಗಳು ವೃತ್ತಾಕಾರದಲ್ಲಿರುತ್ತವೆ. ಮಧ್ಯದಲ್ಲಿ ರಂಧ್ರವಿರುತ್ತವೆ. ಅವುಗಳಿಗೆ ಹಗ್ಗಗಳನ್ನು ಪೋಣಿಸಿಕೊಳ್ಳುತ್ತಾರೆ. ತಾಳವೆಂದರೆ ಜೋಡಿಯಾಗಿ ಗುರುತಿಸಲಾಗುತ್ತಿದೆಯೇ ಹೊರತು ಏಕವಸ್ತುವಾಗಿ ಅಲ್ಲ. ಇವುಗಳಿಗೆ ಹಿಡಿಕೆಯಾಗಿ ಹಗ್ಗವನ್ನು ಹಾಕಲಾಗಿರುತ್ತದೆ.

೬. ಮದ್ದಲೆ ಪಡಗ



ಜಾನಪದ ವಾದ್ಯಗಳಲ್ಲಿ ತುಂಬಾ ಹೆಚ್ಚು ಬಳಕೆಯಾಗುವ ಒಂದು ಸಾಧನ ಮದ್ದಳೆ. ಇದು ಮರವನ್ನು ಕೊರೆದು ಟೊಳ್ಳಾಗಿಸುಕೊಂಡು ರಚಿಸಿಕೊಂಡ ಪಡಗ/ಕುತ್ತಿಗೆ ಎರಡು ಬದಿಗೂ ಚರ್ಮ 'ಮುಚ್ಚಿಗೆ' ಯನ್ನು ತಯಾರಿಸಿಕೊಂಡು ಮುಚ್ಚುತ್ತಾರೆ. ಮುಚ್ಚಿಗೆಯನ್ನು ಜಿಗಿಯಲು ಪರಸ್ಪರ ಚರ್ಮದ 'ಬಾರ'(ಬಿಣಿ)ಗಳನ್ನು ಉಪಯೋಗಿಸುತ್ತಾರೆ. ಸಂಗೀತ ಕಛೇರಿ, ಯಕ್ಷಗಾನ, ನೃತ್ಯ ಮುಂತಾದೆಡೆ





ಮದ್ದಲೆಯ ಬಳಕೆ ಇದೆ. ಮದ್ದಲೆ ಪದಗಾವು ಮಧ್ಯಭಾಗದಲ್ಲಿ ದೊಡ್ಡದಾಗಿರುತ್ತದೆ. ಪದಗಗಳಲ್ಲಿ ನಾನಾ ಗಾತ್ರದವುಗಳನ್ನು ಕಾಣಬಹುದು. ಸುಮಾರು ಎರಡುವರೆ ಅಡಿಯಿಂದ ಮೂರೂವರೆ ಅಡಿ ಮರಗಳಿಂದ ಇದನ್ನು ತಯಾರಿಸುತ್ತಾರೆ. ಮದ್ದಲೆಯು ದೇವವಾದ್ಯವಾಗಿದ್ದು ಆತೋದ್ಯವಾದ್ಯ ಎಂಬ ವಿಭಾಗಕ್ಕೆ ಸೇರುತ್ತದೆ.

೭. ಶಹನಾಯಿ ಅಥವಾ ಸುಂದರಿ



“ಕೊಳವೆಯಾಕಾರದಲ್ಲಿರುವ ಶಹನಾಯಿಯು ಊದುವ ವಾದ್ಯವಾಗಿದೆ. ಇದರ ತುದಿಯ ಪಟ್ಟ ಧ್ವನಿವರ್ಧಕದ ಬಾಯಿಯಾಕರದಲ್ಲಿದೆ. ಸುಮಾರು ಒಂದೂವರೆ ಅಡಿ ಉದ್ದ ಇರುವ ಶಹನಾಯಿಗೆ ಒಂದು ಇಂಚು ಅಂತರದಲ್ಲಿ ಏಳು, ಅಧಿಕ ಒಂದು ಮತ್ತು ಪಾರ್ಶ್ವದಲ್ಲಿ ಎರಡೆರಡು ಹೀಗೆ ಒಟ್ಟು ಹನ್ನೆರಡು ರಂಧ್ರಗಳಿರುತ್ತವೆ. ಊದುವ ತುದಿ ಸುಮಾರು ಅರ್ಧ ಇಂಚು ವ್ಯಾಸವಿದ್ದು ಮತ್ತೊಂದು ಕೊನೆಯ ಸುಮಾರು ಒಂದು ಇಂಚು ವ್ಯಾಸವಿದೆ”.[೧] ಶಹನಾಯಿಯು ಉತ್ಕೃಷ್ಟ ಸಂಗೀತೋಪಕರಣವಾಗಿದ್ದು ಶ್ರೇಷ್ಠ ಮರದಿಂದಷ್ಟೇ ಅದನ್ನು ತಯಾರಿಸುತ್ತಾರೆ. ದೊಡ್ಡಾಟದಲ್ಲಿ ಬಳಕೆಯಾಗುವ ಮುಖವೀಣೆಯು ಶಹನಾಯಿಯ ಸೋದರವರ್ಗದ ವಾದ್ಯ. ಮುಖವೀಣೆಯ ಪದುಗಕ್ಕೆ ‘ಒಂಥಿ’ ಎಂಬ ಹೆಸರಿನಿಂದ ಕರೆಯಲಾಗುತ್ತದೆ.

೮. ಹಲಗೆ ಅಥವಾ ತಮಟೆ



ಹಿಂದಿನ ಕಾಲದಲ್ಲಿ ಹಳ್ಳಿಗಳಲ್ಲಿ ಅಚ್ಚೆ, ಸುದ್ದಿಗಳನ್ನು ಸಾರ್ವಜನಿಕರಿಗೆ ತಿಳಿಸುವುದಕ್ಕೆ : ಹಬ್ಬ ಹರಿದಿನ, ದೇವರ ಮೆರವಣಿಗೆ, ಮದುವೆ ಮೆರವಣಿಗೆ, ಶವಸಂಸ್ಕಾರ ಸಂದರ್ಭದ ಮೆರವಣಿಗೆ ಮುಂತಾದ ಸಂದರ್ಭಗಳಲ್ಲಿ, ರಾಧಾನಾಟ ಮುಂತಾದ ಬಯಲಾಟ ಪ್ರಕಾರಗಳ ಪ್ರದರ್ಶನದ ಸಂದರ್ಭದಲ್ಲಿ ಈ ವಾದ್ಯವು ಬಳಕೆಯಾಗುತ್ತಿತ್ತು. ಇದು ಸುಮಾರು ಎರಡು ಅಡಿ ವ್ಯಾಸ ಸುಮಾರು ನಾಲ್ಕು ಇಂಚು ಎತ್ತರವಿರುತ್ತದೆ. ಮರದಕಟ್ಟು(ಈಡಿಜಿಟಜ)ಗೆ ಮೇಕೆ, ಆಡು, ಎಮ್ಮೆ ಅಥವಾ ಕರುವಿನ ಚರ್ಮವನ್ನು ಒಂದು

ಬದಿಯಲ್ಲಿ ಮುಳ್ಳಿ ಬಿಗಿಗೊಳಿಸಲಾಗುತ್ತದೆ. ಹಾಗೆ ಬಿಗಿಗೊಳಿಸಿಕೊಂಡಿರುವ ತಮಟೆಯನ್ನು ಬಿಸಿಲಲ್ಲಾಗಲಿ, ಬೆಂಕಿಯಲ್ಲಾಗಲಿ ಒಂದಿಷ್ಟು ಹದಕ್ಕೆ ಬಿಸಿಕೊಳ್ಳುವುದಕ್ಕೆ ಕಬ್ಬಿಣದ ತಂತಿಯಿಂದ ನಿರ್ಮಿಸಿದ ಬಲೆಯ ತುಂಡಿನಂಥ ಸಾಧನವನ್ನು ಮರದ ಕಟ್ಟಿಗೆಗೆ ಜೋಡಿಸಿಟ್ಟಿರುತ್ತಾರೆ. ಹಲಗೆಯನ್ನು ಒಂದು ಕೈಯಲ್ಲಿ ಗುಣಿ ಎಂಬ ಕೋಲಿನಿಂದಲೂ, ಇನ್ನೊಂದು ಕೈಯಲ್ಲಿ ತೆಳ್ಳನೆಯ ಮತ್ತು ಉದ್ದ ಕಿರಿದಾದ ಚಟಿಕೆ ಎಂಬ ಕೋಲಿನಿಂದಲೂ ಬಿಗಿಮಾಡಿಕೊಂಡರೆ ಶ್ರುತಿಗೆ ಹೊಂದಿಕೊಂಡು ಚೆನ್ನಾಗಿ ಶಬ್ದವು ಹೊರಡುತ್ತದೆ.

ಅಡಿ ಟಿಪ್ಪಣಿಗಳು

೧. ರಮೇಶ ಸಾ. ಚಿ., ಜಾನಪದ ವಸ್ತುಕೋಶ, ಕನ್ನಡ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ,೨೦೧೩, ಪು -೧೦೯

೨.೫ ವಿವಿಧ ಕಸುಬಿನ ಪರಿಕರಗಳು

ಗ್ರಾಮೀಣ ಬದುಕಿನಲ್ಲಿ ಬೇಸಾಯವನ್ನು ಅವಲಂಬಿಸಿಯೇ ಇತರ ಅನೇಕ ಕಸುಬುಗಳು ಸುತ್ತುತ್ತವೆ. ಕಮ್ಮಾರ, ಬಡಗಿ, ಕುಂಬಾರ, ನೇಕಾರ, ಚಮ್ಮಾರ ಮುಂತಾದ ವೃತ್ತಿಗಳವರು ಕೃಷಿಕರನ್ನು ಅವಲಂಬಿಸಿ ಅಥವಾ ಕೃಷಿಗೆ ಪೂರಕವಾಗಿ ಬದುಕುತ್ತಿದ್ದ ಕಾಲ ತುಂಬ ಪ್ರಾಚೀನವೇನೂ ಅಲ್ಲ. ಅಂತೆಯೇ ಬುಟ್ಟಿ-ಚಾಪೆಗಳನ್ನು ಹೆಣೆಯುವ, ಸುಣ್ಣ ಬಣ್ಣಗಳನ್ನು ಸಿದ್ಧಪಡಿಸುವ ಕೆಲಸಗಾರರು ಕೂಡ ಇದಕ್ಕೆ ಹೊರತಾಗಿಲ್ಲ. ಅಂಥವರು ಮತ್ತು ಪಶುಪಾಲನೆ, ಮೀನುಗಾರಿಕೆ ಬೇಟೆ ಮುಂತಾದವುಗಳಲ್ಲಿ ತೊಡಗಿಕೊಂಡವರು ಬಳಸುವ ಕೆಲವು ಪರಿಕರಗಳನ್ನೂ ಪರಿಚಯಿಸಲು ಈ ವಿಭಾಗದಲ್ಲಿ ತೊಡಗಿದೆ

೧. ಅಡಿಗಲ್ಲು ಅಥವಾ ಸೋರೆ ಬಡಿಯುವ ಕಲ್ಲು



ಕುಂಬಾರರು ತಿಗರಿ ಚಕ್ರದಲ್ಲಿ ಗಡಿಗೆಯನ್ನು ತಯಾರಿಸಿ ಹೊರತೆಗೆದ ನಂತರ ಅದನ್ನು ತೆಳುಮಾಡುವುದಕ್ಕಾಗಿ ಬಳಸುವ ಕಲ್ಲಿನ ಸಾಧನ. ಇದರ ಕೆಳಭಾಗ ಚಪ್ಪಟೆಯಾಗಿದ್ದು ನಯವಾಗಿದೆ. ಮೇಲ್ಭಾಗದಲ್ಲಿ ಹಿಡಿದುಕೊಳ್ಳಲು ಹಿಡಿಯನ್ನು ಹೊಂದಿದೆ. ತಿಗರಿಯಿಂದ ತೆಗೆದ ಗಡಿಗೆಯನ್ನು ತೆಳುಮಾಡುವಾಗ ಮೇಲ್ಭಾಗದಲ್ಲಿ ಸೊಳದಿಂದ ಗಡಿಗೆಯನ್ನು ಬಡಿದರೆ ಅಲ್ಲೇ ಒಳಭಾಗದಲ್ಲಿ ಎಡಗೈಯಲ್ಲಿ ಈ ಕಲ್ಲನ್ನು ಉಪಯೋಗಿಸುತ್ತಾರೆ. ಇದರ ಸ್ವರೂಪಗಳಲ್ಲಿ ವ್ಯತ್ಯಾಸ ಕಂಡು ಬರುತ್ತದೆ.

೨. ಅರ



ಇದು ಮೊಂಡಾಗಿರುವ ಹಾಗೂ ಹೊಸದಾಗಿ ತಯಾರಿಸಿರುವ ಆಯುಧಗಳನ್ನು ಚೂಪುಗೊಳಿಸುವ ಅಥವಾ ಹರಿತಗೊಳಿಸುವ ಕಬ್ಬಿಣದ ಸಲಕರಣೆ. ಸುಮಾರು ನಾಲ್ಕರಿಂದ ಐದು ಇಂಚು ಉದ್ದದ, ಉಕ್ಕಿನಿಂದ ತಯಾರಿಸಲಾದ ಅರವು ಸುತ್ತಲೂ ಒಂದು ಇಂಚು ಅಗಲವಾಗಿದ್ದು ತ್ರಿಭುಜಾಕೃತಿಯಲ್ಲಿರುತ್ತದೆ. ಇದಕ್ಕೆ ಅರ್ಧ ಅಡಿ ಉದ್ದದ ಹಿಡಿಕೆ ಇರುತ್ತದೆ. ಕೃಷಿ, ಕಮ್ಮಾರಿಕೆ ಮತ್ತು ಇತರ ವೃತ್ತಿಗಳಾದ ಸಲಕರಣೆಗಳಾದ



ಕುಡು ಗೋಲು, ಚಾಕು, ಕೊಡಲಿ, ಬಾಚಿ, ಗರಗಸ ಇತ್ಯಾದಿ ವಸ್ತುಗಳ ಅಲಗನ್ನು ಹರಿತಗೊಳಿಸಲು ಇದನ್ನು ಬಳಸಲಾಗುತ್ತದೆ. ಸಲಕರಣೆಗಳನ್ನು ಸಾಣೆ ಹಿಡಿಯುವ ಯಂತ್ರಗಳು ಬಂದಿವೆಯಾದರು ಇದರ ಬಳಕೆ ಕಡಿಮೆಯಾಗಿಲ್ಲ. ಗರಗಸದ ಹಲ್ಲುಗಳನ್ನು ಹರಿತಗೊಳಿಸಲು ಅರ ಅಗತ್ಯ.

೩. ಉಜ್ಜೊಡು




ಬಡಿಗೇರರು ಮರದ ಕೆತ್ತನೆ ಕೆಲಸ ಮಾಡುವ ಸಂದರ್ಭದಲ್ಲಿ ಬಾಚಿ ಅಥವಾ ಇತರೆ ವಸ್ತುವಿನಿಂದ ಕೆತ್ತಿದ ಮರವನ್ನು ಅಥವಾ ಹಲಗೆಯನ್ನು ನುಣುಪಾಗಿ ಕೆತ್ತಲು ಬಳಸುವ ಪರಿಕರ. ಇದರ ಗಾತ್ರ ಮತ್ತು ವಿನ್ಯಾಸಗಳಲ್ಲಿ ಹಲವು ವ್ಯತ್ಯಾಸಗಳಿರುತ್ತವೆ. ಸಾಮಾನ್ಯವಾಗಿ ಒಂದು ಅಡಿ ಉದ್ದ, ನಾಲ್ಕು ಇಂಚು ಅಗಲ, ಮೂರು ಇಂಚು ಎತ್ತರದ ಆಯಾತಾಕಾರದ ಮರದ ತುಂಡಿನಿಂದ ತಯಾರಿಸುತ್ತಾರೆ. ಈ ತುಂಡಿನ ನಡುವೆ ಸುಮಾರು ಎರಡು ಇಂಚು ಅಳತೆಯುಳ್ಳ (ಗಾತ್ರಕ್ಕೆ ಅನುಕೂಲವಾಗುವಂತೆ ಬೇರೆ ಬೇರೆ ಅಳತೆಯ) ಹರಿತವಾದ ತಗಡನ್ನು ಜೋಡಿಸಲಾಗುತ್ತದೆ. ಈ ತಗಡನ್ನು ಬಿಗಿಗೊಳಿಸಿಕೊಳ್ಳಲು ಬಿಗಿಗೂಟವಿದೆ. ಉಜ್ಜೊಡಿನ ಒಂದು ಭಾಗದ ಮೇಲ್ಭಾಗದಲ್ಲಿ ಎರಡೂ ಕೈಯಲ್ಲಿ ಹಿಡಿಯಲು ಅನುಕೂಲವಾಗುವ ಹಿಡಿಕೆ ಇದೆ. ಇದನ್ನು ಒಬ್ಬರು ಅಥವಾ ಇಬ್ಬರೂ ಬಳಸಬಹುದು. ನುಣುಪುಗೊಳಿಸುವ ಆಧುನಿಕ ಯಂತ್ರಗಳು ಬಂದ ನಂತರ ಇದರ ಬಳಕೆ ಅತ್ಯಂತ ಕಡಿಮೆಯಾಗಿದೆ.

೪. ಉಣ್ಣೆಕತ್ತ್ರಿ ಅಥವಾ ತುಪ್ಪಟ ಕತ್ತ್ರಿ



ಕುರಿಗಳ ತುಪ್ಪಟನ್ನು ಕತ್ತರಿಸಲು ಬಳಸುವ ಸಲಕರಣೆ. ಇದು ಸುಮಾರು ಒಂದು ಅಡಿಯಿಂದ ಸುಮಾರು ಹದಿನೈದು ಇಂಚು ಉದ್ದವಿರುತ್ತದೆ. ಮಧ್ಯದಲ್ಲಿ ಸುಮಾರು ಎರಡು ಇಂಚು ಅಗಲವಿದ್ದು ತುದಿ ಭಾಗಕ್ಕೆ ಬಂದಂತೆ ಕಡಿಮೆ ಅಗಲವಿರುವ ತೆಳು ತಗಡುಗಳನ್ನು ಒಂದಕ್ಕೊಂದು ಅಭಿಮುಖವಾಗುವಂತೆ ವಿನ್ಯಾಸಗೊಳಿಸಿದ ಒಂದೇ ತಗಡಿನ ತುಂಡಿನಿಂದ ಇದನ್ನು ರಚಿಸುತ್ತಾರೆ. ಇದನ್ನು ಮಧ್ಯದಲ್ಲಿ ಸಂಪೂರ್ಣವಾಗಿ ಬಾಗಿಸಿದಾಗ ಕತ್ತರಿಯ ಆಕಾರವು ಲಭ್ಯವಾಗುತ್ತದೆ. ಬುಡಭಾಗವೇ ಹಿಡಿಯೂ ಆಗಿರುತ್ತದೆ ಹೊರತು ಪ್ರತ್ಯೇಕ ಹಿಡಿ ಇರುವುದಿಲ್ಲ.

೫. ಕೈಗರಗಸ



ಮರದ ಸಣ್ಣ ಹಲಗೆಗಳನ್ನು ಹಾಗೂ ಸಣ್ಣ ಕಟ್ಟಿಗೆಗಳನ್ನು ತುಂಡು ಮಾಡಿಕೊಳ್ಳಲು ಬಳಸುವ ಸಾಧನ. ಇದು ಸುಮಾರು ಎರಡು ಅಡಿ ಉದ್ದವಿರುತ್ತದೆ. ಇದನ್ನು ಹಿಡಿಯಲು ಹಿಂಭಾಗದಲ್ಲಿ ಹಿಡಿಯನ್ನು ಹೊಂದಿರುತ್ತದೆ. ಹಿಡಿಯಿಂದ ಅಗಲ ಪಟ್ಟಿಯನ್ನು ಹೊಂದಿ ಮುಂದುವರಿದಂತೆಲ್ಲ ಅದರ ಅಗಲವು ಕಡಿಮೆಯಾಗುತ್ತದೆ. ಆಯತಾಕಾರದ ಪಟ್ಟಿಯ ಒಂದು ಪಾರ್ಶ್ವದಲ್ಲಿ ಮುಳ್ಳುಗಳ ಎಡೆಬಿಡದೆ ಇರುವ ಆಕಾರ ಹೊಂದಿರುತ್ತದೆ. ಹೀಗೆ ಮಾಡಿರುವುದರಿಂದ ಕಟ್ಟಿಗೆ ಕೊರೆಯುವಾಗ ಗರಗಸ ಹಿಂದು ಮುಂದೆ ಸರಿದಾಡಲು ಅನುಕೂಲವಾಗುತ್ತದೆ. ಇದರ ಮುಳ್ಳುಗಳು(ಹಲ್ಲುಗಳು) ಅಲ್ಪಸ್ವಲ್ಪ ಬಾಗಿರುತ್ತವೆ.

೬. ಕೈಹಂಚಿನ ಪಡಿಯಚ್ಚು



ಮನೆಯ ಮೇಲ್ಛಾವಣಿಗೆ ಬಳಸುವ ಹಂಚುಗಳ ಪಡಿಯಚ್ಚು ತಯಾರಿಸಲು ಇದರಿಂದ ತಯಾರಿಸಲಾದ ಹಂಚುಗಳನ್ನು ಕರಿಹಂಚು ಅಥವಾ ಕೈಹಂಚುಗಳು ಎನ್ನುತ್ತಾರೆ. ಈ ಅಚ್ಚು ಸುಮಾರು ಒಂದೂವರೆ ಅಡಿ ಉದ್ದವಿದ್ದು, ಅದರ ಹಿಂಭಾಗದಲ್ಲಿ ಹಿಡಿಕೆ ಇದೆ. ಅಚ್ಚು ದಪ್ಪವಾಗಿದ್ದು, ತುದಿಗೆ ಹೋದಂತೆ ಕಿರಿದಾಗುತ್ತದೆ. ಹಂಚುಗಳನ್ನು ತಯಾರಿಸುವಾಗ ಕೈಯಚ್ಚಿನ ಮೇಲೆ ಅರ್ಧಗೋಲಾಕಾರದಲ್ಲಿ ಮಣ್ಣನ್ನು ಮೆತ್ತಲಾಗುತ್ತದೆ. ಅಲ್ಲದೆ ಮನೆಯ ನೆಲವನ್ನು ಭದ್ರಗೊಳಿಸಲು, ನೆಲಸಮತಟ್ಟು ಮಾಡಲು ಸಹ ಕೈಯಚ್ಚು ಬಳಕೆಯಾಗುತ್ತದೆ. ಇದನ್ನು ಜಾಲಿಮರದಿಂದ ತಯಾರಿಸಲಾಗುತ್ತದೆ. ಹಂಚಿನ ಕಾರ್ಖಾನೆಗಳು ಬಂದ ಬಳಿಕ ಇದರ ಬಳಕೆ ಇಲ್ಲವಾಗಿದೆ.

೭. ಕೊಡತಿ



ಬಡಿಗಿ ವೃತ್ತಿಯವರು ಮರಕ್ಕೆ ರಂಧ್ರ ತೋಡುವಾಗ ಅಥವಾ ಹಾಕುವಾಗ ಉಳಿಯನ್ನು ಬಳಸುತ್ತಾರೆ. ಆ ಉಳಿಯನಿಟ್ಟು ಹೊಡೆಯುದಕ್ಕೆ ಬಳಸುವ ಪರಿಕರವೇ ಕೊಡತಿ. ಅಂದರೆ ಮೊಳೆ, ಉಳಿ ಮುಂತಾದವನ್ನು ಮೇಲಿನಿಂದ ಬಡಿಯಲು ಅಥವಾ ಕುಟ್ಟಲು ಬಳಸುವ ಸಾಧನ. ಉಳಿಗೆ ಪೆಟ್ಟು ಹೊಡೆಯಲು ಇದನ್ನು ಬಳಸುತ್ತಾರೆ. ಇದು ಸುಮಾರು ಒಂದು ಅಡಿ ಉದ್ದವಿದ್ದು ಹಿಡಿಯನ್ನು ಹೊಂದಿದೆ. ಹಿಡಿಯನ್ನು ಹೊರತು ಪಡಿಸಿ ಅದರ ಮುಂಭಾಗ ದಪ್ಪವಾಗಿದ್ದು ಭಾರವಾಗಿದೆ. ಒಕ್ಕಲು ಸಂದರ್ಭದಲ್ಲಿ ಅಲಸಂದೆ, ಹೆಸರು, ತೊಗರಿ ಬುಡ್ಡಿ ಬಡಿಯಲು ಸಹ ಅಪೂರ್ವವಾಗಿ ಬಳಕೆಯಾಗುತ್ತದೆ. ಇದರ ಗಾತ್ರದಲ್ಲಿ ಹಲವಾರು ವ್ಯತ್ಯಾಸಗಳಿವೆ. ಜಾಲಿ, ಹುಣಸೆ ಮರದಿಂದ ಇದನ್ನು ತಯಾರಿಸಿಕೊಳ್ಳುತ್ತಾರೆ.

೮. ಗಾರೆ ಉಜ್ಜುವ ಮಣೆ ಅಥವಾ ಕತ್ತಿ ಅಥವಾ ತ್ಯಾಪೆ ಅಥವಾ ಕರ್ಣೆ



ಕಟ್ಟಡ ನಿರ್ಮಾಣ ಮಾಡುವಾಗ ಸಿಮೆಂಟನ್ನು ಗೋಡೆಗೆ ಲೇಪಿಸಲು ಹಾಗೂ ನಯಗೊಳಿಸಲು ಬಳಸುವ ಸಲಕರಣೆ. ಸಾಮಾನ್ಯವಾಗಿ ಪುರಾತನ ಕಾಲದಿಂದಲೂ ಮಣ್ಣನ್ನು ನಯಗೊಳಿಸಲು ಈ ಉಪಕರಣ ವಿವಿಧ ರೂಪಗಳಲ್ಲಿ ಬಳಕೆಯಾಗುತ್ತದೆ. ಅರಳಿ ಎಲೆ ಆಕಾರದಲ್ಲಿದ್ದು ಆರು ಇಂಚು ಉದ್ದ, ತಳದಲ್ಲಿ ನಾಲ್ಕು ಇಂಚು ಅಗಲವಿದೆ. ತ್ಯಾಪಿ ನಾನಾ ಗಾತ್ರಗಳಲ್ಲಿರುತ್ತವೆ. ಮರ ಹಾಗೂ ಕಬ್ಬಿಣದಿಂದ ಮಾಡಿದ ತ್ಯಾಪಿಗಳಿವೆ. ಕಬ್ಬಿಣದಿಂದ ತಯಾರಿಸಿದ ತ್ಯಾಪಿಯ ಹಿಡಿಕೆಯನ್ನು ಮರದಿಂದ ಮಾಡಲಾಗಿದೆ.

೯. ಗಾರೆ ತಿಕ್ಕುವ ಕಲ್ಲು ಅಥವಾ ಬೆಣ್ಣೆಕಲ್ಲು



ಮನೆಗಳಲ್ಲಿ ನೆಲವನ್ನು ಸಮ ತಟ್ಟಾಗಿಯೂ ಹೊಳೆಯುವಂತೆಯೂ ತಿಕ್ಕಲು ಬಳಸುವ ಕಲ್ಲು. ಈ ಕಲ್ಲನ್ನು ಸಮುದ್ರ, ನದಿ, ಹೊಳೆಗಳ ದಡದಲ್ಲಿ ಆಯ್ದು ತರುತ್ತಾರೆ. ಇದು ಬೆಣ್ಣೆಯಂತೆ ನಯವಾಗಿರುವುದರಿಂದ ಇದಕ್ಕೆ 'ಬೆಣ್ಣೆಕಲ್ಲು' ಎಂತಲೂ ಕರೆಯುತ್ತಾರೆ. ಮನೆಗಳಲ್ಲಿ ಗೋಡೆ ಅಥವಾ ನೆಲ ಅಲ್ಲಲ್ಲಿ ಹೊಡೆದುಹೋದಾಗ ಆ ಜಾಗದಲ್ಲಿ ಅದಕ್ಕೆ ಗಾರೆ ಕಲಸಿ ಮೆತ್ತಿದ ನಂತರ ಅದರ ಮೇಲೆ ಸ್ವಲ್ಪ





ಸಿಮೆಂಟ್ ಹಾಕಿ ಗಾರೆ ತಿಕ್ಕುವ ಕಲ್ಲಿನಿಂದ ಚೆನ್ನಾಗಿ ತಿಕ್ಕಿ ನಯಗೊಳಿಸುತ್ತಾರೆ. ಸಿಮೆಂಟು ಬಳಕೆಗೆ ಬರುವ ಮೊದಲು ಸುಣ್ಣದ ಗಾರೆಯನ್ನು ಗೋಡೆ ಅಥವಾ ನೆಲಕ್ಕೆ ಹಾಕಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಹೆಚ್ಚು ಬಳಕೆಯಲ್ಲಿತ್ತು. ಮರಳು ಸುಣ್ಣ ಮಿಶ್ರಣ ಮಾಡಿ ಈ ಗಾರೆ ತಿಕ್ಕುವ ಕಲ್ಲಿನಿಂದ ಚೆನ್ನಾಗಿ ತಿಕ್ಕಿ ನಯಗೊಳಿಸುತ್ತಿದ್ದರು.

೧೦. ಗೌರಿ ಮೂರ್ತಿ ಅಚ್ಚು



ಗೌರಿ ಹಬ್ಬದಲ್ಲಿ ಪೂಜಿಸಲು ಬಳಸುವ ನಿರ್ದಿಷ್ಟ ಗೌರಿ ಮೂರ್ತಿಯನ್ನು ತಯಾರಿಸಲು ಬಳಸುವ ಅಚ್ಚು. ಕಲಸಿದ ಆವೆ ಮಣ್ಣನ್ನು ಈ ಅಚ್ಚಿನಲ್ಲಿ ಹಾಕಿ ನಿಗದಿತ ಹೊತ್ತಿನ ಬಳಿಕ ಅಚ್ಚನ್ನು ಹೊರ ತೆಗೆದಾಗ ಮೂರ್ತಿ ರೂಪಗೊಳ್ಳುತ್ತದೆ. ಅಚ್ಚಿನ ಹೊರ ಮುಖ ನಯವಾಗಿದ್ದು, ಒಳಭಾಗದಲ್ಲಿ ಮೂರ್ತಿಯ ಆಕಾರವು ಮಣ್ಣಿನಲ್ಲೂ ಮೂಡುವಂತೆ ತಯಾರಿಸಲಾಗಿದೆ. ತಲೆ ಕಿರೀಟ ಸಹಿತ ಎದೆಯವರೆಗೆ ಮೂರ್ತಿ ಮೂಡಿಬರುವಂತೆ ಸಂರಚನೆ ಇದೆ. ಇದು ಸುಮಾರು ಅರ್ಧ ಅಡಿ ಎತ್ತರವಿದ್ದು, ಒಂದು ಇಂಚಿನಷ್ಟು ದಪ್ಪವಿರುತ್ತದೆ. ಸಾಂಸ್ಕೃತಿಕವಾಗಿ ಮಹತ್ವವಿರುವ ಗೌರಿ ಹಬ್ಬದಲ್ಲಿ ಜನರು ಇಂತಹ ಅಚ್ಚಿನಿಂದಾದ ಮೂರ್ತಿಯನ್ನು ಕೊಂಡು ಪೂಜಿಸುತ್ತಾರೆ. ಇದನ್ನು ಬಿಳಿಯ ಗಾರೆಯಿಂದ ತಯಾರಿಸಲಾಗಿದೆ. ನುಣುಪುಗೊಳಿಸುವ ಆಧುನಿಕ ಯಂತ್ರಗಳು ಬಂದ ನಂತರ ಇದರ ಬಳಕೆ ಅತ್ಯಂತ ಕಡಿಮೆಯಾಗಿದೆ.

೧೧. ದೊಡ್ಡ ಉಜ್ಜೋಡು



ಬಾಗಿಲ ತೋಳು, ಕಿಟಕಿಗಳ ಪಟ್ಟಿ ಮುಂತಾದ ವಸ್ತುಗಳಿಗೆ ಅಲಂಕಾರಿಕ ಗೆರೆ ಹಾಕಲು ಬಳಸುವ ವಸ್ತು. ಇದರ ಉದ್ದ ಸುಮಾರು ಏಳೂವರೆ ಇಂಚು, ಎತ್ತರ ಎರಡೂವರೆ ಇಂಚು. ಅಗಲ ಒಂದೂವರೆ ಇಂಚು. ಇದು ಉಜ್ಜೋಡು ರೀತಿಯಲ್ಲಿದೆ. ಆದರೆ ಗಾತ್ರದಲ್ಲಿ ಚಿಕ್ಕದು. ಇದರ ಮಧ್ಯಭಾಗದಲ್ಲಿ ಗೀಟು ಕೊರೆಯುವ ಲೋಹದ ವಸ್ತುವಾಗಿದೆ. ಇದನ್ನು ಅಳತೆಗೆ ತಕ್ಕಂತೆ ಗೀಟು ಅಥವಾ ಗೆರೆ ಕೊರೆಯಲು ಅನುಕೂಲವಾಗುವಂತೆ ಹೊಂದಿಸಿಕೊಳ್ಳಬಹುದು. ಬಾಗಿಲ ತೋಳು, ತಟ್ಟಿ, ತಲೆಪಟ್ಟಿ, ಎತ್ತಿನ ಗಾಡಿಯ ಪಟ್ಟಿ ಮುಂತಾದವುಗಳಿಗೆ ಅಲಂಕಾರಿಕ ಗೆರೆ ಹಾಕಿಕೊಳ್ಳಲು ಬಳಸುತ್ತಾರೆ.

೧೨. ತಬ್ಬಳಿ



ಮರದ ತುಂಡುಗಳನ್ನು ನಿಗದಿತ ಸ್ಥಳದಲ್ಲಿ ಜೋಡಿಸಲು ಅಗತ್ಯವಾದ ರಂಧ್ರ ಮಾಡಿಕೊಳ್ಳಲು ಬಳಸುವ ಸಾಧನ. ಇದು ಸುಮಾರು ಹನ್ನೊಂದು ಇಂಚು ಉದ್ದವಿದ್ದು, ಇದರಲ್ಲಿ ಹಿಡಿಕೆಯ ಉದ್ದ ನಾಲ್ಕೂವರೆ ಇಂಚು, ನಾಲ್ಕು ಇಂಚು ದಪ್ಪವಿರುತ್ತದೆ. ಉಳಿಯ ತಗಡಿನ ಅಗಲ ಎರಡು ಇಂಚು ಇರುತ್ತದೆ. ತುದಿ ಹರಿತವಾಗಿರುತ್ತದೆ.

೧೩. ತಿಗರಿ




ಕುಂಬಾರರು ಗಡಿಗೆ ಅಥವಾ ಪಾತ್ರೆ ತಯಾರಿ ಮಾಡುವ ಸಂದರ್ಭದಲ್ಲಿ ಬಳಸುವ ಸಾಧನ. ಇದು ಚಕ್ಕಡಿ ಗಾಲಿಯಂತಿದ್ದು ಗಾಲಿಯ ಗಡ್ಡೆಯ ಮಧ್ಯಭಾಗದಲ್ಲಿ ಒಂದು ಚಿಕ್ಕ ರಂಧ್ರವಿರುತ್ತದೆ. ಈ ರಂಧ್ರವನ್ನು ಗಾಲಿಯ ತಿರುಗುವಿಕೆಗೆ ಅನುಕೂಲವಾಗುವಂತೆ ಅಳವಡಿಸಲಾಗುತ್ತದೆ. ಗಡಿಗೆ ಮಾಡುವ ಸಂದರ್ಭದಲ್ಲಿ ಗಡಿಗೆ ತಯಾರಕ ಇದರ ಎದುರುಗಡೆ ಕುಳಿತುಕೊಂಡು ಮಧ್ಯಭಾಗದ ರಂಧ್ರದಲ್ಲಿ ಒಂದು ನಯವಾದ ಕೋಲಿನಿಂದ ತಿಗರಿಯನ್ನು ಗಡಿಗೆ ರಚನೆಗೆ ಅನುಕೂಲವಾಗುವಂತೆ ನಿಧಾನವಾಗಿ ಅಥವಾ ವೇಗವಾಗಿ ತಿರುಗಿಸಿಕೊಳ್ಳುತ್ತಾನೆ.ತಿಗರಿ ತಿರುಗುವಾಗ ಹದಗೊಳಿಸಿದ ಅರ್ಲುಮುದ್ದೆ ಅಥವಾ ಮಣ್ಣಿನ ಮುದ್ದೆಯನ್ನು ತಿಗರಿಯ ಮಧ್ಯಭಾಗದ ಗಡ್ಡೆಯ ಮೇಲಿಟ್ಟು ತನ್ನ ಕೈಚಳಕದಿಂದ ತನಗೆ ಬೇಕಾದ ಆಕಾರದಲ್ಲಿ ಮಡಕೆಗೆ ರೂಪಕೊಡುತ್ತಾನೆ. ನಡುನಡುವೆ ತಿಗರಿಯ ವೇಗ ಕಡಿಮೆಯಾದಾಗ ಮಡಕೆ ತಯಾರಕನು ತಿಗರಿಯು ತಿರುಗಿಸುತ್ತ ಇರುವಾಗಲೇ ಗಡಿಗೆ ಪಾತ್ರೆಯನ್ನು ನಿರೀಕ್ಷಿತ ಆಕೃತಿಗೆ ತರುತ್ತಾನೆ. ಬಳಿಕ ಗಡಿಗೆ, ತಿಗರಿಗೆ ಅಂಟಿಕೊಂಡಾಗ ಪಾತ್ರೆಯನ್ನು ದಾರದಿಂದ ಕತ್ತರಿಸಿ ಬೇರ್ಪಡಿಸಿ ಪಕ್ಕದಲ್ಲಿ ಸಜ್ಜು ಗೊಳಿಸಲಾದ ಹಾಸಿದ ಬೂದಿಯ ಮೇಲೆ ಇರಿಸುತ್ತಾನೆ. ತಿಗರಿಯನ್ನು ಕಟ್ಟಿಗೆ ಅಥವಾ ಮರ ಮತ್ತು ಮಣ್ಣಿನಿಂದ ತಯಾರಿಸುತ್ತಾರೆ. ತಿಗರಿಯ ನಡುವಿನ ದಪ್ಪಗಾತ್ರದ ಗಡ್ಡೆಯು ಮರದ್ದಾಗಿದ್ದು ಅದಕ್ಕೆ ಸ್ವಲ್ಪ ಸ್ವಲ್ಪ ಅಂತರದಲ್ಲಿ ಜೋಡಿಸಲಾಗುವ



ಹಲ್ಲು ಅಥವಾ ಎಲೆಗಳೂ ಮರದ್ದೇ ಆಗಿವೆ. ಒಳಗೆ ಬಳ್ಳಿಗಳನ್ನು ಸುತ್ತಿ ಮಣ್ಣು ಲೇಪನ ಮಾಡಿ ಹೊರಗಿನ ಸುತ್ತಿನ ಚಕ್ರವನ್ನು ಕೆಲವರು ತಯಾರಿಸಿಕೊಂಡಿರುತ್ತಾರೆ. ಇವತ್ತಿನ ಕುಂಬಾರಿಕ ಸಣ್ಣ ಸಣ್ಣ ಪಾತ್ರೆಗಳ ತಯಾರಿಕೆಗೆ ಸೀಮಿತವಾಗಿರುವುದರಿಂದ ಹಾಗೂ ಮಹಿಳೆಯರು ಪಾತ್ರೆ ತಯಾರಿಸಿಕೊಳ್ಳುವುದಕ್ಕೆ ಸೀಮಿತವಾಗಿರುವುದರಿಂದ ಈಗ ಇದರ ಬಳಕೆ ಕಡಿಮೆಯಾಗಿದೆ. ತಿಗರಿಯು ಕುಲಾಲಚಕ್ರವೆಂಬ ಹೆಸರಿನಿಂದ ಕಾಲಗತಿಯ ಸಂಕೇತವಾಗಿ ಪರಿಗಣಿತವಾಗಿದೆ.

೧೪. ತಿದಿ



ಕಮ್ಮಾರರು ಕಬ್ಬಿಣದ ಉಪಕರಣಗಳನ್ನು ತಯಾರಿಸುವಾಗ ಅವುಗಳ ಭಾಗಗಳನ್ನು ಬೆಂಕಿಯಲ್ಲಿ ಕಾಯಿಸಲು, ಕೆಂಡಗಳು ಚೆನ್ನಾಗಿ ಉರಿಯುವಂತೆ ಗಾಳಿ ಹಾಕಿಕೊಳ್ಳಲು ಬಳಸುವ ಉಪಕರಣ. ತಿದಿಯು ನಾಲ್ಕು ಅಡಿ ಉದ್ದ, ಎರಡು ಅಡಿ ಅಗಲವಿದೆ. ಮೇಲ್ಭಾಗ ಮತ್ತು ಕೆಳಭಾಗಕ್ಕೆ ಮರದ ತೆಲು ಹಲಗೆಗಳನ್ನು ಜೋಡಿಸಿ ಹಿಂದಿನ ಭಾಗಕ್ಕೆ ಎಮ್ಮೆಯ ಚರ್ಮದಿಂದ ಬಿಗಿಯಲಾಗುತ್ತದೆ. ಕೆಳಭಾಗಕ್ಕೆ ಕಬ್ಬಿಣದ ಸರಳವನ್ನು ಜೋಡಿಸಿರುತ್ತಾರೆ. ತಿದಿಯ ಮುಂದಿನ ಭಾಗಕ್ಕೆ ಕೊಳವೆಯಾಕಾರದ ಕಬ್ಬಿಣದ ಪೈಪನ್ನು ಹಾಕಿರುತ್ತಾರೆ. ತಿದಿಯ ಹಿಂಭಾಗಕ್ಕೆ ಒಂದು ಹಗ್ಗವನ್ನು ಕಟ್ಟಿ, ಅದನ್ನು ಒಂದು ಉದ್ದವಾದ ಮರದ ಕೋಲಿಗೆ ಕಟ್ಟುತ್ತಾರೆ. ಕುಲುಮೆಯ ಮೇಲ್ಭಾಗಕ್ಕೆ ಬರುವಂತೆ ಕೋಲಿಗೆ ಸರಪಳಿಯನ್ನು ಹಿಡಿದು ಮೇಲೆ ಕೆಳಗೆ ಎಳೆದಾಗ ಗಾಳಿಯು ಬರುತ್ತದೆ. ಆಗ ಕುಲುಮೆಯಲ್ಲಿ ಬೆಂಕಿ ಹೆಚ್ಚುತ್ತದೆ. ಸರಪಳಿಯಿಂದ ತಿದಿಯನ್ನು ಮೇಲಕ್ಕೆ ಎಳೆದಾಗ ಗಾಳಿಯು ಬರುತ್ತದೆ. ಕೆಳಕ್ಕೆ ಇಟ್ಟಾಗ ಗಾಳಿ ಬರುವುದು ನಿಲ್ಲುತ್ತದೆ. ತಿದಿಯು ವೀಣೆಯ ಆಕಾರದಲ್ಲಿದೆ. ಇತ್ತೀಚೆಗೆ ಟೈರ್ ಟ್ಯೂಬ್‌ಗಳಿಂದ ತಿದಿಯನ್ನು ಬಿಗಿಯುತ್ತಾರೆ.

೧೫. ತೂಕದ ಗುಂಡು



ಕಟ್ಟಡ ಕಟ್ಟುವಾಗ ಗೋಡೆಗಳಿಗೆ ಇಟ್ಟ ಕಲ್ಲು ಅಥವಾ ಇಟ್ಟಿಗೆಗಳ ಗುರುತ್ವಾಕರ್ಷಣ ನೆಲೆಯನ್ನು ಪರೀಕ್ಷಿಸಲು ಬಳಸುವ ಉಪಕರಣ. ಕಬ್ಬಿಣದ ಗುಂಡನ್ನು ಮೇಲಿಂದ ಕೆಳಗೆ ಇಳಿ ಬಿಡಲು ದಾರವನ್ನು ಕಟ್ಟಿರುತ್ತಾರೆ. ಗುಂಡು ಸುಮಾರು ಮೂರು ಇಂಚು ಉದ್ದವಿರುತ್ತದೆ. ಇದಕ್ಕೆ ಸುಮಾರು ಎರಡು ಮೀಟರ್

ಉದ್ದದ ದಾರವನ್ನು ಪೋಣಿಸಿದೆ. ದಾರದಲ್ಲಿ ಚೌಕಕಾರದ ಪಟ್ಟ ಹಲಗೆ ಕೂಡ ಜೋಡಣೆಯಾಗಿದೆ. ಕಟ್ಟಡದ ಮೂಲೆಯನ್ನು ಅಳತೆ ಮಾಡುವಾಗ ಹಲಗೆ ತುಂಡನ್ನು ಕೈಯಲ್ಲಿ ಗೋಡೆಗೆ ಹಿಡಿದು ದಾರದಲ್ಲಿ ನೇತಾಡುವ ಗುಂಡನ್ನು ಇಳಿಬಿಟ್ಟು ಕಟ್ಟುತ್ತಿರುವ ಗೋಡೆಯು ಸರಿಯಾಗಿದೆಯೋ ಇಲ್ಲವೋ ಎಂದು ಪರೀಕ್ಷೆ ಮಾಡುವುದಕ್ಕೆ ಬಳಸುತ್ತಾರೆ. ಗುಂಡು ಸುಮಾರು ಎರಡುನೂರ ಐವತ್ತು ಗ್ರಾಂ ತೂಕದ್ದಾಗಿರುತ್ತದೆ. ಇದು ಗೋಲಾಕಾರದಲ್ಲಿರುತ್ತದೆ.

೧೬. ತೆಪ್ಪ ಅಥವಾ ಹರಿಗೋಲು



ನದಿ ಹಾಗೂ ಕೆರೆಗಳಲ್ಲಿ ಮೀನುಗಾರಿಕೆ ಮತ್ತು ನದಿ ದಾಟಲು ಬಳಸುವ ಸಾಧನ. ಸಣ್ಣ ತೆಪ್ಪವು ತಟ್ಟೆಯ ಆಕಾರದಲ್ಲಿ ಸುಮಾರು ಒಂದರಿಂದ ಒಂದೂವರೆ ಅಡಿ ಎತ್ತರವಿರುತ್ತದೆ. ಮೇಲ್ಭಾಗದ ವ್ಯಾಸ ಆರು ಅಡಿ ಇದ್ದು ತಳಭಾಗ ಚಪ್ಪಟೆಯಾಗಿದೆ. ಬಿದಿರು ಅಥವಾ ತಟಿಕೆಯ ಸೀಳುಗಳಿಂದ ಹೆಣೆದು ಅದರ ಹೊರ ಮೈಮೇಲೆ ಪ್ಲಾಸ್ಟಿಕ್ ಚೀಲವನ್ನು ಹೊದಿಸಿ ಚೀಲದ ಮೇಲ್ಭಾಗದಲ್ಲಿ ಡಾಂಬರ್ ಹಾಕಿದ್ದಾರೆ. ನೀರು ಒಳಹೋಗದಂತೆ ತಡೆಯುವುದು ಇದರ ಮುಖ್ಯ ಉದ್ದೇಶ. ಜೋರಾಗಿ ಗಾಳಿ ಬೀಸದ ಎಲ್ಲಾ ನೀರಿನ ತಾಣಗಳಲ್ಲಿ ಇದು ಸಾಮಾನ್ಯವಾಗಿ ಬಳಕೆಯಾಗುತ್ತದೆ.

೧೭. ಪುಚ್ಕೂಳಿ



ಅತ್ಯಂತ ಕಿರುತೊರೆ ಅಥವಾ ಕಿರು ಕಾಲುವೆಗಳಲ್ಲಿ, ಹೊಂಡ ಅಥವಾ ಕಟ್ಟೆ ಅಥವಾ ಕೆರೆಗಳಿಂದ ಹರಿಯುವ ನೀರಲ್ಲಿನ ಮೀನುಗಳನ್ನು ಹಿಡಿಯಲು ಬಳಸುವ ಉಪಕರಣ. ವಿಶೇಷವಾಗಿ ಹತ್ತುಮೀನು ಹಾಗೂ ಏಡಿ ಹಿಡಿಯಲು ಬಳಕೆಯಾಗುತ್ತದೆ. ಇದನ್ನು ಬಿದಿರ ಸೀಳುಗಳಿಂದ ತಯಾರಿಸಲಾಗುತ್ತದೆ. ಇದು ಹಕ್ಕಿಗಳ ಪುಕ್ಕದ ಆಕಾರದಲ್ಲಿ ಇರುವುದರಿಂದ ಇದಕ್ಕೆ 'ಪುಚ್ಛ+ಕೂಳಿ= ಪುಚ್ಕುಳಿ' ಎಂದು ಹೆಸರು. ತೆಂಗಿನ ಕಡ್ಡಿಗಳಿಂದ ಹೆಣೆದು ಇದನ್ನು ರಚಿಸುತ್ತಾರೆ. ಇದರ ಬಾಯಿ ವೃತ್ತಾಕಾರದಲ್ಲಿದ್ದು, ಮಧ್ಯೆ ಒಂದು ಕೋಲನ್ನು ಹಿಡಿಕೆಯಾಗಿ ಜೋಡಿಸಲಾಗಿರುತ್ತದೆ. ಹಿಂಭಾಗವನ್ನು ಜೋಡಿಸಿ ಕಟ್ಟಿದಾಗ ಅದು ಹಕ್ಕಿಯ ಪುಕ್ಕದಂತಿರುತ್ತದೆ. ಹರಿಯುವ ನೀರಲ್ಲಿ ಕೂಡಾ ಮೀನು ಹಿಡಿದುಕೊಳ್ಳಲು ಬಳಸಿಕೊಳ್ಳುತ್ತಾರೆ. ಒಂದು ಕೋಲನ್ನು ಇದರ ಮುಂಭಾಗಕ್ಕೆ ಅಡ್ಡವಾಗಿ ಕಟ್ಟುತ್ತಾರೆ. ಕಾಲುವೆಯ ಎರಡು ಬದಿಗಳಿಗೆ ಎರಡು ಕೋಲನ್ನು ಇದರ

ಗೂಟಗಳನ್ನು ನಾಟಿ ಅವಕ್ಕೆ ಪಟ್ಟುಳಿಗೆ ಕಟ್ಟಿದ ಅಡ್ಡ ಕಟ್ಟಿಗೆಯನ್ನು ಕಟ್ಟಿ ಮೀನು ಹಿಡಿಯುತ್ತಾರೆ. ಅಂತೆಯೇ ಹಿಂದಿನ ಭಾಗದಲ್ಲಿ ಸಂಗ್ರಹಿತವಾಗುವ ಮೀನುಗಳನ್ನು ಇನ್ನೊಂದು ಜಾಲದಲ್ಲಿ ತುಂಬುವಂತೆ ಹಿಂಭಾಗಕ್ಕೆ ಜಾಲವನ್ನು ಕಟ್ಟುವುದೂ ಇದೆ. ಇತ್ತೀಚೆಗೆ ಪಾರಂಪರಿಕ ಕೆರೆ, ಕಟ್ಟೆ, ಬಾವಿಗಳು ನಿರ್ನಾಮವಾಗುತ್ತಿರುವುದರಿಂದ ಪಟ್ಟುಳಿಯಂಥ ಸಲಕರಣೆಗಳು ಕಣ್ಮರೆಯಾಗುತ್ತಿವೆ.

೧೮. ಪೆಟಾರಿ ಅಥವಾ ಟ್ರಂಕು




ಬೇರೆ ಬೇರೆ ಗ್ರಾಮೀಣ ಕಸುಬುಗಳವರು ತಮ್ಮ ಪರಿಕರಗಳನ್ನು ಇಟ್ಟುಕೊಂಡು ಹೋಗಲು ಬಳಸುವ ಸಾಧನ. ಇದು ಸುಮಾರು ಹದಿನೇಳುವರೆ ಇಂಚು ಉದ್ದ, ಹನ್ನೊಂದೂವರೆ ಇಂಚು ಅಗಲ, ಐದು ಇಂಚು ಎತ್ತರ ಹೊಂದಿದೆ. ಇದಕ್ಕೆ ಮುಚ್ಚುವ ಮತ್ತು ತೆರೆಯುವ ವ್ಯವಸ್ಥೆ ಇದ್ದು, ಬೀಗ ಹಾಕುವ ವ್ಯವಸ್ಥೆ ಕೂಡ ಇದೆ. ಇದನ್ನು ಮನೆಯಲ್ಲಿ ಬಟ್ಟೆ, ಕಾಗದ ಪತ್ರಗಳನ್ನು ಇಟ್ಟುಕೊಳ್ಳಲು ಬಳಸುತ್ತಾರೆ. ಲೋಹದಿಂದ ತಯಾರಿಸಿದ ಇವು ಈಗಲೂ ಬಳಕೆಯಲ್ಲಿವೆ.

೧೯. ಬಾತಿ



ಚಮ್ಮಾರರು ತಮ್ಮ ವೃತ್ತಿಗೆ ಸಂಬಂಧಿಸಿದ ಪರಿಕರಗಳನ್ನು ಹಾಕಿಟ್ಟುಕೊಳ್ಳಲು ಬಳಸುವ ಚರ್ಮದ ಚೀಲ. ಇದು ಸುಮಾರು ಒಂದೂವರೆ ಅಡಿ ಉದ್ದ, ಒಂದು ಅಡಿ ಅಗಲ ಇದೆ. ಇದನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕೊಂಡೊಯ್ಯಬಹುದು. ಹಿಡಿದುಕೊಳ್ಳಲು ಹಿಡಿಕೆ ಇದೆ. ತಮ್ಮ ಹರಿತವಾದ ಪರಿಕರಗಳನ್ನು ಹಾಕಿಟ್ಟುಕೊಳ್ಳಲು ಇದನ್ನು ಉಪಯೋಗಿಸುತ್ತಾರೆ. ಇದನ್ನು ಚರ್ಮದಿಂದ ತಯಾರಿಸುತ್ತಾರೆ.

೨೦. ಬಾಚಿ



"ಮರದ ತುಂಡುಗಳನ್ನು ಅಗತ್ಯಾನುಸಾರ ಕ್ರಮಬದ್ಧವಾಗಿ ಕತ್ತನೆ ಮಾಡಲು ಬಡಗಿಗಳು ಬಳಸುವ ಆಯುಧ. ಬಾಚಿಯು ಆರು ಇಂಚು ಉದ್ದ, ಸುಮಾರು ಮೂರು ಇಂಚು ಅಗಲವಿರುತ್ತದೆ. ಅಲಗಿನ ತುದಿ ಭಾಗವು ಹರಿತವಾಗಿರುತ್ತದೆ. ಹಿಡಿಕೆಯು ಸುಮಾರು ಎರಡು ಅಡಿ ಉದ್ದವಿರುತ್ತದೆ. ಕಬ್ಬಿಣದಿಂದ ಬಾಚಿಯನ್ನು ತಯಾರಿಸಲಾಗುತ್ತದೆ. ಅದಕ್ಕೆ ಮರದ ಹಿಡಿಕೆಯನ್ನು ಹಾಕುತ್ತಾರೆ. ಬಾಚಿಯ ಗಾತ್ರಗಳಲ್ಲಿ ವ್ಯತ್ಯಾಸಗಳಿರುತ್ತವೆ".[೧]

೨೧. ಬಿದಿರ ಕಡ್ಡಿ ಪಾಕೀಟು



ಮಹಿಳೆಯರು ತಮ್ಮ ಅಲಂಕಾರ ಹಾಗೂ ಮುಖಾಲಂಕಾರಕ್ಕೆ(ಮೇಕಪ್‌ಗೆ) ಸಂಬಂಧಿಸಿದ ವಸ್ತುಗಳನ್ನು ಇಟ್ಟುಕೊಳ್ಳಲು ಬಳಸುತ್ತಿದ್ದ ಸಾಧನ. ಬೊಟ್ಟು, ಕಾಡಿಗೆ, ಪೌಡರ್, ಇತ್ಯಾದಿ ವಸ್ತುಗಳನ್ನು ಇಟ್ಟುಕೊಳ್ಳಬಹುದು. ಆಯತಾಕಾರದಲ್ಲಿರುವ ಈ ಪರ್ಸ್ ಅಥವಾ ಪಾಕೀಟಿನ ಎತ್ತರ ಐದು ಇಂಚು, ಉದ್ದ ಅರ್ಧ ಅಡಿ, ದಪ್ಪ ಎರಡು ಇಂಚು ಇದೆ. ಮೇಲ್ಭಾಗದಲ್ಲಿ ಮುಚ್ಚಳವಿದ್ದು ಪರ್ಸ್‌ನ ಕಾಲು ಭಾಗದಷ್ಟಿವೆ. ಬಿದಿರಿನ ಕಡ್ಡಿಗಳಿಂದ ಸುಂದರವಾಗಿ ಈ ವಸ್ತುವನ್ನು ಹೆಣೆದಿದ್ದಾರೆ. ಬಹಳ ಹಿಂದಿನಿಂದಲೂ ಇಂಥ ಪಾಕೀಟುಗಳು ಬಳಕೆಯಲ್ಲಿದ್ದವು. ಆಧುನಿಕತೆಯ ಈ ಕಾಲದಲ್ಲಿ ಈ ದೇಸಿ ಅಲಂಕಾರ ಸಾಮಾಗ್ರಿಗಳು ಕಣ್ಮರೆಯಾಗುತ್ತಿದೆ. ಅದರ ಸ್ಥಾನವನ್ನು ಪಾಲಿಸ್ಟರ್, ಬಟ್ಟೆ, ಚರ್ಮದ ಪರ್ಸ್‌ಗಳು ಆವರಿಸಿವೆ.

೨೨. ಬೈರಿಗೆ



ಕೊರಡುಗಳಿಗೆ ರಂಧ್ರ ಕೊರೆಯಲು ಬಳಸುವ ವಸ್ತು. ಇದು ಸುಮಾರು ಒಂದು ಅಡಿಯಿಂದ ಎರಡು ಅಡಿ ಉದ್ದವಿದೆ. ಇದರ ಮೇಲ್ಭಾಗದಲ್ಲಿ ಒಂದು ಬೇರಿಂಗ್ ಜೋಡಿಸಿದ್ದಾರೆ. ಮಧ್ಯದಲ್ಲಿ ಹಗ್ಗ ಸರಿಯದಂತೆ ಗೀರುಗಳನ್ನು ಮಾಡಿ ಕೆಳಭಾಗದಲ್ಲಿ ರಂಧ್ರ ಕೊರೆಯುವುದಕ್ಕೆ ಸುಮಾರು ಅರ್ಧ ಅಡಿ ಉಳ್ಳ ಚೂಪು ಕಬ್ಬಿಣವನ್ನು ಹಾಕಿದ್ದಾರೆ. ಒಬ್ಬನು ಬೇರಿಂಗಿನ ಇದರ ಮೇಲ್ಭಾಗವನ್ನು ಹಿಡಿದುಕೊಂಡರೆ





ಮತ್ತೊಬ್ಬನು ಹಗ್ಗದಿಂದ ಹಿಂದಕ್ಕೂ ಮುಂದಕ್ಕೂ ಎಳೆದಾಗ ಕೊರಡಲ್ಲಿ ರಂಧ್ರವಾಗುತ್ತದೆ. ಇದನ್ನು ಜಾಲಿ ಮರ ಮತ್ತು ಲೋಹದಿಂದ ತಯಾರಿಸಿದ್ದಾರೆ. ನಾನಾ ತರದ ಬೈರಿಗೆಗಳು ಇವೆ. ಇತ್ತೀಚಿಗೆ ಯಂತ್ರ ಬೈರಿಗೆಗಳು, ಡ್ರಿಲ್ ಮಿಷನ್‌ಗಳು ಬಂದದ್ದರಿಂದ ಇದರ ಬಳಕೆ ಕಡಿಮೆಯಾಗಿದೆ.

೨೩. ಭರ್ಜಿ



ಪ್ರಾಣಿಗಳನ್ನು ಬೇಟೆಯಾಡಲು ಮುಖ್ಯವಾಗಿ ಬಳಕೆಯಾಗುವ ಒಂದು ಸಾಧನ. ಕೆಲವೊಮ್ಮೆ ಆತ್ಮರಕ್ಷಣೆಗಾಗಿಯೂ ಇದು ಬಳಕೆಯಾಗುತ್ತದೆ. ಸುಮಾರು ಆರರಿಂದ ಎಂಟು ಅಡಿಗಳಷ್ಟು ಉದ್ದದ ಈ ಆಯುಧಕ್ಕೆ ಕಬ್ಬಿಣದ ದಪ್ಪ ತಗಡಿನ, ಸುಮಾರು ಒಂದೂವರೆ ಅಡಿ ಉದ್ದದ, ತುದಿ ಚೂಪಾಗಿರುವ ಇನ್ನೊಂದು ಸಲಕರಣೆಯು ಭದ್ರವಾಗಿ ಜೋಡಿಸಲ್ಪಟ್ಟಿರುತ್ತದೆ. ಈ ಸಲಕರಣೆಯ ಬುಡಭಾಗವು ಕೊಳವೆಯಾಕಾರದಲ್ಲಿ ನಿರ್ಮಿತವಾಗಿದ್ದು, ಮರದ ಉದ್ದದ ಹಿಡಿಗೆ ಭದ್ರವಾಗಿ ಜೋಡಿಸುವುದಕ್ಕೆ ಅನುಕೂಲವಾಗುವಂತಿರುತ್ತದೆ.

ಭರ್ಜಿಯ ತುದಿಯಲ್ಲಿನ ಕಬ್ಬಿಣದ ಭಾಗವು ಸುಮಾರು ಮೂರು ಇಂಚು ಅಗಲದ ಅಲಗಿನಿಂದ ನಿರ್ಮಾಣಗೊಂಡಿರುತ್ತದೆ. ಭರ್ಜಿಯನ್ನು ಎರಡು ಕೈಗಳನ್ನು ಬಳಸಿಕೊಂಡು ಉಪಯೋಗಿಸುತ್ತಾರೆ. ಬೇಟೆಯಲ್ಲಿ ಒಂದೇ ಕೈಯಲ್ಲಿ ಹಿಡಿದು ಎಸೆಯುವುದು ಹೆಚ್ಚು ಪರಿಣಾಮಕಾರಿ. ರಾತ್ರಿ ಹೊತ್ತು ಹೊಲ, ತೋಟಗಳ ಕವಲಿಗೆ ಹೋಗುವಾಗ ಭರ್ಜಿ ಹೆಚ್ಚು ಉಪಯೋಗವಾಗುತ್ತದೆ.

ಅಂತೆಯೇ ಮನೆಯ ಛಾವಣಿ, ಜಂತೆ ಮುಂತಾದೆಡೆ ಇಲ್ಲವೇ ಇತರೆಡೆ ಹಾವು ಮುಂತಾದ ಅಪಾಯಕಾರಿ ಪ್ರಾಣಿಗಳನ್ನು ಕೊಲ್ಲಲು ಗೃಹಬಳಕೆಯ ಸಾಧನವಾಗಿಯೂ ಬಳಕೆಯಾಗುತ್ತದೆ. ಅಂದು ದಕ್ಷಿಣ ಕರ್ನಾಟಕದ ಹಳ್ಳಿಯ ಎಲ್ಲ ಮನೆಗಳಲ್ಲಿಯೂ ಭರ್ಜಿಯು ಒಂದು ಅತ್ಯವಶ್ಯಕ ಸಾಧನವಾಗಿದೆ. ಸಾಮಾನ್ಯವಾಗಿ ಇದಕ್ಕೆ ಕರಿಮತ್ತಿ ಸಾಗುವಿನ ಮುಂತಾದ ಮರಗಳ ಬಳಕೆಯಾಗುತ್ತವೆ.

ಭರ್ಜಿಗಳಲ್ಲಿ ಇನ್ನೂ ಕೆಲವು ಪ್ರಕಾರಗಳಿರುತ್ತವೆ. ಸಣ್ಣ ಗಾತ್ರದ ಇನ್ನೊಂದು ಭರ್ಜಿಯು ಸುಮಾರು ನಾಲ್ಕು ಅಡಿ ಉದ್ದವಿರುತ್ತದೆ. ಗಾತ್ರಕ್ಕೆ ಅನುಗುಣವಾಗಿ ಇದರ ಹಿಡಿಕೆ ಕೂಡ ಚಿಕ್ಕದೇ. ಸುತ್ತಳತೆ ಸುಮಾರು ಒಂದೂವರೆಯಿಂದ ಎರಡೂವರೇ ಇಂಚು ಅಷ್ಟೇ. ಅತಿ ಚಿಕ್ಕ ಗಾತ್ರದ ಭರ್ಜಿಗೆ 'ಕೈ ಭರ್ಜಿ' ಎಂದು ಹೆಸರು. ಇದು ಒಟ್ಟು ಸುಮಾರು ಒಂದಡಿಯಷ್ಟು ಉದ್ದವಿರುತ್ತದೆ.

ಇದರ ಕಬ್ಬಿಣದ ಭಾಗ ಮತ್ತು ಮರದ ಹಿಡಿಕೆ ಸಮ ಉದ್ದವಾಗಿರುತ್ತದೆ. ಕೈ ಭರ್ಜಿಯನ್ನು ಸೊಂಟದಲ್ಲಿ ಕೂಡ ಸಿಕ್ಕಿಸಿಕೊಳ್ಳಬಹುದು. ಸಣ್ಣ ಭರ್ಜಿ ಮತ್ತು ಕೈ ಭರ್ಜಿಗಳನ್ನು ಬಳಸಲು ಒಂದೇ ಕೈ


ಸಾಕು. ಓಡುತ್ತಿರುವ ಪ್ರಾಣಿಗಳಿಗೆ ಎಸೆದು ಕೊಲ್ಲುವುದಕ್ಕೆ ಅಥವಾ ಬೇಟೆಯಾಡುವುದಕ್ಕೆ ಸಣ್ಣ ಭರ್ಜಿಯು ಬಳಕೆಯಾಗುತ್ತದೆ. ಹಿಂದಿನ ಕಾಲದ ಗ್ರಾಮ ಜೀವನದಲ್ಲಿ ತಳವಾರರು ತಮ್ಮ ವೃತ್ತಿಯ ಸಂದರ್ಭದಲ್ಲಿ ಭರ್ಜಿಗಳನ್ನು ಹಿಡಿದು ತಿರುಗಾಡುತ್ತಿದ್ದರು.

೧೮. ಮೀನ ಕೂಳಿ



ಕಿರುಪ್ರಮಾಣದ ಮೀನು ಬೇಟೆಗೆ ಬಳಸುವ ಸಾಧನ. ಇದನ್ನು 'ಇರಿಗೂಣಿ' ಎಂದು ಕರೆಯುತ್ತಾರೆ. ಸುಮಾರು ಮೊಣಕಾಲೆತ್ತರ ನಿಂತ ನೀರಲ್ಲಿ ಇದನ್ನು ಫಕ್ಕನೆ ಮುಳುಗಿಸಲಾಗುತ್ತದೆ. ಇದರ ತಳಭಾಗವು ಸುಮಾರು ಒಂದೂವರೆ ಅಡಿ ವ್ಯಾಸದ್ದಾಗಿದ್ದು, ಮೇಲ್ಭಾಗವು ಕಿರಿಯ ಗಾತ್ರದ್ದಾಗಿರುತ್ತದೆ. ಮೇಲ್ಭಾಗವು ಸುಮಾರು ಒಂಬತ್ತು ಅಥವಾ ಹತ್ತು ಇಂಚು ವ್ಯಾಸವಿದ್ದು, ಒಳಗೆ ಕೈ ತೂರಿಸಿ ಬಂಧಿತವಾದ ಮೀನನ್ನು ಹಿಡಿಯಲಾಗುತ್ತದೆ.

೧೯. ಮೀನಿನ ಗಾಳ




ಕೆರೆ, ಕಟ್ಟೆ, ನದಿ, ಸರೋವರಗಳಲ್ಲಿ ಮೀನು ಹಿಡಿಯಲು ಬಳಸುವ ಸಾಧನ. ಸುಮಾರು ಹತ್ತು ಮೀಟರ್ ಉದ್ದವಿರುವ ಗಟ್ಟಿ ದಾರವನ್ನು ಸುಮಾರು ಎರಡುವರೆ ಅಡಿ ಉದ್ದದ ಬಿದಿರಿನ ಕೋಲಿಗೆ ಕಟ್ಟುತ್ತಾರೆ. ದಾರದ ತುದಿಗೆ ಉಕ್ಕಿನ ಕೊಂಡಿಯನ್ನು(ಗಾಳ) ಕಟ್ಟುತ್ತಾರೆ. ಈ ಕೊಂಡಿಯ ಮುಂದಿನ ತುದಿಯು ಚೂಪಾಗಿದೆ. ಇದಕ್ಕೆ ಎರೆಹುಳು, ಪುಟ್ಟಮೀನು, ಕರಿದ ತಿಂಡಿಗಳು ಮುಂತಾದ ಎರೆಗಳನ್ನು ಸಿಕ್ಕಿಸಿ ನಂತರ ಕೊಕ್ಕೆಸಮೇತ ದಾರವನ್ನು ನೀರಿನಲ್ಲಿ ಬಿಡುತ್ತಾರೆ. ದಾರದ ಅರ್ಧಭಾಗಕ್ಕೆ ಬೆಂಡಿನ ತುಂಡೊಂದನ್ನು ಕಟ್ಟಿರುತ್ತಾರೆ. ಎರೆಯನ್ನು ತಿನ್ನಲು ಬಾಯಿಹಾಕಿದಾಗ ಮೀನು ಗಾಳದಲ್ಲಿ ಸಿಕ್ಕಿಕೊಳ್ಳುತ್ತದೆ. ಮೀನು ಗಾಳಕ್ಕೆ ಸಿಕ್ಕಿದಾಗ ಬೆಂಡು ಮುಳುಗಿಹೋಗುತ್ತದೆ. ಆಗ ಗಾಳವನ್ನು ಮೇಲಕ್ಕೆ ಎತ್ತುತ್ತಾರೆ. ಈ ಗಾಳವನ್ನು ಮೀನುಗಾರರು ಬಳಸುತ್ತಾರೆ. ಹಾಗೂ ಹವ್ಯಾಸಿ ಮೀನು ಬೇಟೆಗಾರರು ಬಳಸುತ್ತಾರೆ.

೧೯. ಮೀನು ಬುಟ್ಟಿ



ನಿಂತನೀರಲ್ಲಿ ಮೀನು, ಏಡಿ ಮುಂತಾದುವನ್ನು ಹಿಡಿಯಲು ಬಳಸುವ ಸಾಮಾಗ್ರಿ. ಇದರ ಒಳಗೆ ಒಂದಿಷ್ಟು ಹಸಿ ಸೆಗಣಿ, ಆಹಾರ ಪದಾರ್ಥಗಳನ್ನು ತುಂಬಿ, ನಿಂತನೀರಿನಲ್ಲಿ ಇದನ್ನು ಮುಳುಗಿಸಿಡುತ್ತಾರೆ. ಸಾಮಾನ್ಯವಾಗಿ ಇದನ್ನು ಸಾಯಂಕಾಲ ನೀರಲ್ಲಿ ಮುಳುಗಿಸಿಟ್ಟು ಮರುದಿನ ಮುಂಜಾನೆ ನೀರಿನಿಂದ ಎತ್ತುವುದು ರೂಢಿ. ಆಗ ಇದರೊಳಗಿನ ಆಹಾರವನ್ನು ತಿನ್ನಲು ಬಂದ ಮೀನು ಏಡಿಗಳು ಅದರಲ್ಲಿ ಸಿಕ್ಕಿಹಾಕಿಕೊಂಡಿರುವುದು ಕಾಣುತ್ತದೆ. ಏಕೆಂದರೆ ಇದನ್ನು ನೀರಿನಲ್ಲಿ ಅಡ್ಡ ಮಲಗಿಸಿ ಇರಿಸಿದಾಗ ಅದರ ತಳದಲ್ಲಿ ಮೀನು ಏಡಿಗಳು ಒಳಪ್ರವೇಶಿಸಲು ಅನುಕೂಲವಾಗುವಂತೆ ಒಂದು ರಚನೆಯಿದ್ದು, ಅದರ ಮೂಲಕ ಒಳಗೆ ಪ್ರವೇಶಿಸಿದ ಮೀನು ಏಡಿಗಳು ಅದೇ ದಾರಿಯಲ್ಲಿ ಮರಳಬಾರದಂತೆ ರಚನೆಯ ತುದಿಯಲ್ಲಿ ಚೂಪಾದ ಎಂಟು-ಹತ್ತು ಉಲಿಬರಲು(ಕಡ್ಡಿ)ಗಳು ಒಂದೆಡೆ ಸೇರಿಕೊಳ್ಳುತ್ತವೆ. ನೀರಿನಲ್ಲಿ ಈ ಬುಟ್ಟಿಯನ್ನು ಅತ್ತಿತ್ತ ಸರಿಯದಂತೆ ತಡೆದಿಡಲು ಒಂದು ಕೋಲನ್ನು ಇದಕ್ಕೆ ಕಟ್ಟಿ ಕೋಲಿನ ತುದಿಯನ್ನು ಕೆಸರಲ್ಲಿ ಭದ್ರವಾಗಿ ನಾಟಲಾಗುತ್ತದೆ ಮತ್ತು ಬುಟ್ಟಿಯು ಎಲ್ಲಿದೆಯೆಂದು ಗುರುತು ಹಿಡಿಯಲು ಕೂಡ ಈ ಕೋಲು ಸಹಾಯಕವಾಗುತ್ತದೆ. ಇತ್ತೀಚೆಗೆ ಕೃಷಿ ಹೊಂಡಗಳು ಮುಚ್ಚುಗಡೆಯಾಗುತ್ತಿರುವುದರಿಂದ ಈ ತರಹದ ಮೀನುಗಾರಿಕೆ ಕೂಡ ಕಡಿಮೆಯಾಗುತ್ತಿದೆ.

೨೦. ರಂಪಿಗೆ




"ಪಾದರಕ್ಷೆಗಳನ್ನು ತಯಾರಿಸುವಾಗ ಚರ್ಮ, ದಾರ ಇತ್ಯಾದಿಗಳನ್ನು ಕತ್ತರಿಸಿಕೊಳ್ಳಲು ಬಳಸುವ ಉಪಕರಣ. ಇದು ತೆಳುವಾದ ತಗಡಿನಿಂದ ನಿರ್ಮಾಣವಾಗಿದ್ದು ಇದರ ಅಲಗು ಅರ್ಧ ಚಂದ್ರಾಕಾರದಲ್ಲಿರುತ್ತದೆ. ಇದನ್ನು ಹಿಡಿದುಕೊಳ್ಳಲು ಮೇಲ್ಭಾಗದಲ್ಲಿ ಒಂದು ಹಿಡಿ ಇರುತ್ತದೆ. ಈ ಹಿಡಿಯು ಅಲಗಿನ ತಗಡಿನ ಭಾಗವೇ ಆಗಿರುತ್ತದೆ. ರಂಪಿಗೆಗಳ ಗಾತ್ರದಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸವಿರುತ್ತದೆ. ಇದು





ತುಂಬಾ ಹರಿತವಾಗಿರುತ್ತದೆ. ಪಾದರಕ್ಷೆಗಳು ಕಾರ್ಖಾನೆಗಳಲ್ಲಿ ತಯಾರಾಗುತ್ತಿರುವ ಇಂದಿನ ದಿನಗಳಲ್ಲಿ ಸಮಗಾರರ ರಂಪಿಗೆಯು ನಿಧಾನವಾಗಿ ಮರೆಯಾಗುತ್ತಿದೆ".[೨]

೨೮. ಲಗಾಮು



ಕುದುರೆಗಳನ್ನು ನಿಯಂತ್ರಿಸಲು ಬಳಸುವ ಸಾಧನ. ಇದು ಸುಮಾರು ಆರರಿಂದ ಏಳು ಅಡಿ ಉದ್ದವಿದ್ದು, ಸುಮಾರು ಅರ್ಧದ ಬಳಿಕ ಎರಡಾಗಿ ವಿಭಾಗಗೊಂಡು ತುದಿಯಲ್ಲಿ ಪರಸ್ಪರ ಸಿಕ್ಕಿಸಿರುವ ಎರಡು ಕಬ್ಬಿಣದ ಪಟ್ಟದಿಂಡುಗಳನ್ನು ಹೊಂದಿರುತ್ತದೆ. ಈ ಕಬ್ಬಿಣದ ರಚನೆಗಳು ಸುಮಾರು ಎರಡು ಇಂಚು ಉದ್ದವಿರುತ್ತವೆ. ಇವುಗಳ ಇನ್ನೆರಡು ತುದಿಗೆ ಸುಮಾರು ಎರಡು ಇಂಚು ವ್ಯಾಸದ ಉಂಗುರು(ರಿಂಗ್)ಗಳನ್ನು ಜೋಡಿಸಿರುತ್ತಾರೆ. ಕಬ್ಬಿಣದ ಕಿರುದಿಂಡುಗಳು ಕುದುರೆಯ ಬಾಯೊಳಗೆ ಹೋಗಿರುತ್ತವೆ. ಲಗಾಮಿನ ಹಗ್ಗಗಳನ್ನು ಚರ್ಮದ ಮಿಣಿಗಳಿಂದಲೂ ನೂಲನ್ನು ಚೆನ್ನಾಗಿ ಹೆಣೆದ ಹಗ್ಗಗಳಿಂದಲೂ ರಚಿಸುತ್ತಾರೆ. ಬಾಯೊಳಗೆ ಸಲಕರಣೆ ಅಳವಡಿಸಿ ಪ್ರಾಣಿಗಳನ್ನು ನಿಯಂತ್ರಿಸಲು ಬಳಸುವ ಏಕೈಕ ಸಾಧನ ಲಗಾಮು ಮಾತ್ರ.


ಅಡಿ ಟಿಪ್ಪಣಿಗಳು

೧. ರಮೇಶ ಸಾ. ಶಿ., ಜಾನಪದ ವಸ್ತುಕೋಶ, ಕನ್ನಡ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ೨೦೦೩, ಪು -೧೩೧

೨. ಅದೇ, ಪು -೧೩೫

ಧಾರ್ಮಿಕ ಪರಿಕರಗಳು





ಅಧ್ಯಾಯ ೩.

ಧಾರ್ಮಿಕ ಪರಿಕರಗಳು

ಧಾರ್ಮಿಕ ಆಚರಣೆಗಳು ಜನಪದರ ಜೀವನದ ಬಹುಮುಖ್ಯ ಲಕ್ಷಣ ಎನ್ನಬಹುದು ತಮ್ಮ ಅದಿದೈವಕ್ಕೆ ಸಂಬಂಧಿಸಿದಂತೆ ಮಾಡುವ ಪೂಜೆ-ಪುನಸ್ಕಾರ, ಹಬ್ಬ-ಹರಿದಿನ, ಜಾತ್ರೆ ಇಂತಹ ವಿಶೇಷ ಸಂದರ್ಭಗಳಲ್ಲಿ ಬಳಸುವ ವಸ್ತುಗಳು ಆಯಾ ಜನಸಮುದಾಯದ ಧಾರ್ಮಿಕ ನಂಬಿಕೆಗಳನ್ನು ಗುರುತಿಸಲು ನೆರವಾಗುತ್ತವೆ. ಪೂಜಾಪರಿಕರಗಳು ಮತ್ತು ಪೂಜೆಗೊಳ್ಳುವ ವಸ್ತುಗಳನ್ನು ಈ ವಿಭಾಗದಲ್ಲಿ ಅಡಕಗೊಳಿಸಿದೆ. ಕಿಶೋರಿಯರಿಗಷ್ಟೆ ಸೀಮಿತವಾಗಿರುವ ಅಲ್ಲೆಪಿಲ್ಲೆ ಗಿಂಡಿ, ಗುಳ್ಳಪ್ಪನ ಬಾಗಿಲುಗಳಿಂದ ತೊಡಗಿ ಮನೆಗಳಲ್ಲಿ ಬಳಕೆಯಾಗುವ ತೂಗುದೀಪ, ಚೊಂಗ್ಯನ ಮಣಿ, ಕುಂಕುಮದ ಭರಣಿಗಳು, ಸಮಷ್ಟಿ ಬಳಕೆಗೆ ಒದಗುವ ವಿಭೂತಿ ಕರಡಿಗೆ, ಕೂರಿಗೆಪ್ಪ, ಎಳೆಗೌರಮ್ಮನ ಮೂರ್ತಿ, ಹರಕೆ ತೊಟ್ಟಿಲು ಮುಂತಾದವು ಒಳಗೊಂಡು ಯೋಗದಂಡ, ದೋಣಿ, ಗುಗ್ಗಳಕೊಡ, ಶಸ್ತ್ರ ಮುಂತಾದ ವಿಶಿಷ್ಟ ಧಾರ್ಮಿಕ ಗತಿ ಸೂಚಕಗಳಾದ ವಸ್ತುಗಳು ಜನಪದರ ಮನೋವೈಜ್ಞಾನಿಕ ಬದುಕನ್ನು ಅರ್ಥಮಾಡಿಕೊಳ್ಳಲು ಅತ್ಯಗತ್ಯವಾಗಿವೆ. ಈ ನಿಟ್ಟಿನಲ್ಲಿ ಮಂಡ್ಯ ಜಿಲ್ಲೆಯ ಧಾರ್ಮಿಕ ಪರಿಕರಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸುತ್ತಿದ್ದೇನೆ.


೧. ಗಂಟೆ



ಸಾಮಾನ್ಯವಾಗಿ ಲೋಹದಿಂದ ನಿರ್ಮಿತವಾಗುವ ಅಳ್ಳಕವಾದ ಒಂದು ಕೊಳವೆ. ಒಳಭಾಗದುದ್ದಕ್ಕೂ ನೇತಾಡುವಂತೆ ಜೋಡಿಸಿದ ನಾಲಗೆ ಅಲಗಾಡುವುದರಿಂದ ಅಥವಾ ಪ್ರತ್ಯೇಕವಾದ ಸುತ್ತಿಗೆಯಿಂದ ಬಾರಿಸಿದಾಗ ಸದ್ದು ಮಾಡುತ್ತದೆ. ಇದನ್ನು ಕಂಚು ಮತ್ತು ಕಬ್ಬಿಣದಿಂದ ತಯಾರಿಸಲಾಗಿರುತ್ತದೆ. ಭಕ್ತರು ದೇವಸ್ಥಾನಕ್ಕೆ ಹೋದಾಗ ಅಲ್ಲಿ ನೇತು ಹಾಕಿರುವ ಗಂಟೆಯನ್ನು ಬಾರಿಸಿಯೇ ಒಳಗೆ ಹೋಗುತ್ತಾರೆ. ದೇವರಿಗೆ ಮಹಾ ಮಂಗಳಾರತಿಯನ್ನು ಸಲ್ಲಿಸುವಾಗ ಈ ಗಂಟೆಯನ್ನು ಜೋರಾಗಿ ಬಾರಿಸುತ್ತಾರೆ. ಏಕೆಂದರೆ ದೇವರಿಗೆ ಪೂಜೆ ನಡೆಯುತ್ತಿರುವುದು ಎಲ್ಲರಿಗೂ ತಿಳಿಯಲೆಂದು. ಈ ಗಂಟೆಗಳು ಗಾತ್ರದಲ್ಲಿ ವ್ಯತ್ಯಾಸದಿಂದ ಕೂಡಿರುತ್ತದೆ. ಸಾಮಾನ್ಯವಾಗಿ ಮನೆಯಲ್ಲಿ ಪೂಜೆ ಮಾಡುವಾಗ ಚಿಕ್ಕ-ಚಿಕ್ಕ ಗಂಟೆಗಳನ್ನು ಬಳಸುತ್ತಾರೆ. ದೊಡ್ಡ ದೊಡ್ಡ ಗಾತ್ರದ ಗಂಟೆಗಳನ್ನು ದೇವಸ್ಥಾನಗಳ ಮುಂಭಾಗದಲ್ಲಿ ನೇತು ಹಾಕಿರುತ್ತಾರೆ. ಹೀಗೆ ಗಂಟೆಯು ದೇವರಿಗೆ ಪೂಜೆ ಸಲ್ಲಿಸುವಾಗ ತನ್ನದೇಯಾದ ಮುಖ್ಯ ಪಾತ್ರವನ್ನು ವಹಿಸುತ್ತದೆ.




೨. ಜಾಗಟೆ



ತಟ್ಟೆಯಾಕಾರದ ಒಂದು ಲೋಹ ವಾದ್ಯ. ಪಂಚಮವಾದ್ಯಗಳಲ್ಲಿ ಇದೂ ಒಂದು. ಧಾರ್ಮಿಕ ಭಿಕ್ಷೆ ಎತ್ತುವ ದಾಸಯ್ಯನವರುಗಳ ಬಳಿ ಇದು ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ. ಇದನ್ನು 'ಜೇಗಟೆ, ಜೇಗಂಟೆ, ಜಗಟೆ' ಎಂದು ಸಹ ಕರೆಯುವರು. ಇದನ್ನು ಸಾಮಾನ್ಯವಾಗಿ ಕಂಚಿನಿಂದಲ್ಲೇ ಮಾಡಲಾಗಿರುತ್ತದೆ. ಈ ಜಾಗಟೆಯ ಮೇಲ್ಭಾಗದಲ್ಲಿ ಒಂದು ತೂತಿದ್ದು, ಇದಕ್ಕೆ ದಾರವನ್ನು ಸೇರಿಸಿ ಅದಕ್ಕೆ ದಪ್ಪನೆಯ ಮರದ ದಿಂಡೊಂದನ್ನು ತಗುಲಿಸಿರಲಾಗುತ್ತದೆ. ಈ ದಿಂಡಿನಿಂದ ಬಟ್ಟಲಿಗೆ ಹೊಡೆದಾಗ 'ಢಣ್ ಢಣ್' ಎಂಬ ಶಬ್ಧ ಹೊಮ್ಮುತ್ತದೆ. ಸ್ವಲ್ಪ ಹೊತ್ತಿನವರೆಗೆ ಅದೇ ಸದ್ದು ಅನುಕರಣಗೊಳ್ಳುತ್ತದೆ. ದೇವರ ಗುಡ್ಡರು ಈ ಜಾಗಟೆಯನ್ನು ಬಾರಿಸಿಕೊಂಡು ಮನೆಮನೆಗೆ ಹೋಗಿ ದೇವರ ಹೆಸರಿನಲ್ಲಿ ಭಿಕ್ಷೆ ಬೇಡುತ್ತಾರೆ. ಜನರು ಇವರು ದೇವರ ಶಿಷ್ಯರೆಂದು ಗೌರವಿಸಿ ಕಾಸು ಹಾಗೂ ದವಸ ಧಾನ್ಯಗಳನ್ನು ನೀಡುತ್ತಾರೆ ಹೀಗೆ ಜಾಗಟೆಯು ಒಂದು ಮುಖ್ಯ ಪೂಜಾ ಸಾಮಾಗ್ರಿಯಾಗಿದೆ.

೩. ಶಂಖ



ಶಂಖ ಪುರಾಣ ಪ್ರಸಿದ್ಧವಾದ ಸುಷಿರ ವಾದ್ಯ. ಶ್ರೀಕೃಷ್ಣನು 'ಪಾಂಚಜನ್ಯ'ವನ್ನು ಊದಿ ಕೌರವ ಸೇನೆಗೆ ದಿಗಿಲುಂಟು ಮಾಡಿದನೆಂಬ ವಿಷಯ ಮಹಾಭಾರತದಲ್ಲಿ ಬರುತ್ತದೆ. ಶಂಖಾಸುರನನ್ನು ವಧಿಸಿ ಮಹಾವಿಷ್ಣು ಅವನಿಗೆ ತನ್ನ ಅಂಗೈಯಲ್ಲಿ ಸ್ಥಾನ ನೀಡಿದನಂತೆ. ಸಾಮವೇದದಲ್ಲಿಯೇ ಇದರ ಉಲ್ಲೇಖವಿದೆಯೆಂದು ಹೇಳಲಾಗುತ್ತದೆ. ಪಂಪ ಹೇಳಿರುವ ರಣವಾದ್ಯಗಳಲ್ಲಿ ಶಂಖವೂ ಒಂದು. ಸಮುದ್ರದಲ್ಲಿ ನೈಸರ್ಗಿಕವಾಗಿ ದೊರೆಯುವ ಶಂಖವನ್ನು ತಂದು, ಶಂಖದ ಸುರುಳಿಯ ಮಧ್ಯ ಇರುವ ರಂಧ್ರದ ಮೂಲಕ ಗಾಳಿ ಊದಿ ಧ್ವನಿ ಹೊರಡಿಸುತ್ತಾರೆ. ಊದುವ ರಂಧ್ರದ ಸುತ್ತ ಲೋಹದ ಮುಚ್ಚಳಿಕೆ ಹಾಕಿ ಅಲಂಕರಿಸುವುದೂ ಉಂಟು. ದೇವರಿಗೆ ಪೂಜೆ ಮಾಡುವಾಗ ಶಂಖವನ್ನು ಊದುತ್ತಾರೆ.




೪. ಕಂಸಾಳೆ



ಇದು ಕೈಯಿಂದ ಬಡಿಯುವ ಒಂದು ಲೋಹವಾಗಿದೆ. ವೃತ್ತಿಗಾಯಕರಾದ ದೇವರ ಗುಡ್ಡರು ಅಥವಾ ಮಹದೇಶ್ವರನ ಕಥೆ ಹಾಡುವಾಗ ಬಳಸುತ್ತಾರೆ. ಇದು ಸಂಸ್ಕೃತದ ಕಾಂಸ್ಯತಾಲದಿಂದ ಬಂದ ಶಬ್ಧ. ಗಾಯಕರ ಎಡಗೈಯಲ್ಲಿ ಭಿಕ್ಷಾ ಪಾತ್ರೆಯಂತಿರುವ, ಮಧ್ಯ ದಾರದ ಕುಚ್ಚು ಕಟ್ಟಿದ, ಅಂಗೈ ಅಗಲದ ಮಿಶ್ರ ಲೋಹದ ಒಂದು ಬಟ್ಟಲಿರುತ್ತದೆ. ಬಲಗೈಯಲ್ಲಿ ಮಟ್ಟಸವಾದ ತಾಳವಿರುತ್ತದೆ. ಮುಚ್ಚಳದ ನಡುವಿನ ಹೊರ ಭಾಗ ಉಬ್ಬಿರುತ್ತದೆ. ಆ ಉಬ್ಬಿನ ರಂಧ್ರದಿಂದ ಬಿಗಿದ ನೀಳವಾದ ದಾರ ಗೊಂಡೆಗಳಿಂದ ಅಲಂಕೃತವಾಗಿ ಬಲಗೈ ಮೇಲಿಂದ ಇಳಿಬಿದ್ದಿರುತ್ತದೆ. ತಾಳದಂತೆ ಅವೆರಡನ್ನು ಕುಟ್ಟಿದಾಗ ಉಂಟಾಗುವ ನಾದದ ಹಿನ್ನಲೆಯಲ್ಲಿ ಮಾದೇಶ್ವರನ ಮಹಿಮೆ ಹಾಡಲಾಗುತ್ತದೆ.

೫. ಮಣ್ಣಿನ ದೀಪ



ಮಣ್ಣಿನಿಂದ ಮಾಡಿದ ಒಂದು ಚಿಕ್ಕ ಬಟ್ಟಲಿನ ಆಕಾರದ ದೀಪ. ಇದರ ಸುತ್ತ ಗುಂಡಾಗಿದ್ದು, ಒಂದು ಕಡೆ ಇಂಗ್ಲೀಷನ 'ವಿ' ಆಕಾರದ ತುದಿಯನ್ನು ಮಾಡಲಾಗಿರುತ್ತದೆ. ಇದಕ್ಕೆ ಎಣ್ಣೆಯನ್ನು ಹಾಗೂ ಬತ್ತಿಯನ್ನು ಹಾಕಿ ಹೊತ್ತಿಸಿ ದೇವರ ಮನೆಯಲ್ಲಿ ಇಡುತ್ತಾರೆ. ಅಲ್ಲದೆ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮನೆಯ ಮಣ್ಣಿನ ದೀಪವನ್ನು ಹಚ್ಚುತ್ತಾರೆ.





೬.ಅಕ್ಷತೆ ಬಟ್ಟಲು



ಅಕ್ಷತೆ ಬಟ್ಟಲನ್ನು ಮುಖ್ಯವಾಗಿ ಪೂಜೆ ಮಾಡುವ ಸಂದರ್ಭಗಳಲ್ಲಿ ಅರಿಶಿಣ ಕುಂಕುಮ, ಅಕ್ಷತೆ ಕಾಳನ್ನು ಕೊಡಲು ಬಳಸುತ್ತಾರೆ. ಈ ಅಕ್ಷತೆ ಬಟ್ಟಲನ್ನು ಜನಪದರು ಮರದಿಂದ ಅಥವಾ ಅಲ್ಯೂಮಿನಿಯಂನಿಂದ ತಯಾರು ಮಾಡಿಕೊಂಡಿದ್ದರು. ಮುಖ್ಯವಾಗಿ ನಾಲ್ಕು ಬಟ್ಟಲುಗಳನ್ನು ಚೌಕಾಕಾರದಲ್ಲಿ ಜೋಡಿಸಿರಲಾಗುತ್ತದೆ. ಈ ನಾಲ್ಕು ಬಟ್ಟಲಿಗು ಸೇರಿಸಿ ಒಂದು ಹಿಡಿಕೆಯನ್ನು ಜೋಡಿಸಿರಲಾಗುತ್ತದೆ. ಈ ಅಕ್ಷತೆ ಬಟ್ಟಲಿನಲ್ಲಿ ಅರಿಶಿಣ, ಕುಂಕುಮ, ಅರಿಶಿಣದ ಎಳೆ (ದಾರ) ಹಾಗೂ ಅರಿಶಿಣ ಮಿಶ್ರಿತ ಅಕ್ಕಿಯನ್ನು ಹಾಕಲಾಗಿರುತ್ತದೆ. ಮನೆಗೆ ಬಂದ ಮುತ್ತೈದೆಯರಿಗೆ ಅಕ್ಷತೆಯನ್ನು ಕೊಟ್ಟು ಕಳುಹಿಸುವುದು ಜನಪದರ ಸಂಸ್ಕೃತಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಇದನ್ನು ಉಕ್ಕು, ಬೆಳ್ಳಿ, ಚಿನ್ನ ಇತ್ಯಾದಿ ಮುಂತಾದ ಲೋಹಗಳಿಂದ ತಯಾರಿಸಲಾಗುತ್ತಿದೆ.

೭.ದೀಪಾಲೆ ಕಂಬ



ದೀಪಾಲೆ ಕಂಬವನ್ನು ಕಂಚಿನಿಂದ ತಯಾರಿಸಲಾಗಿದ್ದು, ಇದು ಸುಮಾರು ಎರಡರಿಂದ ಮೂರು ಅಡಿ ಎತ್ತರವಿರುತ್ತದೆ. ಇದರ ತಳ ಭಾಗವು ಬಟ್ಟಲಿ ಆಕಾರದಲ್ಲಿದ್ದು ನೆಲದ ಮೇಲೆ ಮಟ್ಟಸವಾಗಿ ಕೂರುವಂತಿರುತ್ತದೆ. ಮೇಲ್ಭಾಗವು ಸಹ ಒಂದು ಬಟ್ಟಲಿದ್ದು ಅದಕ್ಕೆ ಐದು ಕಡೆ ಅಥವಾ ಒಂಬತ್ತು ಕಡೆ 'ವಿ' ಆಕಾರದ ತುದಿಯನ್ನು ಮಾಡಲಾಗಿದ್ದು, ಅದರ ಮಧ್ಯದಲ್ಲಿ ನವಿಲಿನ ಅಥವಾ ಇನ್ನಾವುದೇ ಅಂದವಾದ ಚಿತ್ರವಿರುತ್ತದೆ. ಇದಕ್ಕೆ ಎಣ್ಣೆಯನ್ನು ಹಾಕಿ ಬತ್ತಿಯನ್ನು 'ವಿ' ಆಕಾರದ ತುದಿಗೆ ಇಟ್ಟು ಬತ್ತಿಯನ್ನು ಹೊತ್ತಿಸಿದಾಗ ಅದರ ಬೆಳಕು ಪ್ರಕಾಶಮಾನವಾಗಿ ಕಾಣಿಸುತ್ತದೆ. ದೀಪಾಲೆ ಕಂಬಗಳು ಪ್ರಾದೇಶಿಕ ಭಿನ್ನತೆಯಿಂದಲೂ ಸಹ ಕೂಡಿರುತ್ತದೆ. ಸುಮಾರು ಒಂದು ಅಡಿಯಿಂದಲೂ ಹಿಡಿದು ಐದು ಅಡಿಯವರೆಗೂ ಈ ದೀಪಾಲೆ ಕಂಬಗಳು ಕಂಡು ಬರುತ್ತದೆ. ಕೆಲವು ದೇವಸ್ಥಾನಗಳಲ್ಲಿ ತೂಗು ದೀಪಗಳನ್ನು ನೋಡಬಹುದು.

೮. ಆರತಿ ತಟ್ಟೆ




ಆರತಿ ತಟ್ಟೆಯನ್ನು ಪೂಜೆ ಮಾಡುವಾಗ ಮುಖ್ಯವಾಗಿ ಬಳಸುತ್ತಾರೆ. ಇದನ್ನು ಕಂಚು ಅಥವಾ ತಾಮ್ರದಿಂದ ಮಾಡಲಾಗಿರುತ್ತದೆ. ಈ ತಟ್ಟೆಯು ಅಂದವಾಗಿ ಕಾಣಲು ಸುಂದರವಾದ ಚಿತ್ರಗಳ ವಿನ್ಯಾಸವನ್ನು ಮಾಡಲಾಗಿರುತ್ತದೆ. ಇದರಲ್ಲಿ ಹೂವು, ಅರಿಶಿಣ, ಕುಂಕುಮ ಹಾಗೂ ದೀಪವನ್ನು ಹಚ್ಚಿಟ್ಟು ದೇವರಿಗೆ ಆರತಿ ಬೆಳಗಿ ಎಲ್ಲಾ ಭಕ್ತರಿಗೂ ಈ ಆರತಿ ತಟ್ಟೆಯ ಮೂಲಕ ಮಂಗಳಾರತಿಯನ್ನು ಕೊಡುತ್ತಾರೆ.

೯. ಕಳಸ



"ಕಲಶ ಸಂಸ್ಕೃತ ಪದ ; ಕಲಶ > ಕಳಸ (ಲ>ಳ/ಶ>ಸ); ಕಲಸ. ಕಳಶ, ಕಳ್ಸ ರೂಪಗಳೂ ಚಾಲ್ತಿ ; 'ಕಳಸ' ಉಚ್ಚಾರಣಾ ಸೌಲಭ್ಯ ಮತ್ತು ಸಂಕ್ಷಿಪ್ತ ಪದ ರೂಪದಿಂದ 'ಕಳ್ಸ' ಆಗಿದೆ."[೧] ದೇವರ ಮುಂದೆ ಇಡುವ ಕಂಚಿನ ವಸ್ತು ಇದಾಗಿದೆ. ದೇವರಿಗೆ ಪೂಜೆಯನ್ನು ಮಾಡುವಾಗ ಕಳಸವನ್ನು ಇಟ್ಟು ಪೂಜೆ ಮಾಡುವುದು ನಮ್ಮ ಭಾರತೀಯ ಸಂಸ್ಕೃತಿ. ಇದು ಜನಪದರಿಂದ ಬೆಳೆದು ಬಂದ ಸಂಸ್ಕೃತಿ. ಈ ಕಳಸಕ್ಕೆ ನೀರು ಅಥವಾ ಅಕ್ಕಿಯನ್ನು ತುಂಬಿ ಅದರ ಬಾಯಿಯ ಸುತ್ತ ವೀಳ್ಯದಲೆಯನ್ನು ಹಾಕಿ ಅದಕ್ಕೆ ಹೂವು ಅಥವಾ ತೆಂಗಿನ ಕಾಯಿಯನ್ನು ಇಟ್ಟು ಅರಿಶಿಣ, ಕುಂಕುಮವನ್ನು ಹಾಕಿ ದೇವರಿಗೆ ಪೂಜೆ ಸಲ್ಲಿಸುತ್ತಾರೆ. ಇದನ್ನು ಗಂಗೆ ಪೂಜೆ ಎಂದುಕೊಳ್ಳಬಹುದಾಗಿದೆ.





೧೦. ದೂಪದ ಕುಂಡ



ಇದನ್ನು ಮಣ್ಣಿನಿಂದ ಅಥವಾ ಕಂಚಿನ ಲೋಹದಿಂದ ಮಾಡಲಾಗಿರುತ್ತದೆ. ಮೇಲ್ಭಾಗದಲ್ಲಿ ಒಂದು ದೊಡ್ಡ ಬಟ್ಟಲಿದ್ದು, ಕೆಳಗೆ ಒಂದು ಉದ್ದನೆಯ ಚಿಕ್ಕದಾದ ಬಟ್ಟಲು ಇರುತ್ತದೆ. ಕೆಲವೊಂದು ದೂಪದ ಕುಂಡವನ್ನು ಹಿಡಿದುಕೊಳ್ಳಲು ಮಣ್ಣಿನ ಅಥವಾ ಕಂಚಿನ ಹಿಡಿಯನ್ನೂ ಸಹ ಮಾಡಲಾಗಿರುತ್ತದೆ. ಈ ದೂಪದ ಕುಂಡಕ್ಕೆ ಬೆಂಕಿ ಕೆಂಡವನ್ನು ಹಾಕಿ ಅದರ ಮೇಲೆ ದೂಪ ಹಾಕಿದಾಗ, ಅದು ಕೆಂಡದಲ್ಲಿ ಕರಗಿ ಸುವಾಸನೆಯನ್ನು ಬೀರುತ್ತದೆ. ಇದನ್ನು ದೇವರಿಗೆ ಪೂಜೆ ಮಾಡುವಾಗ ಬಳಸುತ್ತಾರೆ.

೧೧. ಊದುಬತ್ತಿ




ಇದನ್ನು ಊದುಬತ್ತಿ, ಗಂಧದಕಡ್ಡಿ ಮುಂತಾದ ಹೆಸರುಗಳಿಂದ ಕರೆಯುವರು. ಇದನ್ನು ಪೂಜೆ ಮಾಡುವ ಸಂದರ್ಭಗಳಲ್ಲಿ ಬಳಸುತ್ತಾರೆ. ಇದು ಸುವಾಸನೆ ಭರಿತ ಹೊಗೆ ಹೊಮ್ಮಿಸುವ ಅಗರು ಲೇಪಿತ ಕಡ್ಡಿ. ಇದು ಊದು ಲೇಪಿತ ಕಟ್ಟಿಯಾದ್ದರಿಂದ ಊದುಕಡ್ಡಿ ಎಂದು ಬತ್ತಿಯಂತೆ ಉರಿಯುದರಿಂದ ಊದುಬತ್ತಿ ಎಂದು ಕರೆಯುವರು.





೧೨. ಊದುಬತ್ತಿ ಕುಂಡ

ದೇವರ ಪೂಜೆ ಮಾಡುವಾಗ ಗಂಧದ ಕಡ್ಡಿಯನ್ನು ಸಿಕ್ಕಿಸುವ ವಸ್ತು. ಇದನ್ನು ಉಕ್ಕಿನಿಂದ ಮಾಡಿರುತ್ತಾರೆ. ಕೆಳಗಡೆ ಮಟ್ಟಸವಾಗಿ ಕೂರುವ ಒಂದು ಚಿಕ್ಕ ಬಟ್ಟಲಿದ್ದು, ಮೇಲೆ ಅದಕ್ಕೆ ಅಂಟಿಕೊಂಡಂತೆ ಒಂದು ಗೋಪುರದಾಕಾರದ ಕುಂಡವಿದ್ದು, ಅದಕ್ಕೆ ಚಿಕ್ಕ ಚಿಕ್ಕ ರಂಧ್ರಗಳಿರುತ್ತವೆ. ಅದಕ್ಕೆ ಗಂಧದ ಕಡ್ಡಿಯನ್ನು ಹಚ್ಚಿ ಸಿಕ್ಕಿಸಲಾಗುತ್ತದೆ.

೧೩. ಕವಡೆ



ಜೋತಿಷಿಗಳು ಶಾಸ್ತ್ರ ಹೇಳುವುದಕ್ಕೆ ಬಳಕೆ ಮಾಡುವ ಕಠಿಣವಾದ ಚಿಪ್ಪುಗಳು. ಮೃದು ಶರೀರಗಳಾದ ಒಂದು ಬಗೆಯ ಸಮುದ್ರವಾಸಿ ಪ್ರಾಣಿಗಳ ಮೇಲ್ಚಿಪ್ಪುಗಳಿವು. ಶಾಂತ ಸಾಗರ ಮತ್ತು ಹಿಂದೂ ಮಹಾಸಾಗರಗಳಲ್ಲಿ ಈ ಪ್ರಾಣಿಗಳು ವಿಶೇಷವಾಗಿ ಕಂಡು ಬರುತ್ತದೆ. ಕವಡೆಗಳು ಲೋಕಪ್ರಸಿದ್ಧವಾದ ಮನೋಹರ ಚಿಪ್ಪುಗಳು. ಅನೇಕ ಬಣ್ಣಗಳಲ್ಲಿ, ಅನೇಕ ಗಾತ್ರಗಳಲ್ಲಿ ಇವು ಕಂಡು ಬರುತ್ತದೆ. ತಳಭಾಗದಲ್ಲಿ ನೆರಿಯಂಥ ಮತ್ತು ಮೇಲ್ಭಾಗದಲ್ಲಿ ಮಿರುಗುವ ನಯವಾದ ರಚನೆಯನ್ನು ಹೊಂದಿದೆ. ಶಕುನ ಭವಿಷ್ಯಗಳನ್ನು ತಿಳಿಯಲು ಬಳಸಿಕೊಂಡು ಹೇಳುವ ಶಾಸ್ತ್ರಕ್ಕೆ ಕವಡೆ ಶಾಸ್ತ್ರ ಎನ್ನುವರು. ಒಂದು ಗೊತ್ತಾದ ಜನಾಂಗದವರು ಈ ಶಾಸ್ತ್ರವನ್ನು ಹೇಳುವುದು ಹೆಚ್ಚು . ಅವರು ಒಂಬತ್ತು ಕವಡೆಗಳನ್ನು ಬಳಸಿಕೊಂಡು ಒಂದೊಂದಕ್ಕು ಒಂದೊಂದು ಗ್ರಹವನ್ನು ಆರೋಪಿಸಿ ಶಾಸ್ತ್ರ ಹೇಳುತ್ತಾರೆ. ಶಾಸ್ತ್ರ ಕೇಳಬಯಸುವ ವ್ಯಕ್ತಿ ದಕ್ಷಿಣೆ ಸಹಿತ ಎಲೆ ಅಡಿಕೆಯನ್ನು ಇಟ್ಟು ತನ್ನ ಮನೆದೇವರನ್ನು ಧ್ಯಾನಿಸಿಕೊಂಡು ಒಂಬತ್ತು ಕವಡೆಗಳನ್ನು ಕೈಯಿಂದ ಕುಲುಕಿ ನೆಲದ ಮೇಲೆ ಚೆಡುತ್ತಾನೆ. ಹೀಗೆ ಚೆದ್ದಾಗ ಕೆಲವು ಕವಡೆಗಳು ಮೇಲ್ಮುಖವಾಗಿಯೂ, ಇನ್ನೂ ಕೆಲವು ಕೆಳಮುಖವಾಗಿಯೂ ಚೀಳುತ್ತವೆ. ಮೇಲ್ಮುಖವಾಗಿ ಚಿದ್ದ ಕವಡೆಗಳನ್ನು ಲೆಕ್ಕ ಮಾಡಿಕೊಂಡು ಎಷ್ಟು ಕವಡೆಗಳು ಹಾಗೆ ಬಿದ್ದಿರುತ್ತವೋ ಆ ಸಂಖ್ಯೆಯ ಗ್ರಹದ ಫಲಾಫಲಗಳನ್ನು ತಿಳಿಸುತ್ತಾರೆ. ಗೊರವರು, ಲಂಬಾಣಿಗಳು ತಮ್ಮ ಬಟ್ಟೆಗಳನ್ನು ಕವಡೆಗಳಿಂದ









ಅಲಂಕರಿಸಿರುತ್ತಾರೆ. ಜೋತಿಷಿಗಳು ಶಾಸ್ತ್ರ ಕೇಳುವವರಿಂದ ಕವಡೆ ಹಿಡಿಸಿ ಬೆಸಸಂಖ್ಯೆ, ಸಮಸಂಖ್ಯೆಗಳನ್ನು ಆಧರಿಸಿ ಅವರ ಇಷ್ಟಾರ್ಥಗಳನ್ನು ಕುರಿತು ಹೇಳುತ್ತಾರೆ. ಹೀಗೆ ಕವಡೆಗಳನ್ನು ಪೂಜಾ ಸಾಮಾಗ್ರಿಯಾಗಿ ಬಳಸುತ್ತಾರೆ.

೧೪. ಕರಡಿಗೆ



ವೀರಶೈವರು ಇಷ್ಟಲಿಂಗವನ್ನು ಇಡುವ ಭರಣಿಗೆ ಈ ಹೆಸರಿದೆ. 'ಲಿಂಗಸಜ್ಜಿಗೆ' ಎಂದೂ ಕರೆಯುತ್ತಾರೆ. ಶಿವಾಲಯವೆಂದು ಇದನ್ನು ಭಾವಿಸಲಾಗಿದೆ. ಕರಡಿಗೆಯನ್ನು ಚಿನ್ನ, ಬೆಳ್ಳಿ, ಹಿತ್ತಾಳೆ, ತಾಮ್ರ ಮತ್ತು ಶ್ರೀಗಂಧದ ಮರ ಇವುಗಳಿಂದ ಮಾಡುತ್ತಾರೆ. ಕಂಚು, ಕಬ್ಬಿಣದಿಂದ ಮಾಡಬಾರದೆಂದು ನಿಷೇಧ ಉಂಟು. ನೂಲಿನ ಹಣಿಕೆಯ ಭರಣಿಗೆ ಕಾಂತಿಕೊಟ್ಟುಮಾಡಿರುವ ಹಿಂದಿನ ಕಾಲದ ಕರಡಿಗೆಗಳು ಇವೆ. ಕರಡಿಗೆಗೆ ದಾರವನ್ನು ಪೋಣಿಸಿಕೊಂಡು ವೀರಶೈವರು ಕತ್ತಿಗೆ ಧರಿಸುತ್ತಾರೆ. ಈ ದಾರ ರೇಷ್ಮೆ ಅಥವಾ ಹತ್ತಿ ನೂಲಿನದಾಗಿರುತ್ತದೆ. ಅದನ್ನು 'ಶಿವದಾರ, ಶಿವಸೂತ್ರ' ಎಂದು ಕರೆಯುತ್ತಾರೆ. ಕರಡಿಗೆಯು ಶಿಥಿಲವಾಗಬಾರದು, ಅದರ ದಾರ ಹರಿದು ಹೋಗಬಾರದು ಎಂಬ ನಂಬಿಕೆಗಳಿವೆ. 'ಶಿವಪೂಜೆಯಲ್ಲಿ ಕರಡಿಗೆ ಬಿಟ್ಟ ಹಾಗೆ' ಎಂಬ ಗಾದೆ ಶಿವಪೂಜೆಯಲ್ಲಿ ಕರಡಿಗೆಯ ಮಹತ್ವವನ್ನು ನಿರ್ದೇಶಿಸುತ್ತದೆ. ಈ ಗಾದೆ ಕೆಲವರ ಬಾಯಲ್ಲಿ ಶಿವಪೂಜೆಯಲ್ಲಿ ಕರಡಿ ಬಿಟ್ಟ ಹಾಗೆ ಎಂದು ಪರಿವರ್ತಿತವಾಗಿದೆ. ಕರಡಿಗೆಯನ್ನು ಶಿವ ಭಕ್ತರೆಲ್ಲರೂ ಧರಿಸಬಹುದು ಎಂದು ಬಸವಣ್ಣನವರು ಹೇಳಿದ್ದರೂ ಸಹ ಇತ್ತೀಚಿನ ದಿನಗಳಲ್ಲಿ ಜಾತಿಯ ಆಧಾರದ ಮೇಲೆ ಕೇವಲ ಲಿಂಗಾಯಿತ ಸಮುದಾಯದವರು ಮಾತ್ರ ಹಾಕಿಕೊಳ್ಳುತ್ತಾರೆಯೇ ಹೊರತು ಉಳಿದ ಜಾತಿಯವರಾರು ಧರಿಸುವುದಿಲ್ಲ.

೧೫. ಕಂಜರ ಅಥವಾ ಬೋನಾಸಿ



ತಾಮ್ರದಿಂದ ತಯಾರಿಸಿದ ಒಂದು ಪಾತ್ರೆ. ಇದನ್ನು 'ಬೋನಾಸಿ' ಎಂದೂ ಸಹ ಕರೆಯುವರು. ಈ ಕಂಜರವನ್ನು ದಾಸರು ಬಳಸುತ್ತಾರೆ. ತಿರುಪತಿ ವೆಂಕಟರಮಣ ದೇವ ಒಕ್ಕಲಿಗನಾದವ ದಾಸಪ್ಪರು ಶ್ರಾವಣದ ಸಂದರ್ಭದಲ್ಲಿ ಹಾಗೂ ಇತರೆ ಪೂಜಾ ಕಾರ್ಯಕ್ರಮಗಳಿಗೆ ಹೋದ ಸಮಯದಲ್ಲಿ ದೇವರಿಗೆ






ಪೂಜೆ ಸಲ್ಲಿಸಿ ಮನೆಗೆ ಬರುವಾಗ ಈ ಕಂಚಿರಕ್ಕೆ ಭಕ್ತರ ಮನೆಯಲ್ಲಿ ಮಾಡಿದ ಅನ್ನ, ಸಾಂಬಾರು, ಅಕ್ಕಿ ಅಥವಾ ಇತರೆ ಧಾನ್ಯಗಳನ್ನು ತುಂಬಿಸಿಕೊಂಡು ಬರುತ್ತಾರೆ.

೧೬. ನೀಲಾಂಜನಾ



ದಿನನಿತ್ಯ ದೇವರಿಗೆ ಹಚ್ಚುವ ಒಂದು ಚಿಕ್ಕ ದೀಪ. ಇದನ್ನು ಕಂಚು ಅಥವಾ ಬೆಳ್ಳಿಯಿಂದ ಅಥವಾ ಮಣ್ಣಿನಿಂದ ತಯಾರಿಸಿರುತ್ತಾರೆ. ಕೆಳಗೆ ಒಂದು ಚಿಕ್ಕ ಬಟ್ಟಲಿದ್ದು, ನೆಲದಲ್ಲಿ ಕೂರುವಂತಿರುತ್ತದೆ. ಹಾಗೆಯೇ ಮೇಲೆಯೂ ಸಹ ಒಂದು ಚಿಕ್ಕ ಬಟ್ಟಲಿದ್ದು, ಐದು ಕಡೆ ಇಂಗ್ಲೀಷಿನ 'ವಿ' ಆಕಾರದ ತುದಿಗಳನ್ನು ಮಾಡಲಾಗಿರುತ್ತದೆ. ಇದಕ್ಕೆ ಎಣ್ಣೆಯನ್ನು ಹಾಕಿ ಬತ್ತಿಯನ್ನು ಹೊತ್ತಿಸಿ ದೇವರ ಮುಂದೆ ಇಡುತ್ತಾರೆ.

೧೭. ಏಕರಾತಿ, ಪಂಚಾರತಿ



ದೇವರಿಗೆ ಕರ್ಪೂರದಾರತಿಯನ್ನು ಬೆಳಗಲು ಇರುವ ಒಂದು ವಸ್ತು. ಇದನ್ನು ಕಂಚಿನಿಂದ ತಯಾರಿಸಿರಲಾಗುತ್ತದೆ. ಹಿಂದೆ ಕೈಗಳಿಂದ ಹಿಡಿದುಕೊಳ್ಳಲು ಒಂದು ಉದ್ದವಾದ ಹಿಡಿಕೆಯಿದ್ದು ಮುಂದೆ ಒಂದು, ಮೂರು, ಐದು ಅಥವಾ ಒಂಬತ್ತು ಚಿಕ್ಕ ಚಿಕ್ಕ ಬಟ್ಟಲುಗಳಿದ್ದು ಅದಕ್ಕೆ ಒಂದೊಂದಕ್ಕೂ ಒಂದೊಂದು ಕರ್ಪೂರವನ್ನು ಇಟ್ಟು ಹಚ್ಚಿ ದೇವರಿಗೆ ಕರ್ಪೂರದಾರತಿಯನ್ನು ಬೆಳಗಲಾಗುತ್ತದೆ.

೧೮. ವಿಭೂತಿ ಗಟ್ಟಿ









ದೇವರ ಪೂಜೆಯನ್ನು ಮಾಡುವಾಗ ಜನರು ಹಣೆಗೆ ಇಟ್ಟುಕೊಳ್ಳಲು ಬಳಸುತ್ತಿದ್ದಂತಹ ವಸ್ತು. ಇದನ್ನು ಹಸುವಿನ ಸಗಣಿಯಿಂದ ತಯಾರಿಸಿರುತ್ತಾರೆ. ಜನಪದರು ಯಾವುದೇ ಪೂಜೆಯನ್ನು ಮಾಡುವಾಗ ಈ ವಿಭೂತಿ ಗಟ್ಟಿಯನ್ನು ಕಲಸಿ ದೇವರ ವಿಗ್ರಹಗಳಿಗೆ, ಫೋಟೋಗಳಿಗೆ, ಹೊಸ್ತಿಲಿಗೆ ಹಾಗೂ ಇತರೆ ವಸ್ತುಗಳಿಗೆ ಮೂರು ಮೂರು ನಾಮ ಹಾಕಿ ಅದರ ಮೇಲೆ ಅರಿಶಿಣ ಕುಂಕುಮವನ್ನು ಇಟ್ಟು ಪೂಜೆ ಮಾಡುತ್ತಿದ್ದರು. ಅಲ್ಲದೇ ತಮ್ಮ ಹಣೆಗೂ ಸಹ ಹಚ್ಚಿಕೊಳ್ಳುತ್ತಿದ್ದರು. ವೈಜ್ಞಾನಿಕವಾಗಿ ನೋಡುವುದಾದರೆ ಈ ವಿಭೂತಿಯನ್ನು ಹಣೆಗೆ ಹಚ್ಚುವುದು ಆರೋಗ್ಯಕರವಾಗಿದೆ.

೧೯. ಪಂಚಪಾತ್ರೆ, ಉದ್ಧರಣೆ



ತೀರ್ಥವನ್ನು ಕೊಡುವ ಸಣ್ಣ ಪಾತ್ರೆ. ಇದನ್ನು ತಾಮ್ರ ಅಥವಾ ಕಂಚಿನಿಂದ ತಯಾರಿಸಿರುತ್ತಾರೆ. ನೋಡಲು ಲೋಟದ ಅಥವಾ ಚಿಕ್ಕ ಪಾತ್ರೆಯ ಆಕಾರದಲ್ಲಿರುತ್ತದೆ. ದೇವಸ್ಥಾನಗಳಲ್ಲಿ ಮನೆಗಳಲ್ಲಿ ಹಾಗೂ ಇತರೆ ಎಲ್ಲಿಯಾದರೂ ದೇವರಿಗೆ ಪೂಜೆಯನ್ನು ಮಾಡಿದಾಗ ನೀರು, ಹಾಲು, ಸಕ್ಕರೆ ಹಾಕಿ ತಯಾರಿಸಿದ ಅಥವಾ ಎಳೆನೀರು, ತುಳಸಿ ಹಾಗೂ ನೀರಿನಿಂದ ಮಾಡಿದ ತೀರ್ಥವನ್ನು ಆ ಪಾತ್ರೆಯಲ್ಲಿ ತುಂಬಿ ಅದನ್ನು ಉದ್ಧರಣೆಯಲ್ಲಿ ಕೊಡುತ್ತಾರೆ. ಉದ್ಧರಣೆಯು ನೋಡಲು ಚಮಚದಂತಿರುತ್ತದೆ. ಈ ತೀರ್ಥವನ್ನು ಕೊಡುವ ಉದ್ದೇಶ ಮಾನವನ ದೇಹಕ್ಕೆ ಬೇಕಾದಂತಹ ಎಳೆನೀರು, ತುಳಸಿರಸ ಇತ್ಯಾದಿಗಳನ್ನು ಜನರು ಸೇವಿಸಲೆಂದು.

೨೦. ಪೂಜೆಪುಟ್ಟಿ







ದೇವರಿಗೆ ಪೂಜೆಯನ್ನು ಮಾಡಿಸಲು ದೇವಸ್ಥಾನಕ್ಕೆ ಹೋಗುವಾಗ ಪೂಜಾ ಸಾಮಾಗ್ರಿಗಳನ್ನು ತುಂಬಿಕೊಂಡು ಹೋಗಲು ಬಳಸುವ ಬ್ಯಾಗು ಇದಾಗಿದೆ. ಇದನ್ನು ಜನಪದರು ಬಿದಿರಿನಿಂದ ಎಣೆದಿರುತ್ತಾರೆ. ಬುಟ್ಟಿ ಎಣೆಯುವುದರಲ್ಲಿ ಜನಪದರ ಕಲೆ ಪ್ರಧಾನವಾದುದು. ತನಗೆ ಬೇಕಾದಂತಹ ಹೂವಿನ ಆಕಾರದಲ್ಲಿ ಬುಟ್ಟಿಯನ್ನು ಎಣೆದುಕೊಂಡಿರುತ್ತಾರೆ.

೨೧. ದೀವಟಿಕೆ ಕೋಲು



ಹಬ್ಬ ಜಾತ್ರೆಗಳ ಸಂದರ್ಭದಲ್ಲಿ ದೇವರಿಗೆ ಹರಕೆ ಹೊತ್ತು ದೀಪವನ್ನು ಉರಿಸಿವ ಕೋಲು. ಇದನ್ನು ಕಬ್ಬಿಣದಿಂದ ತಯಾರಿಸಲಾಗಿದ್ದು, ಒಂದು ಚಿಕ್ಕದಾದ ಬಟ್ಟಲಿನ ಒಂದು ಕಡೆ ಇಂಗ್ಲೀಷಿನ 'ವಿ' ಆಕಾರದ ತುದಿಯನ್ನು ಮಾಡಲಾಗಿದ್ದು, ಹಿಂದೆ ಹಿಡಿದುಕೊಳ್ಳಲು ಉದ್ದವಾದ ಕಬ್ಬಿಣದ ಹಿಡಿಯನ್ನು ಮಾಡಲಾಗಿರುತ್ತದೆ. ಹಬ್ಬ ಜಾತ್ರೆಗಳ ಸಂದರ್ಭದಲ್ಲಿ ದೇವರಿಗೆ ಹರಕೆ ಹೊತ್ತು ಈ ದೀವಟಿಕೆ ಕೋಲಿಗೆ ಎಣ್ಣೆ ಬತ್ತಿಯನ್ನು ಹಾಕಿ ಹೊತ್ತಿಸಿ ಎಲ್ಲಾ ಜನರು ಸಾಲಾಗಿ ನಿಂತು ರಾತ್ರಿ ಅಥವಾ ಬೆಳಗಿನ ಸಮಯದಲ್ಲಿ ದೀಪವನ್ನು ಉರಿಸುತ್ತಾರೆ.

೨೨. ಬೆತ್ತದ ಕಡ್ಡಿ





ಸಾಮಾನ್ಯವಾಗಿ ಬೆತ್ತದ ಕಡ್ಡಿಯನ್ನು ದೇವರ ಗುಡ್ಡರು ಹೆಚ್ಚಾಗಿ ಬಳಸುತ್ತಾರೆ. ಇದನ್ನು ಬಿದಿರಿನ ಕಡ್ಡಿಯಿಂದ ಮಾಡಲಾಗಿರುತ್ತದೆ. ದೇವರು ಗುಡ್ಡರ ಬಿರುದು ಇದಾಗಿದ್ದು, ದೇವರ ಮನೆಯಲ್ಲಿಟ್ಟು ಪೂಜಿಸಲಾಗುತ್ತದೆ. ಹಳ್ಳಿಗಳಲ್ಲಿ ದೆವ್ವ ಬಂದವರಿಗೆ ಈ ಬೆತ್ತದ ಕಡ್ಡಿಯಿಂದ ಹೊಡೆಯುತ್ತಾರೆ.

೨೩. ಜೋಳಿಗೆ



ದೇವರ ಗುಡ್ಡರು ದವಸ ಧಾನ್ಯಗಳನ್ನು ತುಂಬಿಕೊಳ್ಳಲು ಬಳಸುತ್ತಿದ್ದಂತಹ ಒಂದು ಬ್ಯಾಗು. ಇದು ಸುಮಾರು ಐದರಿಂದ ಆರು ಕೇಜಿಯಷ್ಟು ದವಸ ಧಾನ್ಯಗಳನ್ನು ಹಿಡಿಯುತ್ತದೆ. ಇದನ್ನು 'ಖಾದನ್' ಬಟ್ಟೆಯಿಂದ ಹೊಲಿಯಲಾಗಿರುತ್ತದೆ. ದೇವರು ಗುಡ್ಡರು ಸೋಮವಾರ ಮತ್ತು ಶುಕ್ರವಾರದಂದು ತಮ್ಮ ಮನೆ ದೇವರಿಗೆ ಪೂಜೆ ಸಲ್ಲಿಸಿ ದೇವರ ಹೆಸರಿನಲ್ಲಿ ಭಿಕ್ಷೆ ಬೇಡಲು ಹೊರಟಾಗ ತಮ್ಮ ಎರಡು ತೋಳುಗಳಿಗೆ ಸಿಕ್ಕಿಸಿಕೊಂಡಿರುತ್ತಾರೆ. ಸಾಮಾನ್ಯವಾಗಿ ಮೂರು ಜೋಳಿಗೆಯನ್ನು ತೆಗೆದುಕೊಂಡು ಹೋಗಿರುತ್ತಾರೆ. ಇದಕ್ಕೆ ಭಕ್ತರು ನೀಡಿದಂತಹ ದವಸ ಧಾನ್ಯಗಳನ್ನು ತುಂಬಿಸಿ ಕೊಂಡು ಮನೆಗೆ ಹೋಗುತ್ತಾರೆ. ಸ್ವಾಮೀಜಿಗಳು ಎಲ್ಲಿಯಾದರೂ ಹೊರಗಡೆ ಹೊರಟಾಗಲೂ ಸಹ ಈ ಜೋಳಿಗೆಯನ್ನು ತೆಗೆದುಕೊಂಡು ಹೋಗುತ್ತಾರೆ. ಇದರಲ್ಲಿ ವಿಭೂತಿಯನ್ನು, ಅಂತ್ರಗಳನ್ನೂ ಇಟ್ಟುಕೊಂಡಿರುತ್ತಾರೆ.

೨೪. ತ್ರಿಶೂಲ



ತ್ರಿಶೂಲ ದೇವರುಗಳ ಒಂದ ಆಯುಧ ಎಂದೇ ಹೇಳಬಹುದು. ಇದು ಸುಮಾರು ಮೂರರಿಂದ ಐದು ಅಡಿ ಎತ್ತರವಿದ್ದು, ಇದನ್ನು ಕಬ್ಬಿಣದಿಂದ ತಯಾರಿಸಿರಲಾಗುತ್ತದೆ. ದೇವಾನು ದೇವತೆಗಳು ದುಷ್ಟ ಶಕ್ತಿಗಳನ್ನು ಸಂಹರಿಸಲು ಈ ಆಯುಧವನ್ನೇ ಬಳಸುತ್ತಿದ್ದರು ಎಂದು ಅನೇಕ ಪುರಾಣಗಳಿಂದ ನಮಗೆ

ಕೂಡ ಇರುತ್ತದೆ. ಆದ್ದರಿಂದ ಪ್ರತಿಯೊಂದು ದೇವಸ್ಥಾನಗಳಲ್ಲಿಯೂ ಗರ್ಭಗುಡಿಯ ಮುಂದೆ ತ್ರಿಶೂಲಗಳನ್ನು ಇಟ್ಟಿರುತ್ತಾರೆ. ದೇವರಿಗೆ ಪೂಜೆಯನ್ನು ಮಾಡುವಾಗ ತ್ರಿಶೂಲಕ್ಕೂ ಸಹ ಪೂಜೆ ಸಲ್ಲಿಸಲಾಗುತ್ತದೆ.

೨೭. ಅಲ್ಲಿಪಿಲ್ಲಿಗಿಂಡಿ ಅಥವಾ ಅಲ್ಲೆಪಿಲ್ಲೆಗಿಂಡಿ



ದೀಪಾವಳಿ ಕಳೆದು ಶುಕ್ಲಪಕ್ಷದ ಐದನೆಯ ದಿನ ಊರ ಹೆಣ್ಣುಮಕ್ಕಳು ಸೇರಿ ಆಚರಿಸುವ ‘ಅಲ್ಲೆಪಿಲ್ಲೆ’ ಆಚರಣೆಗೆ ಬಳಸುವ ಒಂದು ಸಣ್ಣಗಿಂಡಿ. ಸಣ್ಣ ಹೆಣ್ಣುಮಕ್ಕಳ ಅಂಗೈಯಲ್ಲಿ ಅಡಗುವಷ್ಟೇ ಇದೆ. ಇಂಥ ಪುಟ್ಟ ಗಿಂಡಿಗಳನ್ನು ಹಿಡಿದುಕೊಂಡು ಅವಿವಾಹಿತ ಕನ್ಯೆಯರು ಊರಬಾವಿ ಅಥವಾ ನದಿಗೆ ಹೋಗಿ, ನೀರನ್ನು ಗಿಂಡಿಯಲ್ಲಿ ತುಂಬಿ ಪೂಜಿಸಿ ಅಲ್ಲೆಪಿಲ್ಲೆ ಹಾಡುಗಳನ್ನು ಹಾಡುತ್ತ ಮರಳಿ ಮನೆಗೆ ಬಂದು, ಗಿಂಡಿಯನ್ನು ಇಟ್ಟು ಮುಂದಿನ ಐದು ದಿನಗಳಲ್ಲೂ ಪೂಜಿಸುತ್ತಾರೆ. ಆಗ ಹಾಡುಗಳನ್ನು ಹಾಡುವ ಸಂಪ್ರದಾಯ ಇರುತ್ತದೆ. ಈ ಆಚರಣೆಯಲ್ಲಿ ಕೋಲಾಟವೂ ತುಂಬಾ ಮುಖ್ಯವಾದ ಒಂದು ಅಂಗವಾಗಿರುತ್ತದೆ. ಕೊನೆಯ ದಿನ ಈ ಗಿಂಡಿಯ ನೀರನ್ನು ಗ್ರಾಮದ ಒಂದು ಮನೆಯ ಮಾಳಿಗೆಯ ಮೇಲೆ ಒಯ್ದು ಮನೆಗೆಲ್ಲ ಸಿಂಪಡಿಸುತ್ತಾರೆ. ಇದು ಬಹುಶಃ ಕನ್ಯೆಯರಿಗೆ ಋತುಮತಿಯಾಗುವ ಅಥವಾ ವಿವಾಹಿತೆಯಾಗುವ ಬದುಕಿಗೆ ನಡೆಸುವ ಒಂದು ಪೂರ್ವ ಸಿದ್ಧತೆಯಾಗಿದೆ.

೨೮. ಎಳೆಗೌರಮ್ಮನ ಮೂರ್ತಿ



ಚೌತಿಹಬ್ಬದ ನಾಲ್ಕನೆಯ ದಿನ ಎಂದರೆ ಅಷ್ಟಮಿಯ ದಿನ ಈ ಮೂರ್ತಿಯನ್ನು ನೀರು ತುಂಬಿದ ಕೊಡದಲ್ಲಿರಿಸಿ ಪೂಜಿಸುವ ಸಂಪ್ರದಾಯ ಪ್ರಚಲಿತವಾಗಿದೆ. ಇದು ಒಂದು ಮನುಷ್ಯಮುಖ ಪ್ರಮಾಣದ ಮುಖ. ಇದನ್ನು ಕೊಡದಲ್ಲಿ ಇಡುವುದಕ್ಕೆ ಅನುಕೂಲವಾಗುವಂತೆ ಇದರ ಕೊರಳನ್ನು ವಿನ್ಯಾಸಗೊಳಿಸಲಾಗಿದೆ. ಯಕ್ಷಗಾನದ ಹಳೆಯ ಸ್ತ್ರೀವೇಷದಂತೆ ಹಿಂದಲೆಯ ಮೇಲ್ಭಾಗದಲ್ಲಿ ಒಂದು ಕಿರೀಟಾಕೃತಿಯೂ ಕೊರಳಲ್ಲಿ ಅಡ್ಡಿಕೆಗಳೂ ಇವೆ. ಅಂತೆಯೇ ಕಿವಿಗೆ ಓಲೆ, ಮೂಗಿಗೆ ನತ್ತು ಇರಿಸಲು ಅನುಕೂಲವಾಗುವಂತೆ ರಚಿಸಲಾಗಿದೆ. ಮುಂದಿನ ವರ್ಷಗಳಲ್ಲೂ ಇದೇ ಸಂದರ್ಭದಲ್ಲಿ ಈ ಮೂರ್ತಿಯನ್ನು





ಬಳಸಿಕೊಳ್ಳುವಂತೆ ಪೂಜೆಯ ಬಳಿಕ ಜೋಪಾನವಾಗಿಡುತ್ತಾರೆ. ಈ ಮೂರ್ತಿಯನ್ನು ಬೇವಿನ ಮರದಿಂದ ತಯಾರಿಸುತ್ತಾರೆ.

೨೭. ಕುಂಕುಮದ ಭರಣಿ ಅಥವಾ ಬಟ್ಟು



ಅರಸಿನ ಮತ್ತು ಕುಂಕುಮಗಳನ್ನು ಹಾಕಿ ಇಡಲು ಬಳಸುವ ಸಾಧನ. ವೃತ್ತಾಕಾರದಲ್ಲಿದ್ದು ಆಲಂಕಾರಿಕವಾಗಿ ಕೆತ್ತನೆ ಮಾಡಿದ್ದಾರೆ. ಸಣ್ಣ ಹಿಡಿಕೆಯಂಥ ರಚನೆ ಇರುವ ಮುಚ್ಚಳ ಇದೆ. ಮುಚ್ಚಳದಲ್ಲೂ ಆಲಂಕಾರಿಕ ಕೆತ್ತನೆ ಇದೆ. ಇವುಗಳ ಗಾತ್ರದಲ್ಲಿ ವ್ಯತ್ಯಾಸಗಳಿರುತ್ತವೆ. ದೇವರ ಪೂಜೆಯ ಸಂದರ್ಭಗಳಲ್ಲಿ, ದಿನಬಳಕೆಯಲ್ಲಿ, ಮಹಿಳಾ ಅತಿಥಿಗಳು ಬಂದಾಗ ಇದು ಉಪಯೋಗವಾಗುತ್ತದೆ. ವೃತ್ತ, ಅಯುತ, ಕೂರ್ಮಾಕಾರಗಳಲ್ಲಿ ಕುಂಕುಮ ಬಟ್ಟುಗಳು ವಿನ್ಯಾಸಗೊಂಡಿರುತ್ತವೆ. ಕುಂಕುಮದ ಕರಡಿಗೆಗಳ ಒಳಗೆಯೇ ಕುಂಕುಮ, ಅರಿಸಿಣ, ಕೇಸರಿ, ಗುಲಾಬಿ ಬಣ್ಣಗಳ ಹುಡಿಗಳನ್ನು ಇರಿಸಿಕೊಳ್ಳಲು ಯೋಗ್ಯವಾಗುವಂತೆ ಅಳವಡಿಸಿ ಅವಕ್ಕೆ ಬೇರೆ ಬೇರೆಯೇ ಮುಚ್ಚಳುಗಳನ್ನು ಕೌಶಲ್ಯದಿಂದ ಅಳವಡಿಸಲಾಗುತ್ತದೆ. ಸಾಗುವನಿ, ಶ್ರೀಗಂಧ, ಹಲಸು ಮುಂತಾದ ಮರಗಳಿಂದ ಇಂಥ ಬಟ್ಟಲುಗಳನ್ನು ತಯಾರಿಸುತ್ತಾರೆ.

೨೮. ಕೂರಿಗೆವ್ವ



ಬಿತ್ತನೆ ಪ್ರಾರಂಭಿಸುವ ಮೊದಲು ಊರದೇವತೆಗಳ ಪೂಜೆ. ಅಗಸೆ ಪೂಜೆಯನ್ನು ಮಾಡಿದ ಬಳಿಕ ಗ್ರಾಮಸ್ಥರೆಲ್ಲರೂ ಸೇರಿ ಬಿತ್ತನೆ ಕಾರ್ಯಕ್ಕೆ ಮುನ್ನುಡಿಯಾಗಿ 'ಮೊದಲು ಮಾಡುವುದು' ಎಂಬ ಆಚರಣೆಯನ್ನು ಮಾಡುತ್ತಾರೆ. ಬಳಿಕ ಆಯಾ ಮನೆಯವರು ತುಂಬಿದ ಕೊಡವೊಂದರ ಮೇಲೆ ಕೂರಿಗೆವ್ವನನ್ನು ಇರಿಸಿ ಅಲಂಕರಿಸಿ ಪೂಜಿಸಿ ತಮಗೆ ಸಮೃದ್ಧ ಮಳೆ-ಬೆಳೆ ನೀಡುವಂತೆ ಪ್ರಾರ್ಥಿಸುತ್ತಾರೆ. ಬಿತ್ತನೆಯ ಕೆಲಸಕ್ಕೆ





ಕೂರಿಗೆಯು ಬಹಳ ಮುಖ್ಯ ಸಾಧನವಾಗಿರುವುದರಿಂದ ಈ ದೇವತೆಗೆ ಕೂರಿಗೆವ್ವನೆಂದೇ ಹೆಸರಾಗಿದೆ. ಕೂರಿಗೆವ್ವ ಮೂರ್ತಿಯಲ್ಲಿ ರುಂಡಮಾತ್ರ ಇದೆ. ಅದು ಸ್ತ್ರೀ ಮೂರ್ತಿ ಎನ್ನುವುದು ನಿಚ್ಚಳವಾಗುವಂತೆ ಕೆತ್ತನೆ ಮಾಡಿದ್ದಾರೆ. ಸುಮಾರು ಮನುಷ್ಯ ಮೋರೆಯಷ್ಟು ಗಾತ್ರವಿದೆ. ಕೂರಿಗೆವ್ವನ ಮೋರೆಯು ವರ್ಷದಲ್ಲಿ ಒಂದು ಬಾರಿ ಹೊರಗೆ ಬರುತ್ತದೆ. ಕೂರಿಗೆವ್ವನ ಮೂರ್ತಿಯನ್ನು ಸಾಗುವನಿ ಮರದಿಂದ ನಿರ್ಮಿಸಿದ್ದಾರೆ.

೨೯. ಗುಗ್ಗಳ ಕೊಡ



ವೀರಭದ್ರ ದೇವರಿಗೆ ಲಿಂಗಾಯತ ಸಮುದಾಯದವರು ಗುಗ್ಗಳ ಆಚರಣೆ ಮಾಡುವ ಸಂದರ್ಭದಲ್ಲಿ ಈ ಕೊಡವನ್ನು ಅಡಿ ಮೇಲಾಗಿ ಹೊತ್ತೊಯ್ಯುತ್ತಾರೆ. ಕೊಡದಲ್ಲಿ ಎಣ್ಣೆ, ಸಿಂಬೆ, ಹತ್ತಿಯ ಬತ್ತಿ ಮುಂತಾದವನ್ನು ಇಟ್ಟುಕೊಂಡು ಹೊತ್ತೊಯ್ಯುತ್ತಾರೆ. ಇದು ಒಂದು ಅರ್ಧಕೊಡದ ರಚನೆ. ಇದರ ಮೇಲಿನ ಅಂಚಿನ ಸುತ್ತ ಚಿತ್ತಾರಗಳನ್ನು ಬಿಡಿಸಿದ್ದಾರೆ. ನಾಲ್ಕು ಬದಿಗಳಲ್ಲೂ ನಿಂಬೆಹಣ್ಣುಗಳನ್ನು ದಾರದಿಂದ ಪೋಣಿಸಿ ಜೋತಾಡಿಸಲು ಅನುಕೂಲವಾಗುವಂತೆ ಪುಟ್ಟ ರಂಧ್ರಗಳುಳ್ಳ ರಚನೆಗಳು ಇರುತ್ತವೆ. ಇದು ಸುಮಾರು ಹನ್ನೆರಡರಿಂದ ಹದಿನೈದು ಇಂಚುಗಳಷ್ಟು ವ್ಯಾಸವುಳ್ಳದ್ದಾಗಿದೆ. ಅರ್ಧಕೊಡವಾಗಿರುವುದರಿಂದ ಮಧ್ಯದಲ್ಲಿ ತಗ್ಗಾಗಿದ್ದು ವಸ್ತುಗಳನ್ನು ಇಲ್ಲಿ ಇಟ್ಟುಕೊಳ್ಳುವುದಕ್ಕೆ ಅನುಕೂಲಕರವಾಗಿದೆ. ಕೊಡದ ಬಾಯಿಯನ್ನು ತಲೆಯ ಮೇಲೆ ಕೂರಿಸಿ ಕೊಡವನ್ನು ಹೊರುತ್ತಾರೆ. ಕೊಡವನ್ನು ಆವೆ ಮಣ್ಣಿನಿಂದ ತಯಾರಿಸಲಾಗಿದೆ.

೩೦. ಗುಳ್ಳವ್ವನ ಬಾಗಿಲು



ಗುಳ್ಳವ್ವ ಪೂಜೆಗೊಳ್ಳುವ ಒಬ್ಬ ಜನಪದ ಸ್ತ್ರೀ ದೇವತೆ, ಸಮೃದ್ಧಿ ದೇವತೆ. ಈಕೆಯ ಪೂಜೆಯು ಆಷಾಢ ಮಾಸದಲ್ಲಿ ಆರಂಭವಾಗಿ ನಾಗರ ಪಂಚಮಿಗೆ ಮುಗಿಯುತ್ತದೆ. ಈ ತಿಂಗಳಲ್ಲಿ ವಾರಗಳ ಕಾಲ






ಗುಳ್ಳವ್ವನನ್ನು ಅವಿವಾಹಿತ ಹುಡುಗಿಯರು ಆರಾಧನೆ ಮಾಡುತ್ತಾರೆ. ಮೊದಲ ವಾರ ಒಂದು ಬಾಗಿಲನ್ನು ಎರಡನೆಯ ವಾರದಲ್ಲಿ ಮತ್ತೆ ಎರಡು ಬಾಗಿಲುಗಳನ್ನುಳ್ಳ ಬಾಗಿಲನ್ನು, ಮೂರನೆ ವಾರದಲ್ಲಿ ಮೂರು ಬಾಗಿಲುಗಳುಳ್ಳ ಬಾಗಿಲನ್ನು ಪೂಜೆ ಮಾಡುತ್ತಾರೆ. ಅಂದರೆ ನಾಲ್ಕು ವಾರಗಳಲ್ಲಿ ಒಟ್ಟು ಹತ್ತು ಬಾಗಿಲುಗಳು ಪೂಜೆಗೊಳ್ಳುತ್ತವೆ. ಈ ಪೂಜೆಯ ಉದ್ದೇಶವು ಮಳೆ-ಬೆಳೆಗಳು ಸಮೃದ್ಧವಾಗಿರಲಿ ಎನ್ನುವುದಾಗಿದೆ. ಈ ಬಾಗಿಲುಗಳಲ್ಲಿ ವ್ಯತ್ಯಾಸಗಳಿವೆ ಹಾಗೂ ವೈವಿಧ್ಯಗಳಿವೆ. ವಿಭಿನ್ನ ಚಿತ್ತಾರಗಳ ರಚನೆಗಳಿವೆ. ಪೂಜಿಸುವ ಸಂದರ್ಭದಲ್ಲಿ ಹಾಡುಗಳನ್ನು ಹಾಡುವ ಸಂಪ್ರದಾಯವಿದೆ. ಗುಳ್ಳವ್ವನ ಬಾಗಿಲನ್ನು ತೇಗ ಮುಂತಾದ ಗಟ್ಟಿ ಜಾತಿಯ ಮರಗಳಿಂದ ತಯಾರಿಸುತ್ತಾರೆ.

೪.೧. ಚೊಂಗ್ಯನ ಮಣಿ ಅಥವಾ ಚೊಂಗ್ಯೆ ಮಣಿ



ಇದು ಧಾರ್ಮಿಕ ಮಹತ್ವವನ್ನು ಒಳಗೊಂಡ ಒಂದು ವಸ್ತು. ಮೊಹರಂ ಹಬ್ಬದ ಕೊನೆಯ ದಿನ ಮತ್ತು ಕೌಡಿಪೀರ ಹಬ್ಬದ (ಮೊಹರಂ ಆಚರಣೆಯ ಒಂದು ತಿಂಗಳ ನಂತರ ಆಚರಿಸುವ ಅಂಥದೇ ಇನ್ನೊಂದು ಹಬ್ಬ) ಕೊನೆಯ ದಿನ ಹೋಳಿಗೆಗಳನ್ನು ಮಾಡುವಾಗ ಅದರ ಮೇಲೆ ಮೊಹರು ಬೀಳುವಂತೆ ಒತ್ತುವ ಮಣಿ. ಇದು ವೃತ್ತಾಕಾರದಲ್ಲಿದೆ. ಇದರ ಗಾತ್ರ ಮತ್ತು ವಿನ್ಯಾಸಗಳಲ್ಲಿ ವ್ಯತ್ಯಾಸಗಳಿವೆ. ಸಾಧಾರಣವಾಗಿ ಸುಮಾರು ಆರು ಇಂಚು ವ್ಯಾಸದ್ದಾಗಿರುತ್ತದೆ. ಮೇಲ್ಭಾಗದಲ್ಲಿ ಚಿತ್ತಾರಗಳಿರುತ್ತದೆ. ಮರ ಮತ್ತು ಬಿಳಪದ ಕಲ್ಲುಗಳಿಂದ ಈ ಮಣಿಗಳನ್ನು ತಯಾರಿಸಲಾಗುತ್ತದೆ.

೪.೨. ತೂಗುದೀಪ







ದೇವರ ಕೋಣೆ, ದೇವಾಲಯ, ದೈವಾಲಯಗಳಲ್ಲಿ ಸರ್ವ ಸಾಮಾನ್ಯವಾಗಿ ಇರುವ ದೀಪವಿಡುವ ಸಾಧನ. ಇದರಲ್ಲಿ ಮುಖ್ಯವಾಗಿ ಎರಡು ಭಾಗಗಳಿವೆ – ಸಂಕಲೆ ಮತ್ತು ದೀಪ ಎಂದು. ಸಂಕಲೆಯನ್ನು ಕೊಂಡಿಗೆ ಜೋತು ಹಾಕಲಾಗುತ್ತದೆ. ಸಂಕಲೆಯ ಬುಡವು ದೀಪದೊಂದಿಗೆ ಬಂಧಿತವಾಗಿರುತ್ತದೆ. ದೀಪವೂ ವೃತ್ತಾಕಾರದಲ್ಲಿದ್ದು ಸುಮಾರು ಆರು ಇಂಚು ವ್ಯಾಸವಿದೆ (ಗಾತ್ರದಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ). ದೀಪದಲ್ಲಿ ಐದು ಸಮಾನ ಅಂತರಗಳಲ್ಲಿ ಬತ್ತಿಗಳನ್ನು ಇಟ್ಟುಕೊಳ್ಳಲು ರಚನೆಗಳಿವೆ. ಇಂಥ ದೀಪಗಳನ್ನು ಹಚ್ಚುವಾಗ ಪೂರ್ವಾಭಿಮುಖವಾಗಿರುವ ಬತ್ತಿಗಳನ್ನು ಮೊದಲು ಉರಿಸಿ ಬಳಿಕ ಪ್ರದಕ್ಷಿಣಾ ರೂಪದಲ್ಲಿ ಹಚ್ಚುವುದು ಸಂಪ್ರದಾಯ. ತೂಗು ದೀಪಗಳನ್ನು ಕಂಚು, ಹಿತ್ತಾಳೆ, ಬೆಳ್ಳಿ ಮುಂತಾದ ಲೋಹಗಳಿಂದ ತಯಾರಿಸುತ್ತಾರೆ.

೩.೩. ದೋಣಿ



ಮೈಲಾರಲಿಂಗನ ಆರಾಧಕರಾದ ಗೊರವಯ್ಯಗಳು ಆಹಾರ ಭಿಕ್ಷೆಯನ್ನು ಸ್ವೀಕರಿಸುವುದಕ್ಕೆ ಬಳಸುವ ವಿಶಿಷ್ಟ ಪಾತ್ರೆ. ಇದು ಸುಮಾರು ಎರಡು ಇಂಚು ಉದ್ದ, ಆರು ಇಂಚು ಅಗಲ, ಐದು ಇಂಚು ಎತ್ತರದ ದೋಣಿಯಾಕಾರದ ಪಾತ್ರೆ. ಇದರ ತಳಭಾಗವು ಚಪ್ಪಟೆಯಾಗಿದ್ದು, ದೋಣಿಯು ಮೇಲಕ್ಕೆ ಹೋದಂತೆ ಅಗಲವಾಗುತ್ತಾ ಹೋಗುತ್ತದೆ. ಹಗುರವಾದ ಇಂಗಳಾರದಂಥ ಮರದ ತುಂಡನ್ನು ಕೊರೆದು ಇದಕ್ಕೆ ನಿರ್ದಿಷ್ಟ ರೂಪ ಕೊಡುತ್ತಾರೆ. ನಿತ್ಯ ಸಂಚಾರ ಮಾಡುತ್ತ ಭಿಕ್ಷೆಗೆ ಗೊರವರು ತೆರಳಿದಾಗ ಭಕ್ತರು ನೀಡುವ ಆಹಾರ ಭಿಕ್ಷೆಯನ್ನು ಅವರು ಈ ಪಾತ್ರೆಯಲ್ಲಿಯೇ ಸ್ವೀಕರಿಸಿ, ಇದೇ ಪಾತ್ರೆಯಲ್ಲಿಯೇ ಉಣ್ಣುತ್ತಾರೆ. ಉಂಡ ಬಳಿಕ ತೊಳೆದು ಒಣಗಿಸಿಕೊಳ್ಳುತ್ತಾರೆ.

ಮೈಲಾರಲಿಂಗನ ಜಾತ್ರೆಯಲ್ಲಿ, ಹುಣ್ಣಿಮೆ ಅಮವಾಸ್ಯೆಯಂಥ ಪರ್ವ ದಿನಗಳಲ್ಲಿ ಭಾನುವಾರ, ಸೋಮವಾರಗಳಂಥ ದಿನಗಳಲ್ಲಿ ಗೊರವರು ಮೈಲಾರ ದೇವಾಲಯದ ಆವರಣದಲ್ಲಿ ಪ್ರಸಾದ ಸ್ವೀಕಾರಕ್ಕಾಗಿ ದೋಣಿಯನ್ನು ಇಟ್ಟು ಕುಳಿತುಕೊಳ್ಳುತ್ತಾರೆ. 'ಹಣ್ಣು ತುಪ್ಪದ ಆಚರಣೆ'ಯೆಂಬ ಆಚರಣೆಯಲ್ಲಿ ಭಕ್ತರು ಗೊರವರಿಗೆ ಬಾಳೆಹಣ್ಣು, ತುಪ್ಪ, ಬೆಲ್ಲ, ಸಕ್ಕರೆ ಮುಂತಾದವುನ್ನು ಮಿಶ್ರಮಾಡಿ ಇದೇ ಪಾತ್ರೆಗೆ ನೀಡುತ್ತಾರೆ. ಮೈಲಾರಲಿಂಗನ ಪರಿವಾರವಾದ ನಾಯಿಯು ತಿನ್ನುವಂತೆ ಗೊರವರು ಕೂಡ ಈ ದೋಣಿಯಲ್ಲಿ ಆಹಾರ ಸ್ವೀಕರಿಸುವ ಆಚರಣೆಯು ಮೈಲಾರಲಿಂಗನ ಜಾತ್ರೆಯಲ್ಲಿ ನಡೆಯುತ್ತದೆ. ಕಂಚಿನ ದೋಣಿಗಳು ಬಂದ ಬಳಿಕ ಮರದ ದೋಣಿಗಳು ಮರೆಯಾಗುತ್ತಿವೆ.



೩.೮. ದಂಡ ಅಥವಾ ಯೋಗದಂಡ



ಋಷಿಮುನಿಗಳು ಮತ್ತು ಜಂಗಮರು ಧ್ಯಾನಮಾಡುವಾಗ ಬಳಸುವ ಸಾಧನ. ಇದು ಸುಮಾರು ಒಂದೂವರೆ ಅಡಿ ಉದ್ದವಿದ್ದು, ಸುಮಾರು ಹತ್ತು ಇಂಚು ಅಗಲವಿರುವ ದೋಣಿಯಾಕಾರದ ಮೇಲ್ತುದಿಯನ್ನು ಹೊಂದಿದೆ. ಇದರ ಮೇಲೆ ಎಡತೋಳನ್ನು ಇಟ್ಟುಕೊಂಡು ಧ್ಯಾನ ಮಾಡುತ್ತಿದ್ದರು. ಜಂಗಮರು ಕೂಡ ದಂಡವನ್ನು ಕೈಯಲ್ಲಿ ಹಿಡಿದುಕೊಂಡು ಸಂಚಾರ ಮಾಡುತ್ತಿದ್ದರು. ದಂಡಕ್ಕೆ ಜನಪದರು ಬಹಳ ಭಕ್ತಿಭಾವದಿಂದ ನಮಸ್ಕರಿಸುತ್ತಾರೆ. ಋಷಿಮುನಿಗಳಿಗೆ ಮತ್ತು ಜಂಗಮರಿಗೆ ಎಷ್ಟು ಬೆಲೆ ಇದೆಯೋ ಅಷ್ಟೇ ಬೆಲೆ ಈ ದಂಡಕ್ಕೂ ಕೊಡುತ್ತಾರೆ. ದಂಡವನ್ನು ಸಾಗುವಾನಿ, ಮತ್ತಿ ಮುಂತಾದ ಮರಗಳಿಂದ ತಯಾರಿಸುತ್ತಾರೆ.

೩.೯. ಶಸ್ತ್ರ



ಮೈಲಾರಲಿಂಗನ ಭಕ್ತರಾದ ಗೊಗ್ಗಯ್ಯಗಳು ಅಥವಾ ಗೊರವಯ್ಯಗಳು ವೀರಭದ್ರನ ಭಕ್ತರು ಹರಕೆ ತೀರಿಸಲು ಬಳಸುವ ಸಲಕರಣೆ. ಇದು ಸುಮಾರು ಎರಡು ಅಡಿ ಉದ್ದದ, ಚಿಕ್ಕ ಮೊಳೆಯಷ್ಟು ದಪ್ಪದ ಸಾಧನ. ಇದನ್ನು ಎಡಕೆನ್ನೆಯಿಂದ ಬಲಕೆನ್ನೆಯತ್ತ ಚುಚ್ಚಿ ಸುಮಾರು ಅರ್ಧದಷ್ಟನ್ನು ದಾಟಿಸುತ್ತಾರೆ. ಹಾಗೆ ಶಸ್ತ್ರವನ್ನು ಚುಚ್ಚಿಕೊಂಡು ಇವರು ಗಂಟೆಗಟ್ಟಲೆ ಇರುತ್ತಾರೆ. ಚುಚ್ಚಿದ ಶಸ್ತ್ರವನ್ನು ತೆಗೆಯುವಾಗ ಆಗುವ ಗಾಯಕ್ಕೆ ವಿಭೂತಿ ಬಂಡಾರವನ್ನು ಹಚ್ಚುವ ಕ್ರಮವಿದೆ. ಶಸ್ತ್ರವನ್ನು ತಾಮ್ರದಿಂದ ತಯಾರಿಸುತ್ತಾರೆ. ಇದರ ತುದಿ ಚೂಪಗಿದ್ದು, ಬುಡವು ಮೊಳೆಯ ತಲೆಯಂತೆ ಚಪ್ಪಟೆಯಾಗಿರುತ್ತದೆ.

೩.೬. ಹರಕೆ ತೊಟ್ಟಿಲು



ಹರಕೆಯನ್ನು ಕೊಡುವ ಅಥವಾ ತೀರಿಸುವ ಉದ್ದೇಶಕ್ಕಾಗಿ ದೇವಾಲಯದ ಮುಂಭಾಗದಲ್ಲಿರುವ ಮರದ ಒಂದು ಕೊಂಬೆಗೆ ಅಥವಾ ದೇವಾಲಯದ ಒಂದು ಭಾಗದಲ್ಲಿ ಕಟ್ಟುವ ಮರದ ಚಿಕ್ಕ ತೊಟ್ಟಿಲು. ಸುಮಾರು ಒಂದು ಅಡಿ ಉದ್ದ, ಅರ್ಧ ಅಡಿ ಅಗಲವಾಗಿರುತ್ತದೆ. ನಾಲ್ಕು ಭಾಗಗಳಲ್ಲಿ ಸುಮಾರು ಅರ್ಧ ಅಡಿ ಎತ್ತರದ ಗೂಟಗಳಿರುತ್ತವೆ. ಈ ಗೂಟಗಳಿಗೆ ಸೇರಿದಂತೆ ಮರದ ತೆಳು ಹಲಗೆ ತುಂಡನ್ನು ಜೋಡಿಸಿದ್ದಾರೆ. ತೊಟ್ಟಿಲಿನ ಸುತ್ತ ಮತ್ತು ತೊಟ್ಟಿಲಿನ ಮೇಲ್ಭಾಗದಲ್ಲಿ ಚಿತ್ತಾರದ ಕೆತ್ತನೆಗಳಿವೆ. ಮಕ್ಕಳು ಆಗದವರು ತೊಟ್ಟಿಲ ಹರಕೆ ಹೊತ್ತು ಮಕ್ಕಳಾದ ಬಳಿಕ ಹರಕೆ ಒಪ್ಪಿಸುವ ಸಂದರ್ಭದಲ್ಲಿ ಈ ತರಹದ ತೊಟ್ಟಿಲುಗಳು ಬಳಕೆಯಾಗುತ್ತವೆ.

ಅಡಿ ಟಿಪ್ಪಣಿಗಳು

೧. ನಾಯಕ ಮತ್ತು ರಾಮೇಗೌಡ ಡಿ.ಬಿ.,ಕನ್ನಡ ಜಾನಪದ ನಿಘಂಟು ಪದ ಸಂಸ್ಕೃತಿ ಕೋಶ, ಸಂಪುಟ–೨, ಕನ್ನಡ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ೨೦೧೭, ಪು -೬೨೯



ವೈಜ್ಞಾನಿಕ ಪರಿಕರಗಳು



ಅಧ್ಯಾಯ ೪

ವೈಜ್ಞಾನಿಕ ಪರಿಕರಗಳು

೪.೧.ವೈದ್ಯಕೀಯ ಪರಿಕರಗಳು


ಜನಪದರು ಅನಕ್ಷರಸ್ಥರಾದರೂ ಅವರು ವೈಜ್ಞಾನಿಕ ಚಿಂತನೆಗಳು ಹಾಗೂ ವೈದ್ಯಕೀಯ ನಂಬಿಕೆಗಳು ಕೇವಲ ಮೂಢಾಚಾರಣೆಗಳಾಗಿರಲಿಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನದ ಅರಿವು ಇಲ್ಲದಿದ್ದರೂ ತಮ್ಮ ಅನುಭವದ ಆಧಾರದ ಮೇಲೆ ಸುತ್ತಮುತ್ತಲ ವಸ್ತುಗಳನ್ನು ಬಳಸಿಕೊಂಡೆ ತಮ್ಮ ಹಾಗೂ ತಮ್ಮ ಸಾಕುಪ್ರಾಣಿಗಳ ಆರೋಗ್ಯವನ್ನು ಕಾಪಾಡಿಕೊಳ್ಳುತ್ತಿದ್ದುದನ್ನು ಅವರು ಬಳಸುತ್ತಿದ್ದ ಕೆಲವು ಪರಿಕರಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

೧. ಗೊಟ್ಟ



ಜಾನುವಾರುಗಳಿಗೆ ಔಷಧಿ ಕುಡಿಸಲು ಬಳಸುವ ಬಿದಿರ ಅಂಡೆ. ಬಿದಿರ ತುಂಡಿನಲ್ಲಿ ಒಂದು ಗಂಟನ್ನು ಹಾಗೆಯೇ ಉಳಿಸಿಕೊಂಡು ಇನ್ನೊಂದು ತುದಿಯನ್ನು ಒಂದು ವಿಶಿಷ್ಟಕೋನದಲ್ಲಿ ಕತ್ತರಿಸಿಕೊಳ್ಳಲಾಗುತ್ತದೆ. ಇದರಿಂದ ಗೊಟ್ಟದ ತುದಿಯನ್ನು ಜಾನುವಾರಗಳ ಬಾಯಿಯೊಳಕ್ಕೆ ಸೇರಿಸಿಕೊಳ್ಳಲು ಅನುಕೂಲವಾಗುತ್ತದೆ. ಸಣ್ಣಕರುಗಳಿಗೆ ಹಾಲು ಕುಡಿಸಲು ಚಿಕ್ಕ ಗೊಟ್ಟವನ್ನು ಬಳಸುತ್ತಾರೆ. ಇದು ಸುಮಾರು ಎಂಟು ಇಂಚಿನಿಂದ ಎರಡು ಅಡಿಗಳ ತನಕ ಉದ್ದವಿರುತ್ತದೆ. ಸುತ್ತಳತೆ ಕೂಡ ಬೇರೆ ಬೇರೆ ಇರುತ್ತದೆ. ಒಳ್ಳೆಯ ಬಿದಿರಿನಿಂದ ತಯಾರಿಸಿ ಜೋಪಾನವಾಗಿ ಇಟ್ಟುಕೊಂಡರೆ ಇದು ವರ್ಷಾನುಗಟ್ಟಲೆ ಬಾಳಿಕೆ ಬರುತ್ತದೆ.

೨. ಚಿಮಟಿಗೆ ಅಥವಾ ಮುಳ್ಳುಗಡ್ಡಿ



ಮನುಷ್ಯರು ಅಥವಾ ಪ್ರಾಣಿಗಳ ದೇಹದೊಳಗೆ ಚುಚ್ಚಿಕೊಂಡು ಮುಳ್ಳು, ಸೇರಿದ ಕಸಕಡ್ಡಿ-ಕಲ್ಲುಚೂರು ಮುಂತಾದುವನ್ನು ಕೀಳಲು ಬಳಸುವ ಸಾಮಾಗ್ರಿ. ಇವು ಇಕ್ಕುಳದ ಹಾಗಿದ್ದು ಗಾತ್ರದಲ್ಲಿ ವಿಭಿನ್ನವಾಗಿರುತ್ತದೆ. ಜಾನುವಾರುಗಳಿಗಾಗಿ ಬಳಸುವ ಚಿಮಟಿಗೆ ದೊಡ್ಡದು. ಮನುಷ್ಯರ ಅಗತ್ಯಕ್ಕೆ ಬಳಸುವುವು ಸಣ್ಣವು ದಕ್ಷಿಣ ಕರ್ನಾಟಕದ ಪಶುಪಾಲಕರಲ್ಲಿ ಇವುಗಳ ಬಳಕೆ ಹೆಚ್ಚು. ಕುರಿ, ದನಗಳ ಕಾಲಗೊರಸಿನಲ್ಲಿ ಸಿಕ್ಕಿಹಾಕಿಕೊಂಡ ಸಣ್ಣ ಗಾತ್ರದ ಕಲ್ಲು ಮುಂತಾದುವನ್ನು ಕೀಳುವುದಕ್ಕೂ ಚಿಮಟಿಗೆಯು ಬಳಕೆಯಾಗುತ್ತದೆ. ಚಿಮಟಿಗೆಗಳನ್ನು ಜೋಡಿಸಿಕೊಂಡಿರುವ ಗುಚ್ಛದಲ್ಲಿ ಸೂಜಿಯಂಥ ಮತ್ತು ಸೌಟಿನಂಥ ವಸ್ತುಗಳಿರುತ್ತವೆ. ದೇಹದಲ್ಲಿ ಸೇರಿಕೊಂಡ ಮುಳ್ಳು ಅಥವಾ ಕಶ್ಮಲಗಳನ್ನು ಬಗಿದು ತೆಗೆಯಲು ಸೂಜಿಯಾಕಾರದ ಉಪಕರಣವನ್ನು ಬಳಸಿದರೆ ಗಾಯವಾದ ಜಾಗಕ್ಕೆ ಔಷದ ಹಾಕಲು ಸೌಟಿನಾಕಾರದ ಉಪಕರಣದ ಬಳಕೆಯಾಗುತ್ತದೆ. ಕಿವಿಯ ಗುಗ್ಗೆ ಅಥವಾ ಕೊಕ್ಕಿಯನ್ನುತೆಗೆದು ಹಾಕಲೂ ಇದು ಬಳಕೆಯಾಗುತ್ತದೆ. ಚಿಮಟಿಗೆಯು ದಕ್ಷಿಣ ಕರ್ನಾಟಕದ ಪಶುಪಾಲಕರಲ್ಲಿ, ವಿಶೇಷವಾಗಿ ಅಲೆಮಾರಿ ಕುರಿಗಾಹಿಗಳಲ್ಲಿ ಬಳಕೆ ಹೆಚ್ಚು. "ಚಿಮಟಿಗೆಯನ್ನು ಕಬ್ಬಿಣ, ತಾಮ್ರ ಮುಂತಾದ ಲೋಹಗಳಿಂದ ತಯಾರಿಸುತ್ತಾರೆ. ಜೋಳಗೇರು ಎನ್ನುವ ಸಮುದಾಯದವರು ಚಿಮಟಿಗೆಯನ್ನು ತಯಾರಿಸಿ ಗ್ರಾಮ ಸಂತೆ, ಜಾತ್ರೆ ಮುಂತಾದ ಸ್ಥಳಗಳಲ್ಲಿ ಮಾರಾಟ ಮಾಡುತ್ತಾರೆ".[೧]

೪.೨ ಮಾಪನಕ್ಕೆ ಬಳಸುವ ಪರಿಕರಗಳು

ಎಣಿಸುವುದು, ತೂಕಮಾಡುವುದು ಮತ್ತು ಅಳತೆ ಮಾಡುವುದು ಒಂದು ಅದ್ಭುತ ಲೋಕ. ಲೋಕವ್ಯಾಪಾರವೇ ಈ ಮುಗ್ಗಲಿ ವಹಿವಾಟಿನಲ್ಲಿ ನಡೆಯುತ್ತದೆಯಲ್ಲವೇ? ಜನಪದರು ಈ ಅತ್ಯಗತ್ಯ ಮತ್ತು ಕೌಶಲ್ಯಪೂರ್ಣ ಕೆಲಸವನ್ನು ಎಷ್ಟು ಸಮರ್ಪಕವಾಗಿ ನಿರ್ವಹಿಸಿದ್ದಾರೆ ಎಂಬುದನ್ನು ಅಧ್ಯಯನ ಮಾಡುವುದೇ ಕುತೂಹಲದ ಸಂಗತಿ. ಅಂತಹ ಸಾಧನಗಳಲ್ಲಿ ಕೆಲವನ್ನಷ್ಟೆ ಸಧ್ಯ ಪರಿಚಯಿಸುತ್ತಿದ್ದೇನೆ.

೧. ಗಿಣ್ಣೆ ಚಟಾಕು



ಸಣ್ಣ ಪ್ರಮಾಣದಲ್ಲಿ ಕಾಳುಗಳನ್ನು ಅಳೆಯಲು ಬಳಸುವ ಮಾಪಕ. ಇದು ವೃತ್ತಾಕಾರದಲ್ಲಿರುತ್ತದೆ. ವ್ಯಾಸವು ಸುಮಾರು ಮೂರು ಇಂಚು, ಎತ್ತರ ಸುಮಾರು ನಾಲ್ಕೂವರೆ ಇಂಚು ಇದರಲ್ಲಿ ತುಂಬಿ ಅಳೆದರೆ(ಹಿಡಿಸುವಷ್ಟು ಕಾಳು) ಹಿಂದಿನ ಕಾಲದ ಒಂದು ಕಾಲ್ಡಾವಿನ ನಾಲ್ಕನೇ ಒಂದು ಪಾಲು ಆಗುತ್ತದೆ.



ಇದನ್ನು ಕಬ್ಬಿಣದ ತಗಡಿನಿಂದ ನಿರ್ಮಿಸಿ ಬಾಯಿಯ ಕೆಳಗಿನ ಸುತ್ತ ಹಿತ್ತಾಳೆಯ ಕಟ್ಟನ್ನು ಕಟ್ಟಿರುತ್ತಾರೆ. ಅಳೆದು ಸುರಿದಾಗ ಸದ್ದಾಗುವಂತೆ ಇದರ ತಳದ ಒಳಭಾಗದಲ್ಲಿ ಗೆಜ್ಜೆಯಗುಂಡಿನಂತ ರಚನೆಗಳನ್ನು ಅಳವಡಿಸಿರುವುದರಿಂದಲೇ ಇದಕ್ಕೆ 'ಗೆಜ್ಜೆ ಅಟವಿ' ಎಂದು ಹೆಸರು. ಮೆಟ್ರಿಕ ಪದ್ಧತಿಯ ಹೊಸ ಮಾಪನಗಳು ಬಂದ ಬಳಿಕ ಇಂಥ ವಸ್ತುಗಳು ಮರೆಗೆ ಸರಿಯುತ್ತಿವೆ.

೨. ಚಟಾಕು



ಚಟಾಕು ದವಸ ಧಾನ್ಯಗಳನ್ನು ಅಳತೆ ಮಾಡಲು ಬಳಸುತ್ತಿದ್ದ ಪರಿಕರ. ಇದು ಸುಮಾರು ನಾಲ್ಕು ಇಂಚು ಉದ್ದ, ಎರಡು ಇಂಚು ವ್ಯಾಸ ಇದೆ. ಮೇಲ್ಭಾಗ ಮತ್ತು ತಳಭಾಗದಲ್ಲಿ ಅರ್ಧ ಇಂಚು ಅಗಲದ ಒಂದೊಂದು ಪಟ್ಟಿ ಇದೆ. 'ಚಟಾಕು' ಪಾವಿನ ಅರ್ಧ ಭಾಗವಾಗಿರುತ್ತದೆ. ಇದನ್ನು ಕಬ್ಬಿಣದ ತಗಡಿನಿಂದ ತಯಾರಿಸಿದ್ದಾರೆ. ಇದನ್ನು ಅಡುಗೆ ಮನೆಗಳಲ್ಲಿ ಹಾಗೂ ವ್ಯಾಪಾರ ಕೇಂದ್ರಗಳಲ್ಲಿ ಬಳಕೆ ಮಾಡುತ್ತಿದ್ದರು.

೩. ಚಿನಿವಾರ ತಕ್ಕಡಿ



ಚಿನ್ನ - ಬೆಳ್ಳಿಯಂಥ ಅಮೂಲ್ಯ ಲೋಹಗಳನ್ನು ತೂಕ ಮಾಡುವುದಕ್ಕೆ ಬಳಸುವ ಸಾಧನ. ತಕ್ಕಡಿದಿಂಡು ಸುಮಾರು ಏಳು ಇಂಚು ಉದ್ದವಿದ್ದು, ಮಧ್ಯಭಾಗದಲ್ಲಿ ಒಂದು ಹಿಡಿಕೆ ಇದೆ. ದಿಂಡಿನ ಕೆಳಭಾಗದಲ್ಲಿ ಒಂದು ಮುಳ್ಳು ಇದೆ. ತಕ್ಕಡಿ ದಿಂಡಿನ ಎರಡು ತುದಿಗೂ ಒಂದು ಅಡಿ ಉದ್ದದ ಮೂರು ದಾರಗಳಿಂದ ತಕ್ಕಡಿಯ ತಟ್ಟೆಗಳನ್ನು ಕಟ್ಟಿದ್ದಾರೆ. ತಕ್ಕಡಿಯ ಮಧ್ಯಭಾಗದ ಹಿಡಿಕೆಯನ್ನು ಕೈಯಿಂದ ಎತ್ತಿ ಹಿಡಿದು ತೂಕ ಮಾಡುತ್ತಾರೆ. ಎಡಭಾಗದ ತಕ್ಕಡಿ ತಟ್ಟೆಯಲ್ಲಿ ತೂಕದ ಕಲ್ಲನ್ನೂ ಮತ್ತು ಬಲಭಾಗದ ತಕ್ಕಡಿ ತಟ್ಟೆಯಲ್ಲಿ ಚಿನ್ನ-ಬೆಳ್ಳಿ(ಆಭರಣ)ಗಳನ್ನೂ ಇಟ್ಟು ತೂಕಮಾಡುವುದು ಸಂಪ್ರದಾಯ ಹಾಗೂ ನಿಯಮ.





೮. ದಂಡಿಗೆ ಅಥವಾ ತಕ್ಕಡಿ



ತೂಕಮಾಡಲು ಕಬ್ಬಿಣದ ಮಾಪಕಗಳು ಬರುವ ಮುನ್ನ ಹಳ್ಳಿಗಳಲ್ಲಿ ಬೆಳೆದ ಬೆಳೆಗಳನ್ನು ಮತ್ತು ಇತರ ವಸ್ತುಗಳನ್ನು ತೂಕ ಮಾಡುವುದಕ್ಕೆ ಬಳಸುತ್ತಿದ್ದ ಸಾಧನ. ಇದರಲ್ಲಿ ದಿಂಡು, ಪಲ್ಲಿ ಎಂಬ ಭಾಗಗಳಿವೆ. ದಿಂಡನ್ನು ಸುಮಾರು ನಾಲ್ಕರಿಂದ ಐದು ಅಡಿಗಳಷ್ಟು ಉದ್ದದ ಬಲವಾದ ಮರದ ದಂಡವೊಂದರಿಂದ ತಯಾರಿಸುತ್ತಾರೆ. ಎರಡು ತುದಿಗಳಲ್ಲಿ ಕೊರೆದ ರಂಧ್ರಗಳ ಮೂಲಕ ನೂಲು ಅಥವಾ ಹಗ್ಗದಿಂದ ಜೋತಾಡಿಸಲಾಗುವ ತಟ್ಟೆಯಾಕಾರದ ಪಲ್ಲಿಗಳಿರುತ್ತವೆ. ಇವು ಮಧ್ಯದಲ್ಲಿ ಒಂದೆರಡಿಂಚು ತಗ್ಗಾಗಿ ವೃತ್ತಾಕಾರದ ರಚನೆಗಳಾಗಿವೆ. ಇವನ್ನು ಬಿದಿರಿನ ಸೀಳುಗಳಿಂದ ಹೆಣೆದು ಅದರ ರಂಧ್ರಗಳು ಮುಚ್ಚಿಹೋಗುವಂತೆ ಗೀರಕ್ಕಿ, ಸುಟ್ಟ ಐಟ್ಟೆಯ ಬೂದಿಯನ್ನು ಚೆನ್ನಾಗಿ ಮಿಶ್ರಮಾಡಿಕೊಂಡು ಲೇಪಿಸುತ್ತಾರೆ. ಪಲ್ಲಿಗಳ ವ್ಯಾಸವು ಸುಮಾರು ಹನ್ನೆರಡರಿಂದ ಇಪ್ಪತ್ತು ಇಂಚು ಇರುತ್ತವೆ. ದಂಡಿಗೆಯಲ್ಲಿ ಗಾತ್ರ, ವಿನ್ಯಾಸಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ.

೯. ಪಾವು



ದವಸ ಧಾನ್ಯಗಳನ್ನು ಅಳತೆ ಮಾಡಲು ಬಳಸುತ್ತಿದ್ದ ಸಾಧನ. ಇದು ಸುಮಾರು ಅರ್ಧ ಅಡಿ ಎತ್ತರ ಮೂರು ಇಂಚು ವ್ಯಾಸವಿದೆ. ಇದರ ರಚನೆ ಮತ್ತು ವಿನ್ಯಾಸಗಳಲ್ಲಿ ಹಲವು ವ್ಯತ್ಯಾಸಗಳಿವೆ. ಸಾಮಾನ್ಯವಾಗಿ ಇದರ ಮೇಲ್ಭಾಗ ಮತ್ತು ತಳಭಾಗದಲ್ಲಿ ಒಂದು ಇಂಚು ಅಗಲದ ಪಟ್ಟಿಗಳನ್ನು ಹಾಕಿ ತಯಾರಿಸಿರುವುದು ಹೆಚ್ಚು. ಇದು ಸೇರಿನ ನಾಲ್ಕನೆಯ ಒಂದು ಭಾಗವಿದೆ. ಈ ಅಳತೆ ಮಾಪಕವನ್ನು ಅಡುಗೆಮನೆಯಲ್ಲೂ ವ್ಯಾಪಾರ ಕೇಂದ್ರಗಳಲ್ಲೂ ಬಳಸುತ್ತಿದ್ದರು. ಕಬ್ಬಿಣದ ತಗಡಿನಿಂದ ಪಾವನ್ನು ತಯಾರಿಸುತ್ತಾರೆ.





೬. ಪಂಚೇರುಗಲ್ಲು



ವಸ್ತು, ದವಸ ಧಾನ್ಯಗಳನ್ನು ತಕ್ಕಡಿಯಲ್ಲಿಟ್ಟು ತೂಕ ಮಾಡುವ ಸಂದರ್ಭದಲ್ಲಿ ತಕ್ಕಡಿಯ ಒಂದು ಪರಡಿ ಅಥವಾ ತಟ್ಟೆಯಲ್ಲಿಟ್ಟು ತೂಕ ಮಾಡುವುದಕ್ಕೆ ಬಳಸುತ್ತಿದ್ದ ವಸ್ತು. ಇದು ಇವತ್ತಿನ ಐದು ಕಿ.ಗ್ರಾಂ ತೂಕವನ್ನು ಒಳಗೊಂಡಿದೆ. ಕಬ್ಬಿಣದ ತೂಕದ ಕಲ್ಲುಗಳು ಬಳಕೆಗೆ ಬರುವ ಪೂರ್ವದಲ್ಲಿ ಈ ಕಲ್ಲುಗಳನ್ನೇ ತೂಕ ಮಾಡಲು ಬಳಸಲಾಗುತ್ತಿತ್ತು. ಆಧುನಿಕ ತೂಕ ಪದ್ಧತಿಯ ಬಳಕೆ ಹೆಚ್ಚಾದ ಪರಿಣಾಮವಾಗಿ ಪಾರಂಪರಿಕವಾದ ತೂಕದ ಕಲ್ಲುಗಳ ಉಪಯೋಗ ಕಡಿಮೆಯಾಗಿದೆ.

೭. ಮಣಗಲ್ಲು



ಕಾಳು, ತರಕಾರಿ, ದವಸ-ಧಾನ್ಯ ಹಾಗೂ ವಸ್ತುಗಳನ್ನು ತಕ್ಕಡಿಯಲ್ಲಿಟ್ಟು ತೂಕ ಮಾಡುವ ಸಂದರ್ಭದಲ್ಲಿ ದಂಡಿಗೆಯ ಒಂದು ಪಲ್ಲಿ ಅಥವಾ ಪರಡಿ ಅಥವಾ ತಟ್ಟೆಯಲ್ಲಿಟ್ಟು ತೂಕ ಮಾಡುವುದಕ್ಕೆ ಬಳಸುತ್ತಿದ್ದ ಸಾಧನ. ಇದು ಇವತ್ತಿನ ೧೩ಕಿ.ಗ್ರಾಂ ಭಾರದಷ್ಟಿದೆ. ಜನಪದರು ಈ ಕಲ್ಲನ್ನು ಮಣಗಲ್ಲು ಎನ್ನುತ್ತಾರೆ. ಹಿಂದಿನ ದಿನಗಳಲ್ಲಿ ತೂಕಕ್ಕೆ ದಂಡಿಗೆ ಬಳಕೆಯಾಗುತ್ತಿದ್ದ ಕಾಲದಲ್ಲಿ ಇದರ ಬಳಕೆ ಹೆಚ್ಚಾಗಿತ್ತು. ವಿಶೇಷವಾಗಿ ರೈತರಲ್ಲಿ ನಡೆಯುವ ವ್ಯವಹಾರದ ಸಂದರ್ಭದಲ್ಲಿ ಈ ಕಲ್ಲು ಹೆಚ್ಚಾಗಿ ಬಳಕೆಯಾಗುತ್ತಿತ್ತು. ಈ ಕಲ್ಲು ವೃತ್ತಾಕಾರವಾಗಿದ್ದು ೫ ಇಂಚು ಎತ್ತರ, ೨೦ ಇಂಚು ವ್ಯಾಸವಿದೆ. ತಳ ಮತ್ತು ಮೇಲ್ಭಾಗ ಚಪ್ಪಟೆಯಾಗಿದೆ. ಮೇಲ್ಭಾಗದಲ್ಲಿ ಹೂವಿನ ಚಿತ್ರವಿದೆ. ಆಧುನಿಕ ತೂಕ ಪದ್ಧತಿಯ ಬಳಕೆ ಸರಳ ಹಾಗೂ ಪಕ್ಕ (ನಿಖರ)ವಾಗಿರುವ ಪರಿಣಾಮವಾಗಿ ಪಾರಂಪರಿಕ ತೂಕದ ಕಲ್ಲುಗಳ ಉಪಯೋಗ ಕಡಿಮೆಯಾಗಿದೆ.





೮. ಕೊಳಗ



ಇದನ್ನು 'ಗೊರಸು, ಅಳತೆ ಪಾತ್ರೆ'ಎಂದೂ ಸಹ ಕರೆಯುವರು. ಇದನ್ನು ಕಬ್ಬಿಣದ ತಗಡಿನಿಂದ ಮಾಡಲಾಗಿದ್ದು, ಚಿಕ್ಕ ಅಂಡೆಯ ಆಕೃತಿಯಲ್ಲಿರುತ್ತದೆ. ಇದನ್ನು ಭತ್ತ, ರಾಗಿ, ಹುಣಸೆ ಹಣ್ಣು, ಕಡಲೆಕಾಯಿ ಹಾಗೂ ಇತರೆ ಎಲ್ಲಾ ರೀತಿಯ ಧಾನ್ಯಗಳನ್ನು ಅಳತೆ ಮಾಡಲು ಬಳಸುತ್ತಿದ್ದರು. ಒಂದು ಕೊಳಗ ಐದು ಸೇರು ಅಕ್ಕಿಯನ್ನು ಹಿಡಿಯುತ್ತದೆ. ಹಿಂದಿನ ಕಾಲದಲ್ಲಿ ಒಂದು ಸೇರು ಭತ್ತವನ್ನು ಕೊಟ್ಟು ಒಂದು ಕೊಳಗ ಗೆಣಸನ್ನು ತೆಗೆದುಕೊಳ್ಳುತ್ತಿದ್ದರು.

೯. ಸೇರು



ಸೇರು ಜನಪದರು ಬಳಸುತ್ತಿದ್ದಂತಹ ಒಂದು ಪ್ರಮುಖವಾದ ಮಾಪನವಾಗಿದ್ದು, ಇದನ್ನು ಕಬ್ಬಿಣದ ತಗಡಿನಿಂದ ಮಾಡಲಾಗಿರುತ್ತದೆ. ಇದನ್ನು ಭತ್ತ, ರಾಗಿ ಹಾಗೂ ಎಲ್ಲಾ ರೀತಿಯ ದವಸ ಧಾನ್ಯಗಳನ್ನು ಅಳತೆ ಮಾಡಲು ಬಳಸುತ್ತಿದ್ದರು. ನಾಲ್ಕು ಪಾವು ಅಕ್ಕಿ ಹಾಕಿದರೆ ಒಂದು ಸೇರು ಅಕ್ಕಿ ಆಗುತ್ತದೆ. ಜನಪದರು ಅಡುಗೆಯನ್ನು ಮಾಡುವಾಗ ಮನೆಯಲ್ಲಿ ಎಷ್ಟು ಜನರು ಇದ್ದಾರೆ ಎಂದು ತಿಳಿದು ಅಕ್ಕಿ, ರಾಗಿ, ಅಥವಾ ಧಾನ್ಯಗಳನ್ನು ಅಳತೆ ಮಾಡಿ ಹಾಕುತ್ತಿದ್ದರು. ಅಲ್ಲದೇ ಮದುವೆಯಾದಾಗ ಸೊಸೆಯಾದವಳು ಮೊದಲಿಗೆ ಅತ್ತೆಯ ಮನೆಗೆ ಬಂದಾಗ ಒಂದು ಸೇರಿನಲ್ಲಿ ಅಕ್ಕಿ ತುಂಬಿ ಅದರ ಮೇಲೆ ಎಲೆ, ಅಡಿಕೆ, ಬೆಲ್ಲವನ್ನಿಟ್ಟು ಅದನ್ನು ಬಲಗಾಲಿನಿಂದ ಒದ್ದು ಒಳಗೆ ಹೋಗುವ ಸಂಪ್ರದಾಯವಿದೆ.

ಅಡಿ ಟಿಪ್ಪಣಿಗಳು

೧. ರಮೇಶ ಸಾ.ಚಿ., ಜಾನಪದ ವಸ್ತುಕೋಶ, ಕನ್ನಡ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ೨೦೧೩, ಪು -೧೧೯





ಅಧ್ಯಾಯ ೫

ಜನಪದ ವಸ್ತುಗಳ ಆಧುನಿಕ ಸ್ಥಿತ್ಯಂತರ

ಯಾವುದೇ ವಸ್ತುವಾಗಲಿ ಅಥವಾ ವ್ಯಕ್ತಿಯಾಗಲಿ ಕಾಲಕ್ಕೆ ತಕ್ಕಂತೆ ಬದಲಾಗುವುದು ಜಗದ ನಿಯಮ. ಇದರಂತೆ ಜನಪದರು ಬಳಸುತ್ತಿದ್ದಂತಹ ವಸ್ತುಗಳು ಹಾಗೂ ಉಪಕರಣಗಳೂ ಸಹ ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ಹೊಂದಿದೆ. ಹೀಗೆಂದ ಮಾತ್ರಕ್ಕೆ ಎಲ್ಲ ವಸ್ತುಗಳು ತಮ್ಮ ರೂಪಗಳನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ ಎಂದಲ್ಲ ತಮ್ಮ ರೂಪಗಳಿಗೆ ಬದಲಾಗಿ ಹೊಸ ಹೊಸ ರೂಪಗಳನ್ನು ಪಡೆದುಕೊಂಡಿದೆ. ಇವು ಬೇರೆ ಬೇರೆ ರೀತಿಯ ಆಕಾರ, ರೂಪಗಳಿಂದ ಇಂದೂ ಸಹ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಂಡಿದೆ. ಅಲ್ಲದೇ ಇತ್ತೀಚಿನ ದಿನಗಳಲ್ಲಿ ಬೇರೆ ಬೇರೆ ಲೋಹಗಳಿಂದ ತಯಾರಾಗುತ್ತಿವೆ. ಎಲ್ಲ ವಸ್ತುಗಳು ತಮ್ಮ ಉಪಕರಣಗಳು ಆಧುನಿಕ ಕಾಲಕ್ಕೆ ತಕ್ಕಂತೆ ಸ್ಥಿತ್ಯಂತರಗೊಂಡಿರುವುದನ್ನು ನಾವು ನೋಡಬಹುದು.

ಜನಪದರು ವ್ಯವಸಾಯದ ಸಂದರ್ಭದಲ್ಲಿ ಹೊಲಗದ್ದೆಗಳಿಂದ ತಾವು ಬೆಳೆದಂತಹ ಬೆಳೆಗಳನ್ನು ಮನೆಗೆ ತರಲು ಎತ್ತಿನ ಗಾಡಿಯನ್ನು ಬಳಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಎತ್ತಿನ ಗಾಡಿಯ ಬದಲಾಗಿ ಟ್ರಾಕ್ಟರ್‌ಗಳನ್ನು ಬಳಕೆ ಮಾಡಲಾಗುತ್ತಿದೆ. ಹಿಂದೆ ದನಗಳನ್ನು ಬಳಸಿಕೊಂಡು ಎತ್ತಿನ ಗಾಡಿಯನ್ನು ಓಡಿಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಕೇವಲ ಒಬ್ಬ ವ್ಯಕ್ತಿ ಮಾತ್ರ ಟ್ರಾಕ್ಟರ್ ಅನ್ನು ಯಾವುದೇ ಪ್ರಾಣಿಗಳನ್ನು ಬಳಸಿಕೊಳ್ಳದೇ ಓಡಿಸುತ್ತಾನೆ. ಎತ್ತಿನಗಾಡಿ ಚಲಿಸಲು ತುಂಬಾ ಸಮಯ ತೆಗೆದುಕೊಳ್ಳುತ್ತಿತ್ತು. ಆದರೆ ಟ್ರಾಕ್ಟರ್‌ಗಳು ಅತ್ಯಂತ ವೇಗವಾಗಿ ಚಲಿಸುವುದರಿಂದ ಸಮಯ ಉಳಿತಾಯವಾಗಿದೆ. ಅಲ್ಲದೇ ಟ್ರಾಕ್ಟರ್ ಹೆಚ್ಚಿನ ರೀತಿಯಲ್ಲಿ ಧಾನ್ಯಗಳನ್ನು ವಸ್ತುಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ರವಾನಿಸುತ್ತದೆ.

ಭತ್ತವನ್ನು ಹಾಗೂ ಎಲ್ಲಾ ರೀತಿಯ ಧಾನ್ಯಗಳನ್ನು ಕೇರಲು ಬಳಸುತ್ತಿದ್ದಂತಹ ಬಿದಿರಿನ ಮೊರದ ಬದಲಿಗೆ ಪ್ಲಾಸ್ಟಿಕ್ ಮೊರವನ್ನು ಇತ್ತೀಚಿನ ದಿನಗಳಲ್ಲಿ ಬಳಸಲಾಗುತ್ತಿದೆ. ಹಿಂದೆ ಬಳಸುತ್ತಿದ್ದಂತಹ ಮೊರಗಳು ಬಿದಿರಿನ ಅಚ್ಚೆಗಳಿಂದ ಎಣೆಯಲಾಗಿದ್ದು, ಇವು ನೀರಿನಲ್ಲಿ ನೆನೆಸಿದರೆ ಅಥವಾ ಬಿಸಿಲಿನಲ್ಲಿ ಒಣಗಿದರೆ ಬೇಗ ಹಾಳಾಗುತ್ತಿತ್ತು. ಇದಕ್ಕೆ ಮೆಂತ್ಯಾಕಾಳು ಹಾಗೂ ನ್ಯೂಸ್‌ಪೇಪರನ್ನು ಚೆನ್ನಾಗಿ ರುಬ್ಬಿ ಮೊರದ ಸುತ್ತೆಲ್ಲಾ ಸವರಬೇಕಾಗಿತ್ತು. ಆದರೆ ಇತ್ತೀಚಿನ ಪ್ಲಾಸ್ಟಿಕ್ ಮೊರಗಳನ್ನು ನೀರಿನಲ್ಲಿ ತೊಳೆಯಬಹುದು. ಬಿಸಿಲಿನಲ್ಲಿ ಒಣಗಿದರೂ ಇದು ಬೇಗ ಹಾಳಾಗುವುದಿಲ್ಲ. ತುಂಬಾ ದಿನಗಳವರೆಗೆ ಬಾಳಿಕೆಗೆ ಬರುತ್ತದೆ.

ಅಡುಗೆ ಮಾಡಲು ಬಳಸುತ್ತಿದ್ದ ಹಾಗೂ ನೀರು ಕಾಯಿಸಲು ಬಳಸುತ್ತಿದ್ದಂತಹ ಮಣ್ಣಿನ ಮಡಿಕೆಗಳು, ಕುಡಿಕೆಗಳು, ಗುಡಾಣಗಳಿಗೆ ಬದಲಾಗಿ ಇಂದು ಅಲ್ಯೂಮಿನಿಯಂ, ತಾಮ್ರ, ಕಂಚು, ಇತ್ಯಾದಿ ಲೋಹಗಳಿಂದ ಮಾಡಿದ ಪಾತ್ರೆಗಳನ್ನು ಬಳಸಲಾಗುತ್ತಿದೆ. ಮಡಿಕೆ, ಕುಡಿಕೆಗಳು, ಗುಡಾಣ ಇತ್ಯಾದಿಗಳು

ಆಹಾರಗಳನ್ನು ಬೇಯಿಸಲು ಸೂಕ್ತವಾಗಿದ್ದರೂ ಸಹ ಇವುಗಳ ಬಳಕೆ ಕಡಿಮೆ ಸಮಯದ್ದಾಗಿತ್ತು. ಇವುಗಳು ಕೆಳಗೆ ಬಿದ್ದರೆ ಒಡೆದು ಹೋಗುತ್ತಿದ್ದವು. ಆದರೆ ಇತ್ತೀಚಿನ ಲೋಹಗಳ ಪಾತ್ರೆಗಳು ಹೆಚ್ಚು ದಿನ ಬಳಕೆಯಾಗುತ್ತಿದ್ದು ಬೇಗ ಒಡೆದು ಹೋಗುವುದಿಲ್ಲ.

ಉಳುಮೆಯನ್ನು ಮಾಡಲು ಬಳಸುತ್ತಿದ್ದಂತಹ ಕಬ್ಬಿಣದ ಹಾಗೂ ಮರದ ನೇಗಿಲುಗಳ ಬದಲಾಗಿ ಟ್ರಾಕ್ಟರ್‌ಗಳ ಮೂಲಕ ಉಳುಮೆ ಮಾಡಲಾಗುತ್ತಿದೆ. ಹಿಂದೆ ನೇಗಿಲಿಗೆ ಹಸುಗಳನ್ನು ಕಟ್ಟಿಕೊಂಡು ಉಳುಮೆ ಮಾಡಲಾಗುತ್ತಿತ್ತು. ಇದು ತುಂಬಾ ಶ್ರಮದಾಯಕವಾಗಿತ್ತು. ಅಲ್ಲದೇ ತುಂಬಾ ಸಮಯವನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ಈ ಆಧುನಿಕ ಯುಗದಲ್ಲಿ ಕೇವಲ ಒಬ್ಬ ವ್ಯಕ್ತಿ ಟ್ರಾಕ್ಟರ್ ಹೊಡಿಸುವುದರ ಮೂಲಕ ಯಾವುದೇ ಪ್ರಾಣಿಗಳ ಸಹಾಯವಿಲ್ಲದೆ ಭೂಮಿಯನ್ನು ಉಳುಮೆ ಮಾಡಲಾಗುತ್ತಿದೆ. ಇದರಿಂದ ಉಳುವ ಕೆಲಸವು ಅತ್ಯಂತ ಸುಲಭವಾಗಿ ಕಡಿಮೆ ಸಮಯದಲ್ಲಿ ಮುಗಿಯುತ್ತದೆ.

ದೇವರ ಪೂಜೆಯನ್ನು ಮಾಡುವಾಗ ಮಣ್ಣಿನ ದೀಪವನ್ನು ಹಚ್ಚಲಾಗುತ್ತಿತ್ತು. ಆದರೆ ಈಗ ಕಂಚು, ಬೆಳ್ಳಿ, ಚಿನ್ನ ಇತ್ಯಾದಿ ಲೋಹಗಳಿಂದ ತಯಾರಿಸಲಾದ ದೀಪಗಳನ್ನು ಬಳಕೆ ಮಾಡಲಾಗುತ್ತಿದೆ. ಮಣ್ಣಿನ ದೀಪವು ಬೆಂಕಿಯ ಶಾಖಕ್ಕೆ ಬೇಗನೆ ಕಪ್ಪಾಗುತ್ತಿತ್ತು. ಬೇಗ ಹೊಡೆದು ಹಾಳಾಗುತ್ತಿತ್ತು. ಆದರೆ ಲೋಹಗಳು ದೀಪಗಳನ್ನು ನೀರಿನಲ್ಲಿ ತೊಳೆದು ಶುದ್ಧಗೊಳಿಸಿ, ಅದನ್ನು ಮತ್ತೆ ಹೊಸದರ ಹಾಗೆ ಉಪಯೋಗಿಸಲಾಗುತ್ತಿದೆ.

ಬೇಸಿಗೆ ಕಾಲದಲ್ಲಿ ಶೆಖೆಗೆ ಜನಪದರು ಬೀಸಣಿಗೆಯ ಮೂಲಕ ಗಾಳಿಯನ್ನು ಬೀಸಿಕೊಳ್ಳುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಬೀಸಣಿಗೆಯ ಬದಲಾಗಿ ವಿದ್ಯುತ್ ಫ್ಯಾನ್, ಏಸಿಗಳನ್ನು ಬಳಸಲಾಗುತ್ತಿದೆ. ಬೀಸಣಿಗೆಯು ಸ್ವಲ್ಪ ದಿನಗಳಲ್ಲಿಯೇ ಹಾಳಾಗಿ ಹೋಗುತ್ತದೆ. ಆದರೂ ಕೆಲವು ಹಿಂದುಳಿದ ಹಳ್ಳಿಗಳಲ್ಲಿ ಬೀಸಣಿಗೆಯನ್ನು ಬಳಕೆ ಮಾಡುತ್ತಿರುವುದನ್ನು ಈಗಲೂ ಕಾಣಬಹುದಾಗಿದೆ. ಆದರೆ ಏಸಿ ಫ್ಯಾನ್‌ಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಬಳಕೆಯಲ್ಲಿದ್ದು, ಇವುಗಳಿಂದ ಆರೋಗ್ಯಕ್ಕೆ ತೊಂದರೆಗಳುಂಟಾಗುವ ಸಾಧ್ಯತೆಗಳಿದ್ದರು ಇದರ ಬಳಕೆ ಇಂದು ಅನಿವಾರ್ಯವಾಗಿದೆ.

ಮಸಾಲೆ ಪದಾರ್ಥಗಳು, ಚಟ್ನಿ ಅಕ್ಕಿ ಹಿಟ್ಟು, ಇತ್ಯಾದಿಗಳನ್ನು ರುಬ್ಬಲು ಬಳಸುತ್ತಿದ್ದಂತಹ ಒಳಕಲ್ಲಿನ ಬದಲಾಗಿ ವಿದ್ಯುತ್ ಚಾಲಿತ ಮಿಕ್ಸಿ, ಗ್ರೈಂಡರ್‌ಗಳನ್ನು ಇತ್ತೀಚಿಗೆ ಉಪಯೋಗಿಸಲಾಗುತ್ತಿದೆ. ಒಳಕಲ್ಲಿನಲ್ಲಿ ಏನನ್ನಾದರು ರುಬ್ಬುವ ಕೆಲಸ ತುಂಬಾ ಶ್ರಮದಾಯಕವಾದದ್ದು. ಇದರಿಂದ ಮನೆಯ ಗರತಿಯರು ತುಂಬಾ ಸಮಯವನ್ನು ರುಬ್ಬುವುದಕ್ಕೆ ಕೊಡಬೇಕಾಗಿತ್ತು. ಜನಪದರು ಬಳಸುತ್ತಿದ್ದಂತಹ ಕಬ್ಬಿಣದ, ಮಣ್ಣಿನ ಹಾಗೂ ಕಲ್ಲಿನ ಒಲೆಗಳ ಬದಲಾಗಿ ಇತ್ತೀಚಿನ ದಿನಗಳಲ್ಲಿ ಗ್ಯಾಸ್ ಸ್ಟೌವ್ ಹಾಗೂ ಇತರೆ ಅನಿಲಗಳ ಸ್ಟೌವ್‌ಗಳನ್ನು ಬಳಸಿ ಅಡುಗೆ ಮಾಡಲಾಗುತ್ತದೆ. ಇದರಿಂದ ಬಹು ಬೇಗನೆ ಅಡುಗೆಯನ್ನು ಮಾಡಲು ಸಹಾಯಕವಾಗಿದೆ. ಸೇರು, ಪಾವು, ಚಟಾಕು, ಕೊಳಗ, ಇತ್ಯಾದಿ ಅಳತೆ ಪ್ರಮಾಣಗಳ ಬಳಕೆಯು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ. ಇವುಗಳ ಬದಲಾಗಿ ಕ್ವಿಂಟಲ್, ಕೆ.ಜಿ.,ಗ್ರಾಂ, ಕಿಲೋಗ್ರಾಂ ಇತ್ಯಾದಿ ಪ್ರಮಾಣಗಳ ಎಲೆಕ್ಟ್ರಾನಿಕ್ ಮಿಷನ್‌ಗಳನ್ನು ಹೆಚ್ಚಾಗಿ ಬಳಕೆ ಮಾಡಲಾಗುತ್ತಿದೆ.

ರೊಟ್ಟಿಯನ್ನು ಬೇಯಿಸಲು ಬಳಸುತ್ತಿದ್ದಂತಹ ಅಂಚಿನ ಬದಲಾಗಿ ತವಾ ಬಂದಿದ್ದು, ಇದು ಜನರನ್ನು ಆಕರ್ಷಣೆಗೊಳಪಡಿಸಿದೆ. ಹಿಂದೆ ರಾಗಿ ಹಿಟ್ಟನ್ನು ಮಾಡಲು ಬಳಸುತ್ತಿದ್ದಂತಹ ರಾಗಿಕಲ್ಲಿನ ಬದಲಿಗೆ ವಿದ್ಯುತ್ ಚಾಲಿತ ರಾಗಿಮಿಲ್ಲು ಇತ್ತೀಚಿನ ದಿನಗಳಲ್ಲಿ ಬಂದಿದ್ದು, ರಾಗಿಕಲ್ಲನ್ನು ಸುತ್ತಿಸಲು ಬಳಸುತ್ತಿದ್ದಂತಹ ಶ್ರಮವು ಉಳಿತಾಯವಾಗಿದೆ.

ಜನಪದರು ಬಳಸುತ್ತಿದ್ದಂತಹ ಮರದ ಸೌಟು, ಮಣ್ಣಿನ ತಟ್ಟೆಗಳು, ಮಣ್ಣಿನ ಲೋಟಗಳು ಇತ್ಯಾದಿ ವಸ್ತುಗಳ ಬದಲಿಗೆ ಪ್ಲಾಸ್ಟಿಕ್, ಕಂಚು, ಹಿತ್ತಾಳೆ, ತಾಮ್ರ, ಬೆಳ್ಳಿ ಇತ್ಯಾದಿ ಲೋಹಗಳಿಂದ ತಯಾರಿಸಲಾದ ವಸ್ತುಗಳನ್ನು ಬಳಕೆ ಮಾಡಲಾಗುತ್ತಿದೆ. ಅಡುಗೆ ಮಾಡಲು ಬಳಸುತ್ತಿದ್ದಂತ ಮಣ್ಣಿನ ಮಡಿಕೆಗಳ ಬದಲಿಗೆ ಅಲ್ಯೂಮಿನಿಯಂ ಪಾತ್ರೆಗಳು ಹಾಗೂ ಕುಕ್ಕರ್ಗಳು ಬಂದಿವೆ. ನೀರನ್ನು ತುಂಬಿಡಲು ಬಳಸುತ್ತಿದ್ದಂತಹ ಮಣ್ಣಿನ ಮಡಿಕೆಗಳ ಬದಲಿಗೆ ಪ್ಲಾಸ್ಟಿಕ್, ಕಂಚು, ತಾಮ್ರ ಮೊದಲಾದ ಲೋಹಗಳಿಂದ ಮಾಡಿದ ಬಿಂದಿಗೆಗಳನ್ನು ಬಳಸಲಾಗುತ್ತಿದೆ. ನೀರು ಕುಡಿಯಲು ಬಳಸುತ್ತಿದ್ದಂತಹ ಚೊಂಬುಗಳ ಬದಲಿಗೆ ಇತ್ತೀಚೆಗೆ ಗಾಜು ಮತ್ತು ಪ್ಲಾಸ್ಟಿಕ್‌ಗಳಿಂದ ಮಾಡಲಾಗಿರುವ ಜಗ್ಗುಗಳನ್ನು ಉಪಯೋಗಿಸಲಾಗುತ್ತದೆ. ಮಗುವನ್ನು ಮಲಗಿಸಲು ಹಿಂದೆ ಬಳಸುತ್ತಿದ್ದಂತಹ ಮರದ ತೊಟ್ಟಿಲಿನ ಬದಲಾಗಿ ಇಂದು ಕಬ್ಬಿಣ ಮತ್ತು ಪ್ಲಾಸ್ಟಿಕ್ ಸಾಮಾನುಗಳಿಂದ ತಯಾರಿಸಿದ ಅಲಂಕಾರಿಕ ತೊಟ್ಟಿಲುಗಳನ್ನು ಬಳಸಲಾಗುತ್ತಿದೆ. ಪೂಜೆ ಬುಟ್ಟಿ, ದೀಪಾಲೆ ಕಂಬಗಳು, ಅಕ್ಷತೆ ಬಟ್ಟಲು, ಆರತಿ ತಟ್ಟೆ ಮೊದಲಾದ ವಸ್ತುಗಳನ್ನು ಇತ್ತೀಚಿನ ದಿನಗಳಲ್ಲಿ ಕಂಚು, ತಾಮ್ರ, ಬೆಳ್ಳಿ ಮುಂತಾದ ಲೋಹಗಳಿಂದ ಮಾಡಿದ ವಸ್ತುಗಳನ್ನು ಬಳಸಲಾಗುತ್ತಿದೆ. ಇವುಗಳನ್ನು ಜನರನ್ನು ಹೆಚ್ಚಾಗಿ ಆಕರ್ಷಣೆಗೆ ಒಳಪಡಿಸಿವೆ.

ಹೀಗೆ ಜನಪದರು ಬಳಸುತ್ತಿದ್ದಂತಹ ಅನೇಕ ವಸ್ತುಗಳು ಆಧುನಿಕ ಯುಗದಲ್ಲಿ ತುಂಬಾ ಬದಲಾವಣೆಯನ್ನು ಹೊಂದಿದ್ದು, ತಮ್ಮ ಮೂಲ ರೂಪಕ್ಕೆ ಬದಲಾಗಿ ಹೊಸ ಹೊಸ ರೂಪವನ್ನು ಪಡೆದುಕೊಂಡಿದೆ. ಏನೇಯಾದರು ಜನಪದರು ಅಂದು ತಾವು ತೋರಿಸಿಕೊಟ್ಟಂತಹ ಹಾದಿಯಲ್ಲೇ ನಡೆಯುತ್ತಿರುವುದಂತು ನಿಜ. ಇಂದು ಜನರನ್ನು ಆಕರ್ಷಿಸುವಂತಹ ಅನೇಕ ವಸ್ತುಗಳು ಮಾರುಕಟ್ಟೆಯಲ್ಲಿ ಬಂದಿರುವುದನ್ನು ನಾವು ನೋಡಬಹುದು. ಈ ಎಲ್ಲಾ ವಸ್ತುಗಳು ಇಂದು ಹೊಸ ಹೊಸದಾಗಿ ಬಣ್ಣ ಬಣ್ಣಗಳಿಂದ ಕಂಗೊಳಿಸತ್ತಿವೆ. ಹಿಂದೆ ಉಪಯೋಗಿಸುತ್ತಿದ್ದಂತಹ ವಸ್ತುಗಳೆಲ್ಲವೂ ತುಂಬಾ ಶ್ರಮದಾಯಕವಾಗಿ ಬಳಸುವಂತದ್ದಾಗಿದ್ದವು. ಅಲ್ಲದೇ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವಂತಹದ್ದಾಗಿತ್ತು. ಅವುಗಳಿಂದ ಎಷ್ಟು ಉಪಯೋಗವಿದೆಯೋ ಅಷ್ಟೇ ಶ್ರಮವನ್ನು ಖರ್ಚು ಮಾಡಬೇಕಾಗಿತ್ತು.

ಮಹಿಳೆಯರು ಬಳಸುವ ಅಲಂಕಾರಿಕ ವಸ್ತುಗಳಲ್ಲಿ ಮಾರ್ಪಾಡು ಬಂದಿವೆ. ಮೂಗುತಿ, ಉಂಗುರ, ಬಳೆಗಳು, ಕಾಲುಗೆಜ್ಜೆ, ಸೊಂಟದ ಪಟ್ಟಿಗಳು ಚಿನ್ನ-ಬೆಳ್ಳಿಗಳಿಂದ ಮಾಡಿಸಿಕೊಳ್ಳುತ್ತಿದ್ದಾರೆ. ಕೆಲವರು ಪ್ಲಾಟಿನಂ ಕಡೆಗೆ ಒಲವು ತೋರಿದ್ದಾರೆ. ಮಹಿಳೆಯ ಮುಖವು ಅಂದವಾಗಿಕಾಣಲು ಮಾರುಕಟ್ಟೆಯಲ್ಲಿ ಅಲಂಕಾರಿಕ ಪ್ರಸಾದನಗಳು ಬಂದಿವೆ. ಮರದ ಬಾಚಣಿಯ ಸ್ಥಾನವನ್ನು ಪ್ಲಾಸ್ಟಿಕ್ ಬಾಚಣಿಗೆಯು

ಆವರಿಸಿದೆ. ವಿವಿಧ ಬಗೆಯ ಪ್ಲಾಸ್ಟಿಕ್ ಆಟಸಾಮಾನುಗಳು, ಎಲೆಕ್ಟ್ರಿಕ್ ಬೈಕ್‌ಗಳು, ರಿಮೋಟ್ ಕಂಟ್ರೋಲ್ ಕಾರುಗಳು, ಇತ್ಯಾದಿಗಳು ಮಾರುಕಟ್ಟೆಗೆ ಬಂದಿರುವುದರಿಂದ ಮರದ ಆಟಿಕೆಗಳು ಕಣ್ಮರೆಯಾಗಿವೆ. ವಿಜ್ಞಾನ ಸಂಶೋಧನೆಯ ಫಲವಾಗಿ ಪಶುವೈದ್ಯಕೀಯ ಪದ್ಧತಿಯಲ್ಲಿ ಸಾಕಷ್ಟು ಬದಲಾವಣೆಯನ್ನು ಕಂಡಿದ್ದೇವೆ. ಹಿಂದೆ ಗೊಟ್ಟದಲ್ಲಿ ಔಷಧಿಯನ್ನು ಉಯ್ಯುತ್ತಿದ್ದರು. ಆದರೆ ಇಂದು ಔಷಧಿಯು ಪ್ರಾಣಿಯ ದೇಹಕ್ಕೆ ಸೇರಲು ಇಂಜೆಕ್ಷನ್ ಸಿರೆಂಜ್‌ಗಳ ಬಳಕೆ ಮಾಡುತ್ತಿದ್ದಾರೆ. ತರಕಾರಿ, ಕಾಳು, ಧವಸಧಾನ್ಯಗಳನ್ನು ತೂಕ ಹಾಕಲು ಸೇರು, ಪಾವು, ಚಟಾಕು, ತೂಕದ ತಕ್ಕಡಿಯನ್ನು ಬಳಸುತ್ತಿದ್ದರೆ, ಈಗ ತೂಕದ ಎಲೆಕ್ಟ್ರಿಕ್ ಮಿಶನ್‌ಗಳು ಬಂದಿವೆ.

ಆದರೆ ಇತ್ತೀಚಿನ ದಿನಗಳಲ್ಲಿ ಬಳಸಲಾಗುತ್ತಿರುವ ವಸ್ತುಗಳೆಲ್ಲವೂ ಹೆಚ್ಚಾಗಿ ಜನರ ಶ್ರಮವನ್ನು ಖರ್ಚು ಮಾಡದೆ ಸುಲಭ ರೀತಿಯಲ್ಲಿ ಬಳಸುವಂತಹದ್ದಾಗಿದೆ. ಅಲ್ಲದೇ ಸಮಯವನ್ನು ಉಳಿತಾಯ ಮಾಡುವಂತಹದ್ದಾಗಿದೆ. ಹಿಂದೆ ವ್ಯವಸಾಯದಲ್ಲಿ ಹತ್ತು ಇಪ್ಪತ್ತು ಜನರು ಮಾಡುತ್ತಿದ್ದಂತಹ ಕೆಲಸವನ್ನು ಇಂದು ಕೇವಲ ಒಂದು ಯಂತ್ರವು ನಿರ್ವಹಿಸುತ್ತದೆ. ಉದಾಹರಣೆಗೆ ಹಿಂದೆ ಭತ್ತವನ್ನು ಕಟಾವು ಮಾಡುವಾಗ ಅದಕ್ಕೆ ತುಂಬಾ ಆಳುಗಳ ಅವಶ್ಯಕತೆಯಿದೆ. ಅಲ್ಲದೆ ಭತ್ತವನ್ನು ಒಕ್ಕಣೆ ಮಾಡಿ ಮನೆಗೆ ತರುವಷ್ಟರಲ್ಲಿ ಹೆಚ್ಚಿನ ಶ್ರಮ ಹಾಗೂ ಸಮಯವನ್ನು ತೆಗೆದುಕೊಳ್ಳುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಭತ್ತವನ್ನು ಒಕ್ಕಣೆ ಮಾಡಲು ಅನೇಕ ಯಂತ್ರಗಳು ಬಂದಿದ್ದು, ಇದು ಇಪ್ಪತ್ತು ಜನ ಹಾಳುಗಳು ಮಾಡುವ ಕೆಲಸವನ್ನು ಕಡಿಮೆ ಸಮಯದಲ್ಲಿ ಮಾಡಿಮುಗಿಸುತ್ತದೆ. ಇದರಿಂದ ಹೆಚ್ಚಿನ ಅನುಕೂಲ ಇದ್ದರೂ ಸಹ ಹಳ್ಳಿಗಳ್ಳಲಿನ ಕೂಲಿ ಮಾಡುವ ಜನರಿಗೆ ಕೆಲಸವಿಲ್ಲದಂತಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಅದೇನೆ ಇರಲಿ ಇಂದಿನ ಕಾಲಕ್ಕೆ ಅವುಗಳ ಅನಿವಾರ್ಯತೆಯು ಹೆಚ್ಚಾಗಿದೆ.

ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಇಂದು ಅನೇಕ ರೀತಿಯ ಯಂತ್ರೋಪಕರಣಗಳು ಬಂದಿದ್ದು, ವ್ಯವಸಾಯವನ್ನು ಮಾಡಲು ಸುಲಭವಾಗಿದೆ. ಇದರಿಂದ ಅನುಕೂಲದ ಜೊತೆಗೆ ಅನಾನುಕೂಲವೂ ಇದೆ. ಗೃಹ ಬಳಕೆಯ ವಸ್ತುಗಳನ್ನು ನೋಡುವುದಾದರೆ ಇಂದು ಹೆಚ್ಚಿನದಾಗಿ ಪ್ಲಾಸ್ಟಿಕ್ ವಸ್ತುಗಳ ಬಳಕೆಯು ಹೆಚ್ಚಾಗಿದೆ. ಹಿಂದೆ ಇದ್ದಂತಹ ಮಣ್ಣಿನ ತಟ್ಟೆಗಳು, ಲೋಟಗಳು, ಬಿಂದಿಗೆಗಳು, ಚಮಚಗಳು ಇತ್ಯಾದಿ ಎಲ್ಲಾ ವಸ್ತುಗಳ ಬದಲಾಗಿ ಇಂದು ಪ್ಲಾಸ್ಟಿಕ್ ವಸ್ತುಗಳೇ ಹೆಚ್ಚಾಗಿ ಬಳಕೆಯಾಗುತ್ತಿದೆ. ಅಲ್ಲದೇ ಕುಕ್ಕರ್‌ಗಳು, ಅಲ್ಯೂಮಿನಿಯಂ ಪಾತ್ರೆಗಳು ಹಾಗೂ ಇತರೆ ಲೋಹಗಳಿಂದ ತಯಾರಿಸಿದ ಪಾತ್ರೆಗಳ ಬಳಕೆಯೂ ಹೆಚ್ಚಾಗಿವೆ.ಹೀಗೆ ಹಿಂದೆ ಬಳಸುತ್ತಿದ್ದಂತಹ ವಸ್ತುಗಳೆಲ್ಲವೂ ಇಂದು ಬದಲಾವಣೆಯನ್ನು ಹೊಂದಿ ಉಪಯೋಗಿಸಲ್ಪಡುತ್ತಿವೆ. ಇದರಿಂದ ಅನುಕೂಲ ಹಾಗೂ ಅನಾನುಕೂಲಗಳೆರಡು ಇದೆ. ಜನರು ಕಠಿಣತೆಯಿಂದ ಸರಳತೆಯ ಕಡೆ ವಾಲುವುದರಿಂದ ಆಧುನಿಕ ವಸ್ತುಗಳೂ ಹಾಗೂ ಉಪಕರಣಗಳು ಇಂದಿನ ಜನರ ದಿನನಿತ್ಯ ಉಪಯೋಗದ ವಸ್ತುಗಳಾಗಿ ಬಳಕೆಯಾಗುತ್ತಿವೆ. ಕೆಲವೊಂದು ನಗರಗಳಲ್ಲಿ ಇಂದು ಹಳ್ಳಿಯ ವಾತಾವರಣವಿರುವುದನ್ನು ನಾವು ಕಾಣಬಹುದು.

ನಮ್ಮ ಹಿರಿಯರಿಗೆ ಪೂರ್ವಜರಿಂದ ಬಳುವಳಿಯಾಗಿ ಬಂದ ವಸ್ತುಗಳು ಮತ್ತು ಹಿರಿಯರ ಜ್ಞಾನ ಸಂಪತ್ತು ಉಳಿಯಬೇಕು. ಅವು ತಮ್ಮ ಮತ್ತು ತಮ್ಮ ಅನಂತರದ ತಲೆಮಾರಿನವರ ಬದುಕಿಗೆ ಇಂಬಾಗ ವಾಗಬೇಕೆಂಬ ಅತೀವ ಆಸೆ, ಕಳಕಳಿಗಳಿದ್ದವು. ಅದಕ್ಕಾಗಿ ಅವರು ನಾನಾ ಮಾರ್ಗಗಳನ್ನು ಅವಲಂಬಿಸಿದ್ದರು. ವಿಧಿ – ನಿಷೇಧಗಳ ತಂತ್ರ ಅವುಗಳಲ್ಲೊಂದು. ಹೀಗೆಯೇ ಮಾಡಬೇಕು, ಹಾಗೆ ಮಾಡಬಾರದೆಂಬ ಈ ವಿಧಿ-ನಷೇಧಗಳು ಜನಪದ ಬದುಕಲ್ಲಿ ಹಾಸು ಹೊಕ್ಕು ಇಂಥ. ನಾನಾ ವಿಧಾನಗಳಲ್ಲಿ ಉಳಿಸಿಕೊಂಡ ವಸ್ತುಗಳಿಂದ ಮತ್ತು ಜ್ಞಾನಗಳಿಂದ ಅದರ ಬದುಕನ್ನು "ಹಳೆಬೇರಿನಿಂದ ಹೊಸ ಚಿಗುರು" ಎಂಬ ನ್ಯಾಯದಲ್ಲಿ ರೂಪಿಸಿಕೊಂಡು ಶತಮಾನಗಳ ಕಾಲ ಹಾಗೆ ಮುಂದುವರಿಯಿತು. ಇತ್ತೀಚೆಗೆ ನಾನಾ ಕಾರಣಗಳಿಂದ ಜನಪದ ಬದುಕು ತೀವ್ರಗತಿಯಲ್ಲಿ ಪಲ್ಲಟಗೊಳ್ಳುತ್ತಿದ್ದು, ಅನೇಕ ಚಿಂತಕರ ತಲ್ಲಣಕ್ಕೆ ಕಾರಣವಾಗಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ಸುಸಜ್ಜಿತ ಜಾನಪದ ವಸ್ತುಸಂಗ್ರಹಾಲಯಗಳು ತುರ್ತಾಗಿ ಕಾರ್ಯ ಪ್ರವೃತ್ತವಾಗಬೇಕಾಗಿವೆ.

ಸಮಾಜದ ಎಲ್ಲಾ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣ ಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ಅಧ್ಯಯನದ ಮೂಲ ಧ್ಯೇಯವಾಗಿದೆ. ಮನುಷ್ಯ ನಾಗರಿಕತೆಯಿಂದ ಮುಂದುವರೆದರೂ ಸಹ ಅವನ ಮೇಲೆ ಜಾನಪದ ಪ್ರಭಾವ ಸಾಕಷ್ಟಿರುತ್ತದೆ. ಇದು ಜೀವಂತ ಪಳಿಯುಳಿಕೆಯಾಗಬಲ್ಲದೆ ಹೊರತೂ ನಶಿಸುವುದಿಲ್ಲ. ಯಾವುದಾದರೂ ರೂಪದಲ್ಲಿ ಮತ್ತೆ ಗರಿಗೆದರಿ ನಳನಳಿಸುತ್ತೆ ಜಾನಪದ ಒಂದಲ್ಲ ಒಂದು ರೀತಿಯಲ್ಲಿ ಉಸಿರಾಡುತ್ತಿದೆ.

ಉಪಸಂಹಾರ

ಜನಪದರು ಬಳಸುತ್ತಿದ್ದಂತಹ ವಸ್ತುಗಳನ್ನು ಅಧ್ಯಯನ ಮಾಡುವುದು ಮುಖ್ಯವಾದದ್ದು. ಇಂತಹ ಅಧ್ಯಯನವನ್ನು ನಾವು ಏಕೆ ಮಾಡುತ್ತೇವೆ? ಎಂಬ ಪ್ರಶ್ನೆಯನ್ನು ಕುರಿತು ಚರ್ಚಿಸಿದಾಗ ನಮಗೆ ಅನೇಕ ರೀತಿಯಲ್ಲಿ ಉತ್ತರ ದೊರೆಯುತ್ತದೆ. ಇಂದಿನ ಪ್ರಸ್ತುತ ಆಧುನಿಕ ಯುಗದಲ್ಲಿ ನಮಗೆ ಯಾವುದೇ ವಿಷಯವಾಗಲಿ, ವಸ್ತುವಾಗಲಿ ಸಿಕ್ಕಾಗ, ಕೇವಲ ವಸ್ತುವಿಷಯವೆಂದು ಪರಿಗಣಿಸಿದಾಗ ಅದರ ಬಗೆಗೆ ನಮಗೆ ಯಾವುದೇ ವೈಶಿಷ್ಟ್ಯವು ತಿಳಿಯದೇ ಹೋಗುತ್ತದೆ. ಆ ವಸ್ತು ವಿಷಯದ ಬಗ್ಗೆ ಅಧ್ಯಯನವನ್ನು ಕೈಗೊಂಡಾಗ ಅದರ ಮಹತ್ವ, ವೈಶಿಷ್ಟ್ಯತೆ ಹಾಗೂ ಉಪಯೋಗಗಳು ತಿಳಿಯುತ್ತವೆ.

ಜಾನಪದ ಸಂಸ್ಕೃತಿಯನ್ನು ರಾಷ್ಟ್ರದ ಸ್ವತ್ತು, ಸಾಂಸ್ಕೃತಿಕ ಸಂಪತ್ತು ಎಂದು ಭಾವಿಸಬೇಕಾಗಿದೆ. 'ಇತಿಹಾಸವನ್ನು ಮರೆತವನು ಇತಿಹಾಸವನ್ನು ಸೃಷ್ಠಿಸಲಾರ' ಎಂಬ ಮಾತಿನಂತೆ ನಮ್ಮ ನೆಲದ ಸತ್ವವನ್ನು ಹೀರಿಕೊಂಡು ಅಸ್ತಿತ್ವ ಪಡೆದ ಜಾನಪದವನ್ನು ಉಳಿಸಕೊಳ್ಳುವ, ಪ್ರಯತ್ನಗಳು ಆಗಬೇಕಾಗಿದೆ. ಪ್ರಸಾರ ಮಾಧ್ಯಮಗಳ ಹಾವಳಿ, ನಗರೀಕರಣ, ಕೈಗಾರೀಕರಣ, ವಲಸೆ ಹೋಗುವುದು, ದೈನಂದಿನವಸ್ತುಗಳ ಬಳಕೆಯ ಪಲ್ಲಟ, ಪಾಶ್ಚಿಮಾತ್ಯ ಸಂಸ್ಕೃತಿಯ ವ್ಯಾಮೋಹ ಇಂತಹ ಸಂಗತಿಗಳೇ ಜಾನಪದ ಸಂಸ್ಕೃತಿಗೆ ಬಹುದೊಡ್ಡ ಪೆಟ್ಟು ನೀಡಿವೆ.ಇದರ ಫಲವಾಗಿ ಜಾನಪದೀಯರ ಬದುಕಿನ ದಿನಬಳಕೆಯ ವಸ್ತುಗಳು ಪಲ್ಲಟಗೊಂಡು ಪ್ರಾಚೀನ ಮಾದರಿಯ ಪರಿಕರಗಳು ಕಣ್ಮರೆಯಾಗುತ್ತಿವೆ. ರಾಗಿ ಕಲ್ಲಿನ ಜಾಗದಲ್ಲಿ ಹಿಟ್ಟಿನ ಯಂತ್ರಗಳು, ಭತ್ತದ ಕೊಟ್ಟಣದ ಬದಲು ಭತ್ತದಗಿರಾಣಿಗಳು ಮುಂತಾದ ವ್ಯವಸಾಯ ಸಂಬಂಧಿ ವಸ್ತುಗಳು, ಗೃಹೋಪಯೋಗಿಸಲಕರಣೆಗಳು, ಕರಕುಶಲ ವಸ್ತುಗಳು ಅಸ್ತಿತ್ವವನ್ನು ಕಳೆದುಕೊಂಡು ಅಪೂರ್ವವಾದ ಜನಪದೀಯ ಸಾಧನಗಳು ಹೇಳ ಹೆಸರಿಲ್ಲದಂತೆ ಮರೆಯಾಗುತ್ತಿವೆ.

ಆಧುನಿಕ ಭಾರತ ಯಂತ್ರ ನಾಗರಿಕತೆ ಮತ್ತು ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿರುವುದರಿಂದ ನಮ್ಮ ಪರಂಪರಾಗತ ಸಂಸ್ಕೃತಿ, ಸಂಪ್ರದಾಯ, ಆಚರಣೆಗಳು ಕಣ್ಮರೆಯುಗುತ್ತಿರುವುದು ವಿಷಾದದ ಸಂಗತಿ. ನಾಗರಿಕತೆಯ ಅತಿವೇಗದ ಕಾಲ್ತುಳಿತಕ್ಕೆ ಸಿಲುಕಿ ನಶಿಸಿ ಹೋಗುತ್ತಿರುವ ಜಾನಪದ ಸಂಸ್ಕೃತಿಯನ್ನು ಸಂಗ್ರಹಕಾರ್ಯ, ಅಧ್ಯಯನ ಮತ್ತು ಬಳಕೆಯ ರೂಪದಲ್ಲಿ ಉಳಿಸಿಕೊಳ್ಳದೆ ಹೋದರೆ ಮುಂದಿನ ತಲೆಮಾರಿಗೆ ಜಾನಪದ ಜಗತ್ತಿನ ವಿವಿಧ ನೆಲೆಗಳು ಅಪರಿಚಿತವಾಗಿಯೇ ಉಳಿದು ಬಿಡುತ್ತವೆ.

ಮಾನವ ಬದುಕಿನ ವಿವಿಧ ಅನುಭವಗಳ ದೊಡ್ಡಗಣಿಯಾದ ಜಾನಪದ ಕ್ಷೇತ್ರದ ವ್ಯಾಪ್ತಿ ತುಂಬಾ ವಿಸ್ತಾರವಾದದ್ದು. ಇದು ಕಥೆ, ಗೀತೆ, ಗಾದೆ, ಒಗಟು ನಂಬಿಕೆ, ಹಬ್ಬ ಆಚರಣೆಗಳು, ಕಲೆಗಳನ್ನಲ್ಲದೆ,ಉಡುಗೆ–ತೊಡುಗೆ, ಆಹಾರಪದಾರ್ಥಗಳೂ ಹಾಗೂ ದೈನಂದಿನ ಬದುಕಿನಲ್ಲಿ ಬಳಸುವ ವಸ್ತುಗಳು ಇವೆಲ್ಲವೂ ಇದು ಆಧುನಿಕತೆಯ ಹೆಸರಿನಲ್ಲಿ ಜನರ ಬದುಕಿನಿಂದ ದೂರ ಸರಿಯುತ್ತಿವೆ. ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ರೂಪಿಸುವಲ್ಲಿ ತನ್ನದೇ ಆದ ಪಾತ್ರ ನಿರ್ವಹಿಸಿರುವ ಜಾನಪದ ಸಾಂಸ್ಕೃತಿಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಹೊಸ ಪೀಳಿಗೆ ಚಿಂತಿಸಬೇಕಾಗಿದೆ. ಪರಿಸರಕ್ಕೆ

ಹಾನಿಯಾಗದ ಅತ್ಯಂತ ವೈಜ್ಞಾನಿಕವಾದ ಪರಿಕರಗಳನ್ನು ಬಳಸುತ್ತಿದ್ದ ಜನಪದ ಸಾಂಸ್ಕೃತಿಯಿಂದ ದೂರ ಸರಿಯುತ್ತಿರುವ ನಾಗರಿಕ ಸಮಾಜ ಇಂದು ಎದುರಿಸುತ್ತಿರುವ ಹಲವಾರು ಸವಾಲುಗಳಿಗೆ ಪರಿಸರದ ದುರ್ಬಳಕೆಯೂ ಕಾರಣ ಎಂಬುದನ್ನು ಅರ್ಥೈಸಿ ಕೊಳ್ಳಬೇಕಾದ ತುರ್ತಿದೆ.

ಜನಪದರು ಬಳಸುತ್ತಿದ್ದಂತಹ ವಸ್ತುಗಳು ಇಂದು ನಮ್ಮ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಪ್ರತಿಯೊಂದು ಹಳ್ಳಿಯಲ್ಲೂ ಅವರದೇ ಆದ ಸಂಸ್ಕೃತಿಯನ್ನು ಪಾಲನೆ ಮಾಡುತ್ತಿದ್ದಾರೆ. ಜನಪದರು ಬಳಸುತ್ತಿದ್ದಂತಹ ಗೃಹೋಪಯೋಗಿ ವಸ್ತುಗಳು, ಪೂಜೆಗೆ ಸಂಬಂಧಿಸಿದ ವಸ್ತುಗಳು, ವ್ಯವಸಾಯಕ್ಕೆ ಸಂಬಂಧಿಸಿದ ವಸ್ತುಗಳು ಇತ್ಯಾದಿ ಅಂಶಗಳು ಅಲ್ಲಿನ ಪ್ರದೇಶಗಳ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಇಂತಹ ಎಲ್ಲಾ ವಿಚಾರಗಳನ್ನು ಹೇಳುವಾಗ ನಮಗೆ ಹೆಮ್ಮೆ ಎನಿಸುತ್ತದೆ.

ನಾನು ಜನಪದರು ಬಳಸುತ್ತಿದ್ದಂತಹ ವಸ್ತುಗಳ ವಿಚಾರಗಳ ತಿರುವಿಕೆಯನ್ನು ಮಾಡಿದ್ದೇನೆ. ಅಂದರೆ ನಾನು ನನ್ನ ಅವಧಿಕ ಕಾರ್ಯದಲ್ಲಿ ಜನಪದರು ವಿವಿಧ ಕ್ಷೇತ್ರಗಳಲ್ಲಿ ಬಳಸುತ್ತಿದ್ದಂತಹ ವಸ್ತುಗಳನ್ನು ಕುರಿತು ಅಧ್ಯಯನ ನಡೆಸಿದ್ದೇನೆ. ಈ ಅವಧಿಕ ಕಾರ್ಯವು ಮರೆಯಾಗುತ್ತಿರುವ ವಿಚಾರಗಳನ್ನು ನೆನಪಿಸುವಂತಹ ಕಾರ್ಯವಾಗಿದೆ. ಅಲ್ಲದೇ ಯುವ ಜನತೆಯೂ ಸಹ ಜನಪದರು ಹಿಂದೆ ಬಳಸುತ್ತಿದ್ದಂತಹ ಅನೇಕ ವಸ್ತುಗಳ ಬಗ್ಗೆ ತಿಳಿದುಕೊಳ್ಳಲು ಸಹಾಯಕವಾಗಿದೆ. ಈ ಅಧ್ಯಯನವು ಜನಪದ ಕ್ಷೇತ್ರದ ಶ್ರೇಷ್ಠತೆಗೆ ಕಾರಣವಾಗಿದೆ. ನನ್ನ ಅವಧಿಕ ಕಾರ್ಯದ ವಿಷಯವಾದ 'ಜನಪದ ವಸ್ತುಗಳು ಮತ್ತು ಉಪಕರಣಗಳು' ಇಂದಿನ ಜನತೆಗೆ ಹಾಗೂ ಮುಂದಿನ ಪೀಳಿಗೆಗೆ ತಿಳಿಸಿಕೊಡುವಂತಹ ಮಾಹಿತಿಯನ್ನು ಒಳಗೊಂಡಿದೆ. ಪ್ರಾಣಿಗಳಲ್ಲಿ ಅತ್ಯಂತ ಬುದ್ಧಿವಂತ ಪ್ರಾಣಿ ಮನುಷ್ಯ. ಈತನು ಪ್ರಕೃತಿಯಲ್ಲಿ ಏನು ಬೇಕಾದರೂ ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಅದರಲ್ಲಿಯೂ ಈಗಿನ ಆಧುನಿಕ ಯುಗದ ಮನುಷ್ಯ ಎಲ್ಲಾ ರೀತಿಯಲ್ಲೂ ಪ್ರಗತಿಯನ್ನು ಸಾಧಿಸಿದ್ದಾನೆ. ಏನು ಬೇಕಾದರೂ ಸೃಷ್ಟಿ ಮಾಡುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಹೊಸದನ್ನು ಸೃಷ್ಟಿಸುವಾಗ ಅದನ್ನು ಉಪಯೋಗಿಸಿಕೊಂಡವರು ಪೀಳಿಗೆಯವರಿಗೆ ಉಳಿಸಿಕೊಡುವುದೇ ಆ ವ್ಯಕ್ತಿಗೆ ನಾವು ಕೊಡುವ ಗೌರವವಾಗಿದೆ. ನಮ್ಮ ಹಿಂದಿನವರು ಕೊಡುಗೆಗಳನ್ನು ಜೋಪಾನವಾಗಿಟ್ಟುಕೊಂಡು ಅದನ್ನು ಪೋಷಿಸುವ ಅದರ ಮೌಲ್ಯಗಳನ್ನು ಎಲ್ಲರಿಗೂ ತಿಳಿಸುವುದು ನಮ್ಮ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಜನಪದರು ಬಳಸುತ್ತಿದ್ದ ವಸ್ತುಗಳನ್ನು ಕುರಿತು ಅಧ್ಯಯನ ನಡೆಸುವುದು ಅಥವಾ ಕ್ಷೇತ್ರಕಾರ್ಯ ಕೈಗೊಳ್ಳುವುದು ಪ್ರತಿಯೊಬ್ಬ ಸಂಶೋಧಕನ ಆದ್ಯ ಕರ್ತವ್ಯವಾಗಿದೆ.

ಅನುಬಂಧ

೧. ವಕ್ತೃಗಳ ವಿವರ

ಕ್ರಮ ಸಂಖ್ಯೆ	ಹೆಸರು	ವಯಸ್ಸು	ವೃತ್ತಿ	ಊರು
೧	ಡಾ. ರಂಗಯ್ಯ	೬೩	ವೈದ್ಯರು	ಶಿವಳ್ಳಿ
೨	ಮಾದಮ್ಮ	೪೫	ಕೂಲಿ	ಕೆರಗೋಡು
೩	ರಾಮಪ್ಪ	೩೭	ಅಕ್ಕಸಾಲಿಗ	ಚಂದಗಾಲು
೪	ಚಿನ್ನಮ್ಮ	೫೪	ಮನೆಗೆಲಸ	ಕಡಬ
೫	ಮಾದೇಗೌಡ	೫೦	ವ್ಯವಸಾಯ	ಬೂದನೂರು
೬	ಚಂದಮ್ಮ	೫೭	ಶಿಕ್ಷಕಿ	ಕೊತ್ತತ್ತಿ
೭	ಕಾರಯ್ಯ	೪೦	ಗಾರೆಕೆಲಸ	ಹಲಗೂರು
೮	ರುದ್ರೇಶ	೩೦	ಮೀನುಗಾರ	ಬೆಳ್ಳೂರು
೯	ಕೆಂಪಮ್ಮ	೩೭	ಗೃಹಿಣಿ	ಹೊಸಕೆರೆ
೧೦	ಗೋವಿಂದರಾಜು	೨೩	ಬಡಗಿ	ಕೊಪ್ಪ
೧೧	ಮಹದೇವಸ್ವಾಮಿ	೨೫	ಪುರೋಹಿತ	ಸಂತೇಬಾಚಹಳ್ಳಿ
೧೨	ನಾಗೇಶ್	೪೫	ಜನಪ್ರತಿನಿಧಿ	ಬೆಳಗೊಳ
೧೩	ಬೋರಪ್ಪ	೫೨	ಕುಂಬಾರ	ಕಿಕ್ಕೇರಿ
೧೪	ನಂಜೇಗೌಡ	೬೩	ಕಲಾವಿದ	ಮೇಲುಕೋಟೆ
೧೫	ನಾಗರಾಜು	೩೮	ಕಾರ್ಮಿಕ	ಅರಕೆರೆ
೧೬	ಕಾಳೇಗೌಡ	೩೧	ಪಶುಪಾಲನೆ	ಕೀಲಾರ
೧೭	ಸಾವಿತ್ರಮ್ಮ	೬೧	ಹಾಡಿಗಾರಿಕೆ	ಆನೆಕೆರೆ
೧೮	ಸುರೇಖ	೩೨	ಬಟ್ಟೆ ಹೊಲಿಯುವವರು	ಚಿಕ್ಕಬಳ್ಳಿ
೧೯	ನಂಜಮ್ಮ	೭೦	ನಾಟಿ ವೈದ್ಯೆ	ಬೂಕನಕೆರೆ
೨೦	ಪಲ್ಲವಿ	೨೫	ವ್ಯಾಪಾರಿ	ಬಿಂಡಗನವಿಲೆ

೨. ಛಾಯಾಚಿತ್ರಗಳು













೩. ಪರಾಮರ್ಶನ ಗ್ರಂಥಗಳು

೧. ಅಂಬಳಿಕೆ ಹಿರಿಯಣ್ಣ	೨೦೦೪	ಕನ್ನಡ ಜಾನಪದ ನಿಘಂಟು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ
೨. ಕ್ಯಾತನ ಹಳ್ಳಿರಾಮಣ್ಣ	೨೦೦೦	ಜಾನಪದ ವಿಹಾರ ಕರ್ನಾಟಕ ಸಂಘ ಮಂಡ್ಯ
೩. ಜವರೇಗೌಡ . ದೇ	೨೦೦೫	ಜಾನಪದ ಅಧ್ಯಯನ ಡಿ.ವಿ.ಕೆ ಮೂರ್ತಿ ಪ್ರಕಾಶನ ಮೈಸೂರು
೪. ನಾಗಣ್ಣ. ಜಿ. ಪಿ	೨೦೦೨	ಜಾನಪದ ಸಂಗಾತಿ ಕಾವ್ಯ ಕಾರಣ ಪ್ರಕಾಶನ ಗುಲ್ಬರ್ಗಾ
೫. ನಾಯಕ. ಡಿ. ಬಿ (ಪ್ರ.ಸಂ)	೨೦೦೫	ಕನ್ನಡ ಜಾನಪದ ನಿಘಂಟು ಪದ ಸಂಸ್ಕೃತಿ ಕೋಶ ಸಂಪುಟ ೧ ಕನ್ನಡ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ
೬. ನಾಯಕ ಡಿ. ಬಿ. (ಪ್ರ.ಸಂ)	೨೦೦೭	ಕನ್ನಡ ಜಾನಪದ ನಿಘಂಟು ಪದ ಸಂಸ್ಕೃತಿ ಕೋಶ ಸಂಪುಟ ೨ ಕನ್ನಡ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ

೭. ನಾಯಕ. ಡಿ. ಬಿ (ಪ್ರ.ಸಂ) ೨೦೧೭ ಕನ್ನಡ ಜಾನಪದ ನಿಘಂಟು
ಪದ ಸಂಸ್ಕೃತಿ ಕೋಶ
ಸಂಪುಟ ೩
ಕನ್ನಡ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ

೮. ಪರಮಶಿವಯ್ಯ ಜೀ. ಶಂ ೨೦೧೨ ದಕ್ಷಿಣ ಕರ್ನಾಟಕ ಜನಪದ ಕಾವ್ಯ
ಪ್ರಕಾರಗಳು
ಸಾಗರ್ ಪ್ರಕಾಶನ
ಬೆಂಗಳೂರು

೯. ಮಳಲಿ ವಸಂತಕುಮಾರ್ ೨೦೧೮ ಜಾನಪದ ಜಾಗೃತಿ
ಸ್ವಪ್ನ ಬುಕ್ ಹೌಸ್
ಬೆಂಗಳೂರು

೧೦. ರಮೇಶ್ ಸಾ. ಚಿ (ಸಂ) ೨೦೧೩ ಜಾನಪದ ವಸ್ತು ಕೋಶ
ಕನ್ನಡ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ

೧೧. ರಾಗೌ ೨೦೦೯ ಜಾನಪದ ತತ್ವಾರ್ಥ ಪ್ರವೇಶ
ಕರ್ನಾಟಕ ಸಂಘ(ರಿ)
ಮಂಡ್ಯ

೧೨. ರಾಗೌ ೨೦೧೨ ಜಾನಪದ ಸಂಶೋಧನೆ
ತನುಮನ ಪ್ರಕಾಶನ
ಮೈಸೂರು